ಶ್ರೀಮತಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು): ಮಾನ್ಯ ಉಪಾಧ್ಯಕ್ಷರೆ, ದಿನಾಂಕ: 31.03.2013ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವಅಭಿಯಾಚನೆಗಳ ಕ್ರಮಾಂಕ-24ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿರುವ ಮೊಬಲಗನ್ನು ಸೇರಿ ಬೇಡಿಕೆಯ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ : 13– ಆಹಾರ ಮತ್ತು ನಾಗರೀಕ ಸರಬರಾಜು

ಶ್ರೀ ಎಸ್. ಸುರೇಶ್ ಕುಮಾರ್(ಶ್ರೀ ಡಿ.ಎನ್.ಜೀವರಾಜ್ ಅವರ ಪರವಾಗಿ): ದಿನಾಂಕ: 31.03.2013ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ-13ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿರುವ ಮೊಬಲಗನ್ನು ಸೇರಿ ಬೇಡಿಕೆಯ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ: 09,ಸಹಕಾರ

ಶ್ರೀ ಬಿ.ಜೆ.ಪುಟ್ಟಸ್ವಾಮಿ(ಸಹಕಾರ ಸಚಿವರು): ಮಾನ್ಯ ಉಪಾಧ್ಯಕ್ಷರೆ, ದಿನಾಂಕ: 31.03.2013ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ-09 ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿರುವ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಅನುದಾನ ಬೇಡಿಕೆಗಳನ್ನು ಮಂಡಿಸಲಾಯಿತು. ಈಗ ಶ್ರೀ ವಿ.ಮುನಿಯಪ್ಪನವರು ಮಾತನಾಡಿ.

ಶ್ರೀ ವಿ.ಮುನಿಯಪ್ಪ(ಶಿಡ್ಲಘಟ್ಟ): ಮಾನ್ಯ ಉಪಾಧ್ಯಕ್ಷರೆ, ಇವತ್ತು ನಿಯಮ 69ರ ಅಡಿಯಲ್ಲಿ ರಾಜ್ಯದಲ್ಲಿ ಬಹಳ ಅತ್ಯಂತ ಕ್ಲಿಷ್ಟ ಪರಿಸ್ಥಿತಿಯನ್ನು ತಂದಿರುವಂತಹ ಬರದ ಬಗ್ಗೆ ಚರ್ಚೆ ನಡೆಯುತ್ತಿದೆ. ಈಗಾಗಲೇ ನಮ್ಮ ನಾಯಕರು, ವಿಶೇಷವಾಗಿ ಮಾಜಿ,ಮುಖ್ಯಮಂತ್ರಿಗಳಾದಂತಹ ಮಾನ್ಯ

ಯಡಿಯೂರಪ್ಪನವರು ಮತ್ತು ಇತರ ಅನೇಕ ಸದಸ್ಯರು ಅವರದೇ ಆದಂತಹ ಸಲಹೆಗಳನ್ನೂ ಹಾಗೂ ಪರಿಹಾರಗಳನ್ನು ಕೈಗೊಳ್ಳಬಹುದು ಎಂದು ಸೂಚನೆ ಕೊಟ್ಟಿದ್ದಾರೆ. ಬರ ನಮ್ಮ ರಾಜ್ಯಕ್ಕೆ ಹೊಸದೇನಲ್ಲ. ನಾವು ಕಳೆದ 20–25 ವರ್ಷದಿಂದ ನೋಡುತ್ತಿದ್ದೇವೆ. ಪ್ರತಿವರ್ಷ ಕೂಡ ನಮ್ಮನ್ನು ಈ ಸಮಸ್ಯೆ ಕಾಡುತ್ತಿದೆ. ಅದರಲ್ಲೂ ನಮ್ಮ ಭಾಗ ಬಯಲು ಸೀಮೆ ಪ್ರದೇಶಕ್ಕೆ ಒಂದು ಶಾಪ. ಇದು ಯಾವಾಗ ವಿಮೋಚನೆಯಾಗುತ್ತದೆಂದು ಗೊತ್ತಿಲ್ಲ. ಅಂತಹ ಒಂದು ಶಾಪದಲ್ಲಿ ನಾವು ಸಿಲುಕಿದ್ದೇವೆ. ಪ್ರತಿವರ್ಷ ಕೂಡ ನಾವು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಪ್ರತಿವರ್ಷ ನಾವು ಆಳದಿಂದ ಆಳಕ್ಕೆ ಹೋಗುತ್ತಿದ್ದೇವೆ. ಇದು ನಮ್ಮಲ್ಲಿರುವಂತಹ ಪರಿಸ್ಥಿತಿ. ಆಳವಾಗಿ ಹೋಗುತ್ತಾ, ಹೋಗುತ್ತಾ ವಿಷ ಕುಡಿದು–ಕುಡಿದು ನಾವು ಅದಕ್ಕೆಒಗ್ಗಿಕೊಂಡು ಬಿಟ್ಟಿದ್ದೇವೆ, immune ಆಗಿಬಿಟ್ಟಿದ್ದೇವೆ. ಇಂತಹ ಅನಿವಾರ್ಯವಾದಂತಹ ಪರಿಸ್ಥಿತಿಯಲ್ಲಿ ಬಯಲು ಸೀಮೆಪ್ರದೇಶದ ಜನ ಇವತ್ತು ಅಲ್ಲಿ ವಾಸ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಅತ್ಯಂತ ಕಷ್ಟಕರವಾದಂತಹ ಜೀವನ ಎಲ್ಲಿಯಾದರೂ ನಡೆಸುತ್ತಿದ್ದಾರೆ, ಅದು ಬಯಲು ಸೀಮೆಯಲ್ಲಿರುವಂತಹ ಜನ, ದಯಮಾಡಿ ನೀವು ಇದನ್ನು ನೋಟ್ ಮಾಡಿಕೊಳ್ಳಬೇಕು. ಇಂತಹ ಒಂದು ಅತ್ಯಂತ ಗಂಭೀರವಾದಂತಹ, ಬಹಳ ಕಠಿಣವಾದಂತಹ ಬರಗಾಲ ನಮ್ಮನ್ನು ಕಾಡುತ್ತಿದೆ.ಬಹುಶಃ 40 ವರ್ಷದಿಂದ ಇಂತಹ ಬರಗಾಲ ಬಂದಿಲ್ಲವೆನ್ನುವಂತಹ ಮಾತನ್ನುನಾವೆಲ್ಲರೂ ಕೂಡ ಮಾತನಾಡುತ್ತಿದ್ದೇವೆ.ದುರಾದೃಷ್ಟ ಅದಕ್ಕೆ ಸೂಕ್ತವಾದಂತಹ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಅಥವಾ ಬರವನ್ನು ನಿಗ್ರಹಿಸತಕ್ಕಂಥ ಕಾರ್ಯಕ್ರಮಗಳನ್ನು ಯಾವ ಒಂದು ವೇಗದಲ್ಲಿ ತೆಗೆದುಕೊಂಡು ಹೋಗಬೇಕಾಗಿತ್ತೋ ಅದಕ್ಕೆ ಸರ್ಕಾರ ಗಮನ ಕೊಡಲಿಲ್ಲವೆನ್ನುವುದು ನಮ್ಮೆಲ್ಲರ ನೋವು. ಸರ್ಕಾರಕ್ಕೆ ಗೊತ್ತಿದೆ, ಸರ್ಕಾರಕ್ಕೆ ಪರಿಸ್ಥಿತಿ ಗೊತ್ತಿಲ್ಲವೆಂದು ಏನಿಲ್ಲ, ಅವರೂ ಅವರವರ ಕ್ಷೇತ್ರದಲ್ಲಿ ಅನುಭವಿಸುತ್ತಿದ್ದಾರೆ. ಆದರೆ ಅನಿವಾರ್ಯ ಕಾರಣ ಅದು ಎಲ್ಲರಿಗೂ ಗೊತ್ತಿರುವಂತಹ ಬಹಿರಂಗ ಗುಟ್ಟು. ಈ ಅಸ್ಥಿರತೆಯ ವಾತಾವರಣ ಕಳೆದ ಐದಾರು ತಿಂಗಳು ನಿರ್ಮಾಣವಾಗಿ ಸರ್ಕಾರ ಜೀವಂತವಾಗಿದೆ ಎಂದು ಯಾರೂ ಹೇಳಿಕೊಳ್ಳುವುದಿಲ್ಲ. ಜನ ಸಾಮಾನ್ಯರು ಈ ರಾಜ್ಯದಲ್ಲಿ ಸರ್ಕಾರ ಇದೆಯೇ? ಇಂತಹ ಒಂದು ಪರಿಸ್ಥಿತಿಯಲ್ಲಿಯೂ ಅವರು ನಿದ್ದೆ ಹೋಗುತ್ತಿದ್ದಾರಲ್ಲ,ಇಂತಹಒಂದು ಪರಿಸ್ಥಿತಿಯಲ್ಲಿಯೂ ಕಿತ್ತಾಟ ಮಾಡುತ್ತಿದ್ದಾರಲ್ಲ, ಇಂತಹ ಪರಿಸ್ಥಿತಿ ಇದ್ದಾಗ ಅವರು ಅದರ ಬಗ್ಗೆ ನಿಗಾ ವಹಿಸುವುದಕ್ಕೆಯೋಚನೆ ಮಾಡಲಿಲ್ಲವಲ್ಲವೆನ್ನುವಂತಹ ಮಾತುಇವತ್ತು ಜನರಲ್ಲಿ ತಾಂಡವಾಡುತ್ತದೆ. ಇಂತಹ ಒಂದು ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ಉದ್ಭವಿಸಿದೆ.

ಅದಕ್ಕೆ ಕೆಲವು package ಮೂಲಕ, ಬರಗಾಲ ಬಂದರೆ ತತ್‌ಕ್ಷಣ ಕುಡಿಯುವ ನೀರು ಕೊಡಬೇಕು. ದನಗಳಿಗೆ ಮೇವು ಸಂಗ್ರಹಣೆ ಮಾಡುವುದಕ್ಕೆ ಮುಂಜಾಗ್ರತೆ ಕ್ರಮ ತೆಗೆದುಕೊಂಡು ಪ್ರಿಸರ್ವ್ ಮಾಡಬೇಕು. ರೈತರ ಕಂದಾಯ ಮನ್ನಾ ಮಾಡಬೇಕು.ತದ ನಂತರ ರೈತರ ಅಲ್ಪಾವಧಿ ಮತ್ತು ದೀರ್ಘಾವದಿ ಸಾಲ ಏನಿರುತ್ತದೆ, ಅದರ ಬಡ್ಡಿ ಮನ್ನಾ ಮಾಡಿ, ಅಲ್ಪಾವಧಿ ಸಾಲದ ವಸೂಲಾತಿಯನ್ನು ಮುಂದಕ್ಕೆ ಹಾಕಬೇಕು. ಇದು ಬರಗಾಲದಲ್ಲಿ ಇರುವಂತಹ ಪ್ಯಾಕೇಜ್ ಈ ಪ್ಯಾಕೇಜ್ ಬಗ್ಗೆ ಸರ್ಕಾರಕ್ಕೆ ಒಂದು ಸ್ವಲ್ಪ ಕೂಡ ಚಿಂತನೆ ಇಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರುಮಾತಿಗೆ ಎಲ್ಲಾ ಮೇಜು ಕುಟ್ಟಿ ಸ್ವಾಗತ ಬೇರೆ ಮಾಡಿದ್ದಾರೆ. ಈಗಾಗಲೇ ಪತ್ರಿಕೆಯಲ್ಲೆಲ್ಲ ಬಂದಿದೆ. ಈ ವರ್ಷ ಒಂದು ಲಕ್ಷ ಕೋಟಿ ರೂಪಾಯಿ ಬಜೆಟ್ ಇದೆ. ಅದರಲ್ಲಿ 90 ಸಾವಿರ ಕೋಟಿ ರೂಪಾಯಿ ನಮ್ಮ ಬಜೆಟ್ ಎಂದು ತಿಳಿದುಕೊಂಡು ಬಿಡೋಣ, ಇನ್ನು 10 ಸಾವಿರ ಕೋಟಿ ರೂಪಾಯಿಯನ್ನು ಬರಗಾಲಕ್ಕೆ ಖರ್ಚು ಮಾಡೋಣ ಎಂದು ಸಲಹೆಯನ್ನು ಕೊಟ್ಟಿದ್ದಾರೆ. Most likely, chief minister ಜೊತೆ ಮಾತನಾಡಿಕೊಂಡು ಕೊಟ್ಟಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಅದರಿಂದ ನೀವ್ಯಾಕೆ ಹಿಂದಕ್ಕೆ ಹೋಗುತ್ತೀರಿ? ಆ ರೀತಿ ನೀವು ಹೇಳಿ ಬೆಂಬಲಿಸಿ.

ಶ್ರೀ ವಿ.ಮುನಿಯಪ್ಪ: ಮಾನ್ಯ ಉಪಾಧ್ಯಕ್ಷರೆ, ಇದು ಪದ್ಧತಿ. ಬರಗಾಲ ಬಂದರೆ package ಮಾಡಿ ತಕ್ಷಣ ಪರಿಹಾರ ಕೊಡುತ್ತಿದ್ದರು. ಆದರೆ ದುರಾದೃಷ್ಟ ಈಗ ಕುಡಿಯುವ ನೀರಿಗೆ ಅಲ್ಪಸ್ವಲ್ಪ ಕೊಡುತ್ತಿದ್ದರೆ. ಆದರೆ ಇವತ್ತುಬೋರ್‌ವೆಲ್ ಡ್ರಿಲ್ ಮಾಡಬೇಕೆಂದರೆ CEO ಅಪ್ರೂವಲ್ ಕೊಡಬೇಕೆಂದರೆ 15 ದಿವಸ ತೆಗೆದುಕೊಳ್ಳುತ್ತಾನೆ. ನಂತರ D.C ಗೆ ಎಲ್ಲಿಂದ ಪೈಪ್‌ಲೈನ್ ಹಾಕಬೇಕು ಎಂದು ಒಂದು ಹೊಸ ಎಸ್ಟಿಮೇಟ್ ಮಾಡಿ ಕೊಡಬೇಕು. ಅದಕ್ಕೆ ಒಂದರಿಂದ ಒಂದೂವರೆ ತಿಂಗಳು ಸಮಯವಾಗುತ್ತದೆ. ಇನ್ನು ವಿದ್ಯುತ್, ನಮ್ಮ ಹಳ್ಳಿಗಳ ವ್ಯಾಪ್ತಿಯಲ್ಲಿ ಬೋರ್‌ವೆಲ್‌ಗಳು success ಆಗುತ್ತಿಲ್ಲ, ಫೇಲ್ ಆಗುತ್ತಿದೆ. ಹೊರಗಡೆ ಹೋಗುತ್ತೇವೆ, ಹಳ್ಳ-ಕೊಳ್ಳಗಳಲ್ಲಿ ಹಾಕುತ್ತೇವೆ, ಕೆರೆಗಳಲ್ಲಿ ಹಾಕುತ್ತಿದ್ದೇವೆ. ಒಂದು ಅಥವಾ ಎರಡು ಕಿಲೋಮೀಟರ್ ಆಗುತ್ತಿದೆ. ಅದಕ್ಕೆ ಬೇಕಾದಂತಹ ವಿದ್ಯುತ್ ಸಾಮಾಗ್ರಿಗಳು ಏನಿವೆ ಒಂದೆರಡು ತಿಂಗಳಾದರೂ ಸರಿಯಾಗಿ ಬರುತ್ತಿಲ್ಲ. ಯಾವುದೋ ಒಂದು ಕಂಬ, ಎರಡು ಕಂಬ ಇರುವ ಕಡೆಗಳಲ್ಲಿ line ಹಾಕಿ temporary adjustment ತುರ್ತಾಗಿರುವಂಥ ಗ್ರಾಮಗಳಲ್ಲಿ ಮಾಡಿಕೊಳ್ಳುತ್ತಿದ್ದಾರೆ. ತುರ್ತು

ಇದ್ದರೂ ವಿದ್ಯುತ್ ಅನ್ನು ಪಡೆಯುವುದಕ್ಕೆ ಆಗದೇ ಇರುವಂಥ ದುರಾವಸ್ಥೆಯಲ್ಲಿ ಇವತ್ತು ನಾವಿದ್ದೇವೆ. ನಮ್ಮ ಕಡೆ ಕಂಬಗಳು 7,8,10,12 ಬೀಳುತ್ತಿವೆ, ಈ ಕಂಬಗಳ ಸಾಗಾಣಿಕೆ ಆಗುತ್ತಿಲ್ಲ, ಸರಿಯಾದ ಸಮಯದಲ್ಲಿ ಸಾಮಗ್ರಿಗಳನ್ನು ಒದಗಿಸುತ್ತಿಲ್ಲ. ಈಗ ಇನ್ನೊಂದು ದುರಾದೃಷ್ಟವೆಂದರೆ ಒಂದು ತಿಂಗಳ ಈ ಚೆಗೆ ವಿದ್ಯುತ್ ಇಲಾಖೆಯವರು ಒಂದು ಹೊಸ ಕಾನೂನನ್ನು ಮಾಡಿದ್ದಾರೆ. package ಮಾಡಿ contract ಕೊಟ್ಟಿದ್ದಾರೆ. ಇವರೇ ಎಲ್ಲಾ ಸಾಮಗ್ರಿಗಳನ್ನು ಖರೀದಿ ಮಾಡಿ ಬಿಲ್ ಕೊಡಬೇಕೆಂದು ಹೇಳಿದ್ದಾರೆ, ನಂತರ ಇವರಿಗೆ payment ಮಾಡುತ್ತೇವೆಂದು ಹೇಳಿದ್ದಾರೆ. ಈ ರೀತಿ ಆದರೆ ಇದು ಒಂದು ತಿಂಗಳಲ್ಲ, ಎರಡು ತಿಂಗಳಾಗುತ್ತದೆ. ನಾನು ಈ ವಿಷಯವಾಗಿ ತಮ್ಮ ಮುಖಾಂತರ ಮಾನ್ಯ ವಿದ್ಯುತ್ ಮಂತ್ರಿಯವರನ್ನು ಒತ್ತಾಯ ಮಡುತ್ತೇನೆ. ತಾವು ದಯಮಾಡಿ ಈ package ಅನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಲಾಖೆಯವರು ಮೊದಲಿನಿಂದಲೂ ಯಾವ ರೀತಿಯಾಗಿ ಸಾಮಗ್ರಿಗಳನ್ನು ಒದಗಿಸುತ್ತಿದ್ದರೋ, ಅದೇ ರೀತಿಯಲ್ಲಿ ಒದಗಿಸಿ ತತ್‌ಕ್ಷಣ ಕುಡಿಯುವ ನೀರಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು ನೀರನ್ನು ಕೊಡತಕ್ಕಂತಹ ಕೆಲಸ ವಾಗಬೇಕು. ಈಗ 2-3 ತಿಂಗಳು delay ಆಗುತ್ತಿದೆ, ಇದು ನಮಗೆ ಇರುವಂಥ ಪರಿಸ್ಥಿತಿ, ವಿದ್ಯುತ್ ಇಲಾಖೆಯವರು ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು ಬೇರೆ ವಿಷಯವನ್ನು ಮಾತನಾಡುತ್ತಿದ್ದಾರೆ, ಅವರುನಾನು ಪ್ರಸ್ತಾಪ ಮಾಡಿರುವ ವಿಷಯವನ್ನು ಕೇಳಿಸಿಕೊಂಡರೋ ಇಲ್ಲವೋ ಗೊತ್ತಿಲ್ಲ. ಇದು ಬಹಳ ತೊಂದರೆ ಇರುವಂಥದ್ದು.

ಉಪಾಧ್ಯಕ್ಷರು: ಮಾನ್ಯ ಸಚಿವರೆ, ಮಾನ್ಯ ಮುನಿಯಪ್ಪನವರು ವಿದ್ಯುತ್ ಸಚಿವರ ಗಮನ ಸೆಳೆಯುತ್ತಿದ್ದಾರೆ.

ಶ್ರೀ ವಿ.ಮುನಿಯಪ್ಪ: ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್ ಇಲಾಖೆಯಲ್ಲಿ ಒಂದು ಹೊಸ ಕಾನೂನನ್ನು ಮಾಡಿದ್ದಾರೆ. ಅದು ಏನೆಂದರೆ, ಕುಡಿಯುವ ನೀರಿಗೆ package ಮಾಡಿದ್ದಾರೆ. ಇವರು package ಮುಖಾಂತರ ಸಾಮಾಗ್ರಿಗಳನ್ನು ತಂದು ಹಾಕಿದ ಮೇಲೆ bill payment ಮಾಡುವುದೆಂದು ಮಾಡಿದ್ದಾರೆ. ಆ package ನವರು ಹೊಸದಾಗಿ ಒಂದು tender ಹಾಕಿ, ಅದು process ಆಗಿ, ಅವರು ಸಾಮಗ್ರಿಗಳನ್ನು ಖರೀದಿ ಮಾಡಿ, ಅವರು ತಂದು ಹಾಕಬೇಕಾದರೆ ನಮ್ಮ local ನಲ್ಲಿ ಅಂಥ stable contractors ಯಾರೂ ಇಲ್ಲ, ಎಲ್ಲಾ electrical contractor ಇರುವವರು ಅವರು ಯಾರೂ ಬರುವುದಿಲ್ಲ, ದೊಡ್ಡ ದೊಡ್ಡ parly ಯವರು ಬರುತ್ತಾರೆ. ಅವರು ಒಂದು

package contract ತೆಗೆದುಕೊಂಡು, ನಮಗೆ ನೀರನ್ನು ಸರಬರಾಜು ಕೊಡಬೇಕೆಂದರೆ ಒಂದು ತಿಂಗಳು, ಎರಡು ತಿಂಗಳುಗಳಾಗುತ್ತದೆ. ದಯವಿಟ್ಟು ತಾವು ಮೊದಲು ಯಾವ systemನಲ್ಲಿ ಮಾಡುತ್ತಿದ್ದರೋ, ಆ system ಮುಖಾಂತರ ತಕ್ಷಣ ತುರ್ತಾಗಿ ಸಾಮಗ್ರಿಗಳನ್ನು ಒದಗಿಸುವಂಥಕೆಲಸವನ್ನು ದಯಮಾಡಿಮಾಡಿ. ಇದು ವಿದ್ಯುತ್ ಇಲಾಖೆಯಿಂದ ಒಂದು ತಿಂಗಳು, ಎರಡು ತಿಂಗಳು ತಡವಾಗುತ್ತಿದೆ. ನಮ್ಮ ಕಡೆ ಊರಿನ ಒಳಗೆ ಕೆಲವು ಹಳ್ಳಿಗಳಲ್ಲಿ ಹತ್ತು ಬೋರ್‌ವೆಲ್‌ಗಳನ್ನು ಹಾಕಿದ್ದೇವೆ. ಇದರಲ್ಲಿ ನೀರು ಸಿಗುತ್ತಿಲ್ಲ, ನೀರು ಸಿಕ್ಕರೂ ಬಹಳ ದಿವಸಗಳು ಇರುವುದಿಲ್ಲ. ಆದ್ದರಿಂದ ಕೆರೆಗಳಲ್ಲಿ, ಹಳ್ಳಗಳಲ್ಲಿ ಹಾಕಿ ಎಂದು ಹೇಳುತ್ತಿದ್ದಾರೆ. ಅಲ್ಲಿ ಹೋಗಿ ವಿದ್ಯುತ್ತನ್ನು ತರುವಂಥದ್ದೇ ಒಂದು ದೊಡ್ಡ ಸಮಸ್ಯೆ ಆಗಿದೆ. ಕುಡಿಯುವ ನೀರು ಅಪರೂಪಕ್ಕೆ ಸಿಕ್ಕರೂ, ಅದನ್ನು ತರುವುದಕ್ಕೆ ಬಹಳ ಕಷ್ಟವಾಗಿದೆ. ನಾವು ಇಂಥ ಬಹಳ ಗಂಭೀರವಾದಂಥ ಪರಿಸ್ಥಿತಿಗಳನ್ನು ಎದುರಿಸುತ್ತಿದ್ದೇವೆ.ಆದರೆ ದುರಾದೃಷ್ಟ ಏನಾಗಿದೆಯೆಂದರೆ, ಸರ್ಕಾರ ಆಗಲಿ, ಅಧಿಕಾರಿಗಳಾಗಲಿ ಇದನ್ನು ಯಾರೂ ಗಂಭೀರವಾಗಿ ತೆಗೆದುಕೊಂಡಿಲ್ಲ. ಇದು ಮಾತ್ರ ಸತ್ಯ ಸತ್ಯವಾಗಿದೆ. ನಾವು ಇಂಥ ಒಂದು ಪರಿಸ್ಥಿತಿಯನ್ನು ಯಾವತ್ತೂ ನೋಡಿಲ್ಲ, ಪರಿಸ್ಥಿತಿ ಇಷ್ಟು ಗಂಭೀರವಾಗಿದ್ದರೂ ಸರ್ಕಾರ ಏನೂ ನಡೆಯದೇ ಇರುವ ರೀತಿಯಲ್ಲಿ ಇದೆ. ಅದಕ್ಕೆ ತಕ್ಕಹಾಗೆ ತಾಳ ಹಾಕುವಂಥ ಅಧಿಕಾರಿ ವರ್ಗದವರು ಇದ್ದಾರೆ, ಯಾರೂ serious ಆಗಿ ತೆಗೆದುಕೊಂಡಿಲ್ಲ. ನಾವು ಇಂಥ ಒಂದು ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ದಯವಿಟ್ಟುಈ ಬರಗಾಲದ ಪರಿಸ್ಥಿತಿಯನ್ನು ನಿಭಾಯಿಸುವುದರಲ್ಲಿ ನಿರ್ಲಕ್ಷ್ಯ ಬೇಡ. ತಾವು ತತ್‌ಕ್ಷಣ ಕುಡಿಯುವ ನೀರಿಗೆ ಏನು ಆದ್ಯತೆಯನ್ನು ಕೊಡಬೇಕೋ ಅದನ್ನು ಕೊಡಬೇಕು.ದನಕರುಗಳಿಗೆ ಮೇವು ಒದಗಿಸುವಂಥದ್ದು ಆಗಬೇಕು. ಇವತ್ತು ಮಳೆ ಬಂದರೂ ದನಕರುಗಳಿಗೆ ಮೇವಿಗೆ ತೊಂದರೆ ಇದೆ. ಇವತ್ತು ಮೇವು ಸಿಗುವುದಿಲ್ಲ, ಪರಿಸ್ಥಿತಿ ಅಷ್ಟು ಗಂಭೀರವಾಗಿದೆ. ಇದಾರ ಜೊತೆಗೆ ಮಾಜಿ ಮುಖ್ಯಮಂತ್ರಿಯವರು ಹೇಳಿದಂತೆ ಎಲ್ಲಾ ರೈತರಿಗೂ ಸಾಲ ಮನ್ನಾ ಮಾಡಿದರೆ ಬಹಳ ಒಳ್ಳೆಯದು. ಯಾವ ರೈತರು ಸಾಲವನ್ನು ತೆಗೆದುಕೊಂಡಿಲ್ಲವೋ ಅವರಿಗೆಲ್ಲಾ ಸಮಾನವಾಗಿ 5,000, 10,000 ರೂ.ಗಳಂತೆ package system ಮಾಡಿ, ಸುವರ್ಣ ಭೂಮಿ ಯೋಜನೆಯಲ್ಲಿ 10,000 ರೂ.ಗಳೆಂದು ಏನು ಘೋಷಣೆಯನ್ನು ಮಾಡಿದ್ದಾರೆ. ಈ ಬಗ್ಗೆ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, 2-3 ತಿಂಗಳುಗಳಲ್ಲಿ ಈ ಹಣವನ್ನು ಬಿಡುಗಡೆ ಮಾಡಿ ರೈತರಿಗೆ ಪರಿಹಾರ ಕೊಡುವಂಥ ಕೆಲಸ ಮಾಡಿದರೆ ಸ್ವಲ್ಪ ಸುಧಾರಣೆಯಾಗುತ್ತದೆ.ನಮ್ಮ

ಬಯಲುಸೀಮೆಪ್ರದೇಶಕ್ಕೆ ಆದ್ಯತೆಕೊಡದೇ ಹೋದರೆ ಅಲ್ಲಿ ಅನ್ಯ ಮಾರ್ಗವಿಲ್ಲ. ಕಾರಣವೇನೆಂದರೆ, ಅಲ್ಲಿ ನೂರಕ್ಕೆ ನೂರರಷ್ಟು ವ್ಯವಸಾಯಕ್ಕೆ ಇರುವಂಥದ್ದು ನೇರವಾಗಿ ಮಳೆ ಆಶ್ರಯದಿಂದ ಇದೆ. ಇದನ್ನು ಬಿಟ್ಟರೆ ಬೇರೆ ಯಾವುದೇ permanent source ಇಲ್ಲ. ಅಲ್ಲಿ ಯಾವುದೇ ನದಿ ಇಲ್ಲ, ನಾಲೆ ಇಲ್ಲ, ಕಟ್ಟೆ ಇಲ್ಲ, ಇಂಥ ಒಂದು ಪರಿಸ್ಥಿತಿಯಲ್ಲಿ ಬಯಲುಸೀಮೆ ಪ್ರದೇಶಕ್ಕೆ ವಿಶೇಷವಾದಂಥ ಆದ್ಯತೆಯನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಬೇರೆ ರಾಜ್ಯಗಳಲ್ಲಿ ಅಪರೂಪಕ್ಕೆ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಾರೆ. ಆದರೆ ಬಯಲು ಸೀಮೆ ಪ್ರದೇಶಗಳಲ್ಲಿ ನಾವು ಪ್ರತಿ ವರ್ಷ ಬರಗಾಲವನ್ನು ಎದುರಿಸುತ್ತೇವೆ. ಇದಕ್ಕೆ ಒಂದು ಶಾಶ್ವತವಾದಂಥ ಪರಿಹಾರವನ್ನು ಕಂಡು ಕೊಳ್ಳುವಂಥದ್ದು ಮತ್ತು ಶಾಶ್ವತವಾದಂಥ ನೀರಾವರಿಯನ್ನು ಒದಗಿಸುವಂಥ ಕೆಲಸದ ಬಗ್ಗೆ ಸರ್ಕಾರ ಯೋಚನೆ ಮಾಡಿ, ಇದಕ್ಕೆ ಹಂತ ಹಂತವಾಗಿ ಕಾರ್ಯಕ್ರಮವನ್ನು ರೂಪಿಸದೇ ಹೋದರೆ, ಈ ಸರ್ಕಾರವನ್ನು ನಡೆಸಿದಂಥ ಪ್ರತಯೊಬ್ಬರಿಗೂಬಯಲು ಸೀಮೆಪ್ರದೇಶದ ಜನರು ಶಾಪ ಹಾಕುವಂಥ ಪರಿಸ್ಥಿತಿ ಇವತ್ತು ನಮಗೆಲ್ಲಾ ಬಂದಿದೆ. ಆದುದರಿಂದ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಶಾಶ್ವತವಾದ ನೀರಾವರಿಯ ಬಗ್ಗೆ ಬಯಲು ಸೀಮೆಯ ಶಾಸಕರುಗಳ ಸಭೆಯನ್ನುಮತ್ತೊಮ್ಮೆ ಕರೆಯಬೇಕು. ಅದು ಎತ್ತಿನ ಹೊಳೆ ಬರಲಿ, ಅಪ್ಪರ್ ಭದ್ರಾ ಬರಲಿ, ಹೇಮಾವತಿ ಬರಲಿ, ನೇತ್ರಾವತಿ ಬರಲಿ, ತಾವು ಎಲ್ಲಿಂದ ನೀರನ್ನು ತರುತ್ತೀರೋ ನಮಗೆ ಗೊತ್ತಿಲ್ಲ. ಸರ್ಕಾರ ನೀರು ಕೊಡುವ ಕೆಲಸ ಆಗಬೇಕು ಪ್ರತಿ ವರ್ಷ ಒಂದು ಲಕ್ಷ ಕೋಟಿ ಬಜೆಟ್ ಏನು ಮಾಡುತ್ತೀರಿ, 25,000 ಇಡಿ 74 ಜನ ವಿಷ ಕುಡಿದು ಸಾಯುತ್ತಿದ್ದಾರೆ. ಅದಕ್ಕಿಂತ ದುಸ್ಥಿತಿ ಸರ್ಕಾರಕ್ಕೆ ಏನು ಬೇಕು? ಇದಕ್ಕೆ ಪರಿಹಾರ ಕೊಡುವಂಥ ಯೋಚನೆ, ಚಿಂತನೆ ಸರ್ಕಾರಕ್ಕೆ ಬರದೇ ಹೋದರೆ ನಾವು ಸರ್ಕಾರ ಏತಕ್ಕೆ ನಡೆಸುವುದು? ಜನರು ಸುಮ್ಮನ್ನೆ ಕಣ್ಣು ಮುಚ್ಚಿಕೊಂಡು ಕುಳಿತಿರುತ್ತಾರಾ? ಇವತ್ತು ಬಯಲುಸೀಮೆ ಜನ ದಂಗೆ ಏಳುವಂಥ ಪರಿಸ್ಥಿತಿ ಉದ್ಭವಿಸಿದೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ,ಮಾನ್ಯ ಸಚಿವರಿಗೆ ಕಳೆದ ಸಚಿವ ಸಂಪುಟ ಸಭೆಯಲ್ಲಿ ತಾತ್ವಿಕವಾಗಿ 25 ಟಿ.ಎಂ.ಸಿ. ನೀರನ್ನು ಈ ಭಾಗಕ್ಕೆ ತರಬೇಕೆಂದು ತಮಗೂ ಗೊತ್ತಿರುವ ಹಾಗೆ ಎತ್ತಿನ ಹೊಳೆ ಯೋಜನೆಯಿಂದ ಇದಕ್ಕೆ 8,625 ಕೋಟಿ ರೂ. ಗಳನ್ನು ಕೊಡುವಂಥದ್ದು. ಇದಕ್ಕೆ ಈಗ 2,325 ಕೋಟಿರೂ.ಗಳನ್ನು ಕೊಡಬೇಕೆಂದು ತೀರ್ಮಾನವಾಗಿದೆ.

ಶ್ರೀ ವಿ.ಮುನಿಯಪ್ಪ: ತಮಗೂ ಎತ್ತಿನ ಹೊಳೆ ಯೋಜನೆಗೆ ಎಷ್ಟು ಪರಿಹಾರ ಕೊಡಬೇಕೆಂಬುದು ಗೊತ್ತಿದೆ, ತಜ್ಞರಿಗೂ ಗೊತ್ತಿದೆ ನಮಗೂ ಗೊತ್ತಿದೆ. ತಾವು ಅದರ ಬಗ್ಗೆ ಅಧ್ಯಯನ ಮಾಡಿ, ಅಲ್ಲಿ ಎಷ್ಟು ನೀರು ಇದೆ, ಎಷ್ಟು ಸಿಗುತ್ತದೆಂಬ ಬಗ್ಗೆ ನೋಡಿ, ಆಮೇಲೆ ವಿಚಾರ ಮಾಡೋಣ. ನಾನು ಬೇಡವೆಂದು ಹೇಳುತ್ತಿಲ್ಲ, ಎತ್ತಿನ ಹೊಳೆ ಬರಲಿ, ಆದರೆ ನೇತ್ರಾವತಿಯಿಂದ ಸಿಗುವ excess waterಬರಬೇಕು, ಹೇಮಾವತಿಯಿಂದಲೂ ಬರಬೇಕು, ಅಪ್ಪರ್ ಭದ್ರಾದಿಂದಲೂ ನೀರು ಬರಬೇಕು. ಅದು ಎಷ್ಟೆಷ್ಟು ಬರುತ್ತದೋ ಬರಲಿ, ಎಲ್ಲವನ್ನೂ ಸೇರಿಸಿಬಯಲು ಸೀಮೆಗೆ 74 ಕ್ಕೂ ಶಾಶ್ವತ ನೀರಾವರಿ ಕೊಡುವಂಥ ವ್ಯವಸ್ಥೆ ಆಗಲೆಂಬುದು ನನ್ನ ಒತ್ತಾಯ. ಈ ಭಾಗಕ್ಕೆ ಶಾಶ್ವತ ಪರಿಹಾರವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಮಾಜಿ ಮುಖ್ಯಮಂತ್ರಿಯವರು ಹೇಳಿರುವಂಥ 10 ಸಾವಿರ ಕೋಟಿ ರೂ.ಗಳ package ಏನು ಇದೆ. ಈ ಕಾರ್ಯಕ್ರಮವನ್ನು ಮೂರು ತಿಂಗಳಲ್ಲೇ ಅನುಷ್ಠಾನಗೊಳಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು: ಗೂಳಿಹಟ್ಟಿ ಶೇಖರ್‌ರವರೆ ಮಾತನಾಡಿ.

ಶ್ರೀ ಗೂಳಿಹಟ್ಟಿ ಡಿ.ಶೇಖರ್(ಹೊಸದುರ್ಗ): ಮಾನ್ಯ ಉಪಾಧ್ಯಕ್ಷರೆ,ರಾಜ್ಯದಲ್ಲಿ ಬಹಳಷ್ಟು ಕಡೆಗಳಲ್ಲಿ ಬರಗಾಲವಿದೆ. ನಮ್ಮ ಚಿತ್ರದುರ್ಗ ಜಿಲ್ಲೆ ಕೂಡ ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಆಗಿದೆ. ಮಾನ್ಯ ಸದಾನಂದ ಗೌಡರು ಮುಖ್ಯಮಂತ್ರಿಯಾಗಿದ್ದಾಗ, ಮೊದಲನೇ ಹಂತದಲ್ಲಿ ನಮ್ಮ ಹೊಸದುರ್ಗ ತಾಲ್ಲೂಕನ್ನು ಬರಪೀಡಿತ ತಾಲ್ಲೂಕು ಎಂದು ಹೇಳಿ ಘೋಷಣೆ ಮಾಡಿದರು. ತದನಂತರ, ಇದುವರೆಗೂ ಬಹಳಷ್ಟು ಕೆಲಸಗಳು ಆಗಿಲ್ಲ, ಕುಡಿಯುವ ನೀರಿಗೆ ಸುಮಾರು 20 ಅಥವಾ 30 ಲಕ್ಷ ರೂ.ಗಳನ್ನು ಕೊಟ್ಟಿರುವಂಥದ್ದು ಬಿಟ್ಟರೆ ಬೇರೆ ಯಾವುದೇ ಕಾಮಗಾರಿಗಳ ನಿರ್ವಹಣೆ ಅಲ್ಲಿ ಆಗಿಲ್ಲ. ಅದು ಬರೀ ಕಾಗದದಲ್ಲಿ, ಭಾಷಣಗಳಲ್ಲಿ ಮಾತ್ರ ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿದೆಯೇ ಹೊರತು ಅದನ್ನು ಕನಿಷ್ಠ ಕಾರ್ಯರೂಪಕ್ಕೆ ತರುವಂಥ ಕೆಲಸ ಇಲ್ಲಿಯವರೆಗೂ ಆಗುತ್ತಿಲ್ಲ. ಈಗಾಗಲೇ ಮುಂಗಾರು ಮಳೆ ಪೂರ್ತಿ ಕೈಕೊಟ್ಟಿದೆ, ಕುಡಿಯುವುದಕ್ಕೆ ನೀರಿಲ್ಲ, ಜನ, ಜಾನುವಾರುಗಳಿಗೆ ಮೇವಿಲ್ಲ. ಹಾಗಾಗಿ ಬಹಳಷ್ಟು ಸಂಕಷ್ಟವನ್ನು ನಮ್ಮ ಕ್ಷೇತ್ರದ ಜನರು ಅನುಭವಿಸುತ್ತಿದ್ದಾರೆ. ನಮ್ಮ ತಾಲ್ಲೂಕಿನಿಂದ ಸುಮಾರು ಬಹಳಷ್ಟು ಪಶುಗಳು, ಗೋವುಗಳು ಕಸಾಯಿಖಾನೆಗೆ ಹೋಗುತ್ತಿವೆ. ದನಕರುಗಳಿಗೆ ಮೇವು ಇಲ್ಲ, ಹಿಂದೆ ಮಾನ್ಯ ಸದಾನಂದ ಗೌಡರು ಗೋಶಾಲೆಗಳನ್ನು ತೆರೆಯಬೇಕೆಂದು ಆದೇಶವನ್ನು ಕೊಟ್ಟಿದ್ದರೂ ಸಹ ನಮ್ಮ

ಜಿಲ್ಲೆಯಲ್ಲಿ ಬಹಳಷ್ಟು ನಿರ್ಲಕ್ಷ್ಯ ಮನೋಭಾವನೆಯನ್ನು ತಾಳುವಂಥ ಅಧಿಕಾರಿಗಳು ಇದ್ದಾರೆ. ಎರಡು ಗೋಶಾಲೆಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದರೂ ಸಹಿತ ಅದನ್ನು ಪ್ರಾರಂಭ ಮಾಡುವ ಕೆಲಸವನ್ನು ಇವತ್ತಿನವರೆಗೂ ಕೈಗೆತ್ತಿಕೊಂಡಿಲ್ಲ. ಕುಡಿಯುವ ನೀರಿಗೆ 500-600 ಅಡಿ ಬೋರ್‌ವೆಲ್‌ಗಳನ್ನು ಕೊರೆಸಿದರೂ ಸಹಿತ ನೀರು ಸಿಗುತ್ತಿಲ್ಲ. ನಾವು taskforce ನಲ್ಲಿ ಆಯ್ಕೆ ಮಾಡಿದ ಪಟ್ಟಿಯಂತೆ ಅನುಷ್ಠಾನ ಮಾಡಿ ಎಂದು ಕಳುಹಿಸಿ ಕೊಟ್ಟರೆ, ಸುಮಾರು ಮೂರ್‍ನಾಲ್ಕು ಪಟ್ಟಿಗಳು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇದ್ದಾವೆ. ಈ ಬಗ್ಗೆ ಜಿಲ್ಲಾ ಪಂಚಾಯತ್ ನಲ್ಲಿ ಇಂಜಿನಿಯರ್‌ಗಳನ್ನು ಕೇಳಿದರೆ, ಅವರು approval ಮಾಡುತ್ತಿಲ್ಲ, permission ಕೊಡುತ್ತಿಲ್ಲ,ಬರಗಾಲಕ್ಕೂ ಹಣವನ್ನು ಕೊಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಒಂದು motor ಸುಟ್ಟು ಹೋದರೆ, ಆ ಮೋಟರ್ ಬಿಡಿಸಲಿಕ್ಕೆ ಕೂಡ ಹಳ್ಳಿಗಳಲ್ಲಿ ಆಗುತ್ತಿಲ್ಲ. ಒಂದು ಕಡೆ fluoride ಅಂಶವಿರುವಂಥ ನೀರು, ಇದರ ಜೊತೆಗೆ ಇರತಕ್ಕಂಥ ಬೋರ್‌ವೆಲ್‌ಗಳಲ್ಲಿ ನೀರು ಇಲ್ಲದೇ, ಮತ್ತೆ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಸುವುದಕ್ಕೆ ಜಿಲ್ಲಾಧಿಕಾರಿಗಳು ಅಲ್ಲಿ ಅವಕಾಶ ಮಾಡಿ ಕೊಡುತ್ತಿದ್ದಾರೆ. ನಮ್ಮ ಮನವಿಯನ್ನು ಸರ್ಕಾರಕ್ಕೆ ಕೊಡುವುದು ಅಂದರೆ ಮಾನ್ಯ ಮುಖ್ಯಮಂತ್ರಿಯವರು ಇರಲಿ ಅಥವಾ ಇಲಾಖೆಯ ಕಾರ್ಯದರ್ಶಿಗಳು ಇರಲಿ, ಅವರು ಏನು ಹೇಳುತ್ತಾರೆಂದರೆ ನಮಗೆ ತಕ್ಷಣ ಹೇಳಿದರೆ mobile ನಲ್ಲಿ message ಮುಖಾಂತರ ನಾವು order ಮಾಡುತ್ತೇವೆ ಎನ್ನುತ್ತಾರೆ.ನಾವುಕೋಟಿ ಗಟ್ಟಲೆ ದುಡ್ಡು ಕೊಡುತ್ತೇವೆ. faxನಲ್ಲಿ ಕಳುಹಿಸುತ್ತೇವೆ, E-mail ಮಾಡುತ್ತೇವೆ ಆ order ಗಳನ್ನು ಇಟ್ಟುಕೊಂಡು ಅಲ್ಲಿ ಅಧಿಕಾರಿಗಳು ಅನುಷ್ಠಾನ ಮಾಡುವುದಕ್ಕೆ ಕಷ್ಟ ಎಂದು ಇಲ್ಲಿ ಹೇಳುತ್ತಾರೆ. ಸಾಮಾನ್ಯವಾಗಿ ಸಭೆ ಸಮಾರಂಭಗಳಲ್ಲಿ ಮಾತ್ರ ನಾವು ಇಷ್ಟು ಮಾಡಿದ್ದೇವೆ, ಇಷ್ಟು ಗೋಶಾಲೆಗಳನ್ನು ತೆಗೆದಿದ್ದೇವೆ, ಇಷ್ಟು ಮೇವು ಇದೆ ಎನ್ನುವ ಅಂಕಿ ಅಂಶಗಳನ್ನು ಕೊಡುತ್ತಾರೆ. ನಿನ್ನೆಯ ದಿನ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರೂ ಆದ ಉಪಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದರು. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಅಲ್ಲಿ ಹಾಜರಿದ್ದರು. ಎಷ್ಟು ಮೇವು ಸ್ಟಾಕ್ ಇದೆ ಎಂದು ಕೇಳಿದಾಗ, ಅಂಕಿ ಅಂಶಗಳನ್ನು ಕೊಡುವಂಥ ಸಂದರ್ಭದಲ್ಲಿ 98 ಸಾವಿರ ಮೆಟ್ರಿಕ್ ಟನ್ ಮೇವು ಸ್ಟಾಕ್ ಇದೆ ಎಂದು ಉತ್ತರ ಕೊಡುತ್ತಿದ್ದರು. ನಾವೆಲ್ಲ ಏನು ಅಂದುಕೊಂಡಿದ್ದೆವು ಎಂದರೆ, ಜಿಲ್ಲೆಯಲ್ಲಿ ಗೋಶಾಲೆಗಳಿವೆ, ಗೋಶಾಲೆಗಳಲ್ಲಿ ಮೇವು ಸಿದ್ಧವಿದೆ, 98 ಸಾವಿರ ಮೆಟ್ರಿಕ್ ಟನ್ ಮೇವು ಇದೆ ಎಂದು ತಿಳಿದುಕೊಂಡಿದ್ದೆವು.

ಅಧಿಕಾರಿಗಳು ಮಾಹಿತಿಯನ್ನು ಯಾವ ರೀತಿ ಕೊಡುತ್ತಾರೆ ಎಂದರೆ, ಕಂಪ್ಯೂಟರ್‌ನಲ್ಲಿ, ಇಂಟರ್ನೆಟ್‌ಗಳಲ್ಲಿ ಸ್ಲೈಡ್‌ಗಳನ್ನು ಹಾಕಿ, ಪಿಕ್ಚರ್‌ಗಳನ್ನು ತೋರಿಸಿದ ಹಾಗೆ ಮಾಹಿತಿಗಳನ್ನು ತೋರಿಸುತ್ತಾರೆ. ಅದರ ಒಳಗಡೆ ಹೋಗಿ ನೋಡಿದರೆ, ನಮ್ಮ ಅಧಿಕಾರಿಗಳು ಕೊಟ್ಟಂಥ ಮಾಹಿತಿಗಳು ಮತ್ತು ವಿವರಗಳು ಬರೀ ಬಣ್ಣದ ಸಿನಿಮಾ ರೀತಿಯಲ್ಲಿ ಇರುತ್ತದೆ. ಹಾಗಾಗಿ ಮತ್ತೆ ಅದನ್ನು ಕೆದಕಿ ಕೇಳಿದಾಗ, ಮಾನ್ಯ ಉಪಮುಖ್ಯಮಂತ್ರಿಗಳು ಕೂಡ ಬಹಳಷ್ಟುತಾಳ್ಮೆಯಿಂದ ಎಲ್ಲವನ್ನೂ ಕೇಳಿದರು. ಮೇವು ಎಷ್ಟಿದೆ, ಎಲ್ಲೆಲ್ಲಿದೆ ಎಂದು ಕೇಳಿದರು. ಆದರೆ ವಾಸ್ತವವಾಗಿ ಅಲ್ಲಿ ಒಂದೇ ಒಂದು ಟನ್ ಮೇವು ಸಹಾ ಸ್ಟಾಕ್ ಇಲ್ಲ. ಅದು ರೈತರ ಹತ್ತಿರ ಇದೆಯಂತೆ. ರೈತರ ಹತ್ತಿರ ಇರುವ ಮೇವಿನ ಅಂಕಿ ಅಂಶಗಳನ್ನು ಇವರು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ ಇವತ್ತು ಮೇವು ಎಲ್ಲೂ ಕೂಡ ಸಿಗುತ್ತಿಲ್ಲ. ಸಿಗದಿದ್ದರೂ ಕೂಡ ತಪ್ಪು ಅಂಕಿ ಅಂಶಗಳನ್ನು ರಾಜ್ಯ ಸರ್ಕಾರ ಹಿರಿಯ ಅಧಿಕಾರಿಗಳಿಗೆ, ಉಸ್ತುವಾರಿ ಸಚಿವರಿಗೆ ಮತ್ತು ಸರ್ಕಾರಕ್ಕೆ ಕೊಡುತ್ತಾರೆ. ಯಾವ ಅಧಿಕಾರಿಗಳೂ ಕೂಡ ಸ್ಥಳಕ್ಕೆ ಹೋಗಿ ಪರೀಕ್ಷೆ ಮಾಡುವುದಿಲ್ಲ. ಅವರು ಬಂದು ಇಂಟರ್ನೆಟ್ ಮೂಲಕ, ವೀಡಿಯೋ ಕಾನ್ಫರೆನ್ಸ್ ಮೂಲಕ ಅಂಕಿ ಅಂಶಗಳನ್ನು ತೆಗೆದುಕೊಂಡು, ಅದರ ಆಧಾರದ ಮೇಲೆ ಲೆಕ್ಕ ಕೊಡುತ್ತಾರೆಯೇ ಹೊರತು, ಯಾವ ಅಧಿಕಾರಿಗಳೂ ಕೂಡ ಹಳ್ಳಿಗಳಿಗೆ ಹೋಗಿ, ಕುಡಿಯುವ ನೀರಿನ ಸಮಸ್ಯೆ,ಅವರ ಉದ್ಯೋಗದ ಸಮಸ್ಯೆ, ಮೇವಿನ ಸಮಸ್ಯೆ ಇತ್ಯಾದಿಗಳ ಬಗ್ಗೆ ತಲೆಕೆಡಿಸಿಕೊಳ್ಳಲು ಹೋಗುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಬಹಳಷ್ಟು ಹಳ್ಳಿಗಳ ಜನ ಈಗಾಗಲೇ ಗುಳೇ ಹೋಗುತ್ತಿದ್ದಾರೆ. ಕೆಲವೊಂದು ಕಡೆ ಊರಿಗೆ ಊರೇ ಗುಳೇ ಹೋಗಿಬಿಟ್ಟಿದೆ. ನಮ್ಮ ಹೊಸದುರ್ಗ ತಾಲ್ಲೂಕಿನಲ್ಲಿ ಸುಮಾರು 25–30 ಸಾವಿರ ಜನರು ಕಾಫಿ ಎಸ್ಟೇಟ್ ಮತ್ತು ಬೇರೆ ಬೇರೆ ಕಡೆಗಳಿಗೆ ಗುಳೇ ಹೋಗಿದ್ದಾರೆ. ಪ್ರತಿ ಹಳ್ಳಿಯಲ್ಲೂ ವಲಸೆ ಹೋಗುವಂಥ ಕೆಲಸವಾಗುತ್ತಿದೆ. ಉಸ್ತುವಾರಿ ಸಚಿವರು ಬಂದಿದ್ದಾಗ, ಮುಂದಿನ ವಾರ ಹೋಗೋಣ ಫಿಕ್ಸ್ ಮಾಡಿ ಎಂದು ಹೇಳಿದ್ದರು. NAREGA ದಲ್ಲಿ ಕೆಲಸ ಕೊಡಿ ಎಂದು ಕೇಳುತ್ತಿದ್ದೇವೆ. ಇದು ನಮ್ಮ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಿಂದ ಸಂಪೂರ್ಣವಾಗಿ ನಿಂತುಬಿಟ್ಟಿದೆ. ಅದಕ್ಕೆ ಕಾರಣ ಗೊತ್ತಿಲ್ಲ. ಈ ಯೋಜನೆಯಲ್ಲಿ ಈಗ ಕೂಲಿ 155 ರೂಪಾಯಿ ಕೊಡುವುದೆಂದು ಮಾಡಿದ್ದಾರೆ, ಹಿಂದೆ ಅದು 100 ರೂಪಾಯಿ ಇತ್ತು. 100 ರೂಪಾಯಿಗೆ ಯಾರೂ ಬರುವುದಿಲ್ಲ. ಕೂಲಿ ಮಾಡುವವರುಎಂಥವರು ಎಂದರೆ, ಸಾಮಾನ್ಯವಾಗಿ ಹಳ್ಳಿಗಳಲ್ಲಿ ಜಮೀನುಗಳಿಗೆ ಕೆಲಸಕ್ಕೆ ಕರೆದುಕೊಂಡು ಹೋಗಬೇಕಾದರೆ, ಬೆಳಿಗ್ಗೆ ಕೂಲಿಗೆ ಹೋಗುವಂಥ ಸಂದರ್ಭದಲ್ಲಿ ಮೊದಲು 100–200 ರೂಪಾಯಿ ಅಡ್ವಾನ್ಸ್ ಕೊಟ್ಟು

ಕರೆದುಕೊಂಡು ಹೋಗುತ್ತಾರೆ, ಮಧ್ಯಾಹ್ನ ಊಟ ಕೊಡುತ್ತಾರೆ ಮತ್ತು ಸಾಯಂಕಾಲ ಅವರಿಗೆ 200–300 ರೂಪಾಯಿಗಳನ್ನು ಕೊಟ್ಟು ಕಳುಹಿಸುತಾರೆ.ಪರಿಸ್ಥಿತಿ ಈ ರೀತಿ ಇದೆ. ಕೂಲಿ ಮಾಡುವವರಿಗೆ ಅವತ್ತಿನ ದುಡ್ಡು ಅವತ್ತೇ ಬೇಕು. ಆದರೆ NAREGAದಲ್ಲಿ ಕೆಲಸ ಮಾಡುವವರಿಗೆ ಅವತ್ತಿನ ಕೂಲಿ ಅವತ್ತೇ ಕೊಡುವುದಿಲ್ಲ. ಕೂಲಿಗಳನ್ನು ಕರೆದುಕೊಂಡು ಹೋಗಿ ಕೆಲಸ ಮಾಡಿಸುವಂಥ ಮೇಸ್ತ್ರಿ ಒಂದು ವಾರಕ್ಕೊಂದು ಬಾರಿ ಪೇಮೆಂಟ್ ಕೊಡುತ್ತಾನೆ. ಆದರೆ ಇದರಲ್ಲಿ ಒಂದು ವಾರಕ್ಕು ಆಗುವುದಿಲ್ಲ, ಒಂದು ತಿಂಗಳಿಗೂ ಆಗುವುದಿಲ್ಲ. ಸುಮಾರು 6–8 ತಿಂಗಳುಗಳಿಂದ ಉದ್ಯೋಗ ಖಾತರಿ ಯೋಜನೆಯಲ್ಲಿ ಬಿಲ್ಲುಗಳಿಗೆ ಪೇಮೆಂಟ್ ಮಾಡಿಲ್ಲ. ಹಾಗಾಗಿ ನನ್ನ ಕ್ಷೇತ್ರದಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಮಾಡಲು ಹೆಚ್ಚಾಗಿ ಯಾರೂ ಮುಂದೆ ಬರುವುದಿಲ್ಲ. ಬೇರೆ ಕ್ಷೇತ್ರಗಳಲ್ಲಿ ಪರಿಸ್ಥಿತಿ ಯಾವ ರೀತಿ ಇದೆಯೋ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ವಾಸ್ತವ ಸ್ಥಿತಿಯೇ ಬೇರೆ ಇರುತ್ತದೆ, ಪತ್ರಿಕೆಗಳಲ್ಲಿ ಟಿ.ವಿ.ಗಳಲ್ಲಿ, ಇಂಟರ್ನೆಟ್,ವೀಡಿಯೋ ಕಾನ್ಫರೆನ್ಸ್‌ನಲ್ಲಿ ಬರುವ ಅಂಕಿ ಅಂಶಗಳೇ ಬೇರೆ ಇರುತ್ತವೆ. ಹಾಗಾಗಿ,NAREGA ಯೋಜನೆಯಿಂದ ನಿಜಕ್ಕೂ ಕೂಡ ಯಾವುದೇ ರೀತಿಯ ಪ್ರಯೋಜನ ಆಗುತ್ತಿಲ್ಲ. ಅದು ಬರೀ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಮೆಂಬರುಗಳಿಗೆ ಮಾತ್ರ ಸಿಗುತ್ತಿದೆ. ಅದರಲ್ಲೂ ಅವರು Action plan ಮಾಡುವಾಗ ratio ಮಾಡಿಕೊಂಡುಬಿಟ್ಟಿರುತ್ತಾರೆ. ಗ್ರಾಮ ಪಂಚಾಯಿತಿ ಮೆಂಬರ್ quota ತಾಲ್ಲೂಕು ಪಂಚಾಯಿತಿ ಮೆಂಬರ್ quota ಜಿಲ್ಲಾ ಪಂಚಾಯಿತಿ ಮೆಂಬರ್ quota ಹೀಗೆ quota ಗಳನ್ನುಮಾಡಿಕೊಂಡಿದ್ದು, NAREGA ನಲ್ಲಿ ಯಾರಾದರೂ ಕೆಲಸ ಮಾಡುತ್ತಾರೆ ಎಂದರೆ ಅವರು ಪಂಚಾಯಿತಿ ಮೆಂಬರ್ ಆಗಿರುತ್ತಾರೆ. ಅವರು ಯಾವ ರೀತಿ ಕೆಲಸ ಮಡುತ್ತಾರೆಂದರೆ ಜಾಬ್ ಕಾರ್ಡ್‌ಗಳನ್ನು ಕಲೆಕ್ಟ್ ಮಾಡಿಕೊಂಡು, ಜೆ.ಸಿ.ಬಿ.ಯಿಂದ ಅಥವಾ ಬೇರೆ ಯಾವುದೋ ರೀತಿಯಿಂದ ಕೆಲಸ ಮಾಡುತ್ತಾರೆ. ಮಾಡಿದಂತಹ ಕೆಲಸದ ಬಿಲ್ಲು ಆರು ತಿಂಗಳಿಗೆ ಬರುತ್ತದೋ, ಒಂದು ವರ್ಷಕ್ಕೆ ಬರುತ್ತದೋ ಗೊತ್ತಿಲ್ಲ. ಕೆಲಸವಾಗಿದೆ ಎಂದು progress report ಕೊಟ್ಟಿರುತ್ತಾರೆ. ನಿಮಗೆ ಅಂಕಿ ಅಂಶಗಳನ್ನು ಕೊಟ್ಟಿದ್ದರೆ, ಎಂಥ ಅಂಕಿ ಅಂಶಗಳನ್ನು progress report ನಲ್ಲಿ ಕೊಟ್ಟಿರುತ್ತಾರೆಂದು ಶಿವಲಿಂಗೇಗೌಡರು ಆಗಲೇ ಮಾತನಾಡುವಾಗ ಹೇಳಿದರು, ರೈತನಿಗೆ ತೆಂಗಿನ ಗಿಡ ಕೊಟ್ಟಿದ್ದರೆ ಅಂಥ ಅಂಕಿ ಅಂಶಗಳನ್ನು progress report ನಲ್ಲಿ ಕೊಡುತ್ತಾರೆ. ಯಾವುದೇ

ಕಾಮಗಾರಿ ಆಗಿರುವುದಾಗಲೀ ಯಾವುದೇ ಕೆರೆಕಟ್ಟೆ ಕಟ್ಟಿರುವುದಾಗಿರಲಿ, ಗೋಶಾಲೆಗಳು ಆಗಿರುವುದಾಗಲೀ ಯಾವುದೇ ಅಂಕಿ ಅಂಶಗಳು ಸಿಗುತ್ತಿಲ್ಲ. ಏಕೆಂದರೆ, ಆ ಕೆಲಸಗಳನ್ನು ಅವರು ಮಾಡಿಯೇ ಇರುವುದಿಲ್ಲ ಹಾಗಾಗಿ, ಉದ್ಯೋಗ ಖಾತರಿ ಯೋಜನೆಯಲ್ಲಿ ಯಾವುದೇ ರೀತಿಯ ಪ್ರಯೋಜನವಾಗುತ್ತಿಲ್ಲ. ನಾನು ಸರ್ಕಾರವನ್ನು ಒತ್ತಾಯ ಮಾಡುವುದು, ಮನವಿ ಮಾಡುವುದು ಇಷ್ಟೇ, ಉದ್ಯೋಗ ಖಾತರಿ ಯೋಜನೆ ಜೊತೆಗೆ ಬರಪರಿಹಾರ ಕೆಲಸಗಳನ್ನು ಮಾಡಬೇಕು. ಏಕೆಂದರೆ ನಮ್ಮ ಕ್ಷೇತ್ರದಲ್ಲಿ ಬಹಳಷ್ಟು ಜನರು ಗುಳೇ ಹೋಗಿದ್ದಾರೆ. ಅದರಲ್ಲೂ ಕೂಲಿ ಮಾಡುವಂಥ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಜನರು, ಅವತ್ತು ದುಡಿಮೆ ಮಾಡಿ ಅವತ್ತು ತಿನ್ನುವಂಥ ಜನರು ವಲಸೆ ಹೋಗಿದ್ದಾರೆ. ನನ್ನ ಜೊತೆಗೆ ಬಂದರೆ, ಅವರು ಎಲ್ಲೆಲ್ಲಿ ಕೆಲಸ ಮಾಡುತ್ತಾರೆ ಎನ್ನುವುದನ್ನು ತೋರಿಸುತ್ತೇನೆ. ಡ್ಯಾಂ, ಕೆನಾಲ್‌ಗಳನ್ನು ಕಟ್ಟುವಂಥ ಕಡೆ ಲೈನಿಂಗ್‌ಗೆ ಕಾಂಕ್ರೀಟ್ ಹಾಕಲು ಹೋಗಿದ್ದಾರೆ, ಕಾಫಿ ಎಷ್ಟೇಟ್‌ಗಳಿಗೆ ಹೋಗಿದ್ದಾರೆ. ಅಂಥವರು ಸಾಕಷ್ಟು ಸಿಗುತ್ತಾರೆ ಅಂಥವರಿಗೆ ಆಯಾ ತಾಲ್ಲೂಕಿನಲ್ಲೇ ಕಾಮಗಾರಿಗಳನ್ನು ಪ್ರಾರಂಭಿಸಿ, ಕೂಲಿ ಮಾಡಲಿಕ್ಕೆ ಪಕ್ಷಭೇದ ಮರೆತುಅವಕಾಶ ಮಾಡಿಕೊಟ್ಟರೆ ಒಳ್ಳೆಯದು. 5–10–20 ಲಕ್ಷ ರೂಪಾಯಿಗಳ ಕೆಲಸವನ್ನು ರಾಜಕೀಯ ಪಕ್ಷಗಳ ಕಾರ್ಯಕರ್ತರು ಮಾಡುವ ಬಯಲು ನಿಜವಾಗಿ ಯಾವ ಹಳ್ಳಿಗಳಲ್ಲಿ ಸಮಸ್ಯೆ ಇದೆ, ಆ ಹಳ್ಳಿಗಳಲ್ಲೇ ಕೆಲಸ ಸಿಗತಕ್ಕಂಥ, ಅವತ್ತಿನ ಕೂಲಿ ಅವತ್ತೇ ಸಿಗುವಂಥ, ವ್ಯವಸ್ಥೆ ಆಗಬೇಕು ಇಲ್ಲದಿದ್ದರೆ ಕನಿಷ್ಠ ಒಂದು ವಾರದಲ್ಲಾದರೂ ಪೇಮೆಂಟ್ ಆಗುವಂಥ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಅವರಿಗೆ ಉದ್ಯೋಗ ಸಿಗುತ್ತದೆ ಮತ್ತು ಅಲ್ಲಿ ಕೆಲಸಗಳು ಕೂಡ ಆಗುತ್ತವೆ. ಇನ್ನು, ಕುಡಿಯುವ ನೀರಿಗಾಗಿ ನಾವು ಏನೆಲ್ಲ Action plan ಮಾಡಿ ಕಳುಹಿಸುತ್ತೇವೆ, ಏನೇ Action plan ಮಾಡಿದರೂ ಸರ್ಕಾರ ದುಡ್ಡು ಕೊಟ್ಟರೂ ಅಧಿಕಾರಿಗಳು ಆ ದುಡ್ಡನ್ನು ಖರ್ಚು ಮಾಡುವುದಕ್ಕೆ ತಯಾರಿಲ್ಲ.ಇದುವರೆಗೆ ಯಾವ ಯಾವ ಇಲಾಖೆಯಲ್ಲಿ ಎಷ್ಟು ದುಡ್ಡು ಖರ್ಚಾಗಿದೆ ಎಂದು ಹೇಳಿ. ಇವತ್ತು ಜುಲೈ 23ನೇ ತಾರೀಖು ಆಯಿತು. ನೀವು ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್‌ನ್ನು ಇಟ್ಟಿದ್ದೀರಿ. ಇದರಲ್ಲಿ ಎಷ್ಟು ಖರ್ಚಾಗಿದೆ, ಎಷ್ಟು ಕೆಲಸವಾಗಿದೆ ಎನ್ನುವುದನ್ನು ನೋಡಿದರೆ, ಅಂಕಿ ಅಂಶಗಳು ಬಹಳಷ್ಟು ಕಡಿಮೆ ಇರುತ್ತದೆ. ಹೀಗಾದರೆ ಹಣ ಖರ್ಚಾಗುವುದು ಯಾವಾಗ? ಕೆಲಸ ಆಗುವುದು ಯಾವಾಗ? ಬರೀ Action plan ಮಾಡಿ, ಟೆಂಡರ್ ಕರೆಯುವುದಕ್ಕೇ ಆರು ತಿಂಗಳಾಗುತ್ತದೆ. ಒಂದೊಂದು ಸಣ್ಣ ವಿಷಯಕ್ಕೂ ಕೂಡ ಅಧಿಕಾರಿಗಳು ಕೊಕ್ಕೆ ಹಾಕಿ ಕಳುಹಿಸುತ್ತಾರೆ. ಅದು ಜಿಲ್ಲಾಧಿಕಾರಿಗಳಿರಬಹುದು,

C.E.O. ಗಳಿರಬಹುದು. ಎಲ್ಲರೂ ಹಾಗೆ ಮಾಡುತ್ತಾರೆಂದು ಹೇಳಲಾಗುವುದಿಲ್ಲ. ಕೆಲವು ಕಡೆ ಅಧಿಕಾರಿಗಳು ಬಹಳಷ್ಟು ಕೆಲಸ ಮಾಡುತ್ತಾರೆ. ಗ್ರಾಮೀಣ ಪ್ರದೇಶದ ಗಂಧ ಗಾಳಿ ಗೊತ್ತಿಲ್ಲದೇ ಇರುವಂಥ ಕೆಲವು ಅಧಿಕಾರಿಗಳು ಕೆಲಸಗಳನ್ನು ಮಾಡುವುದಿಲ್ಲ. ಅವರು ಹಳ್ಳಿಗಳಿಗೆ ಹೋಗಿ ನೋಡಿದ್ದರೆ ಗೊತ್ತಾಗುತ್ತಿತ್ತು. ಆರ್ಥಿಕ ಇಲಾಖೆ ಅಥವಾ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ಇಲ್ಲಿ ಎ.ಸಿ.ರೂಮುಗಳಲ್ಲಿ ಕುಳಿತುಕೊಂಡು ಇಲ್ಲಿಂದಲೇ ಅಂಕಿ ಅಂಶಗಳನ್ನು ಹೇಳುವ ಬದಲು, ಗ್ರಾಮೀಣ ಪ್ರದೇಶಗಳಿಗೆ ಹೋಗಿ ಅಲ್ಲಿಯ ವಸ್ತು ಸ್ಥಿತಿಯನ್ನು ಅರ್ಥಮಾಡಿಕೊಂಡರೆ, ನಿಜವಾಗಿಯೂ ರೈತರ ಸಂಕಷ್ಟಕ್ಕೆ ನೆರವಾಗಬಹುದು ಎಂದು ಹೇಳುತ್ತೇನೆ. ಕುಡಿಯುವ ನೀರಿನ ಜೊತೆಗೆ, ಮೇವಿನ ಸಮಸ್ಯೆಯೂ ಇದೆ. ಹೆಚ್ಚೆಚ್ಚು ಗೋಶಾಲೆಗಳನ್ನು ಪ್ರಾರಂಭ ಮಾಡಬೇಕು. ಹಳ್ಳಿಗಳಲ್ಲಿ ಉದ್ಯೋಗ ಸಿಗುವಂತೆ ಅವಕಾಶ ಮಾಡಬೇಕು. ಜೊತೆಗೆ ಸಾಲ ಮನ್ನಾ ವಿಚಾರ ನಮ್ಮ ಮಾಜಿ ಮುಖ್ಯಮಂತ್ರಿಗಳಾದಂಥ ಸನ್ಮಾನ್ಯ ಯಡಿಯೂರಪ್ಪನವರು, ರೈತರ ಸಾಲ ಮನ್ನಾ ಮಾಡಬೇಕೆಂದು ಹೇಳುತ್ತಿದ್ದರು. ನಿಜಕ್ಕೂ ಅವರು ಹೇಳಿದ ರೀತಿಯಲ್ಲಿ ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಹೀಗೆ ಪ್ರತಿಯೊಬ್ಬ ರೈತರಿಗೆ ಹತ್ತತ್ತು ಸಾವಿರ ಕೊಟ್ಟಿದ್ದೇ ಆದರೆ ನಿಜಕ್ಕೂ ಜನಗಳು ಯಾವಾಗಲೂ ನಿಮ್ಮನ್ನು ನೆನಪಿಸಿಕೊಳ್ಳುತ್ತಾರೆ. ಆ ರೀತಿಯ ಕೆಲಸವನ್ನು ಸರ್ಕಾರ ಮಾಡಲಿ ಎಂದು ಆಶಿಸುತ್ತೇನೆ. ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಹೇಳಬೇಕು, ಅವರು ಯವುದೇ ಕೆಲಸವನ್ನು ವಿಳಂಬ ಮಾಡದೇ, ಯಾವುದೇ ಸಬೂಬು ಹೇಳದೇ ಆದೇಶಗಳನ್ನು ಕೊಟ್ಟರೆಕೆಲಸಗಳಿಗೆ ಖಂಡಿತ ಅವಕಾಶ ವಾಗುತ್ತದೆ. ಅವರಿಗೆ ಒಳ್ಳೆಯದಾಗುತ್ತದೆ. ಕುಡಿಯುವ ನೀರಿಗೆ ಅವರು ಹೆಚ್ಚಿನ ಆದ್ಯತೆಯನ್ನು ನೀಡಲಿ. Surface water ಎಲ್ಲೆಲ್ಲಿ ಇರುತ್ತದೋ, ಅದನ್ನು ಗುರುತಿಸಿ, ಅಂತಹ ಕಡೆ ನದಿ ಮೂಲಗಳಿಂದ ಕುಡಿಯುವ ನೀರನ್ನು ಬಳಕೆ ಮಾಡಿಕೊಳ್ಳಬಹುದು. ಜೊತೆಗೆ, ಅಮೃತಮಹಲ್ ಕಾವಲ್‌ಗಳು ಬಹಳಷ್ಟು ಕಡೆಗಳಲ್ಲಿವೆ. ಹೊರರಾಜ್ಯಗಳಿಂದ ಮೇವನ್ನು ತರಿಸಲು ಟ್ರಾನ್ಸ್‌ಪೋರ್ಟ್ ಖರ್ಚುಎಲ್ಲವನ್ನು ಲೆಕ್ಕ ಹಾಕಿಕೊಂಡರೆ ಇಲ್ಲೇ ಮೇವನ್ನು ಬೆಳೆಸಬಹುದು. ಅಮೃತ ಮಹಲ್ ಕಾವಲ್ ಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ಅಥವಾ ನೀರಿನ ದೊಡ್ಡ ದೊಡ್ಡ ಕೆರೆಗಳಿರುವ ಪ್ರದೇಶಗಳಲ್ಲಿ ಮೇವನ್ನು ಬೆಳೆದು ಆ ಭಾಗದಲ್ಲಿ ಗೋವುಗಳಿಗೆ ಮೇವನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅದರಿಂದಲೂ ಕೂಡ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ನೀಗಬಹುದು.ಜೊತೆಗೆ, ನಮ್ಮ ಭಾಗದಲ್ಲಿ ಗೋಶಾಲೆಗಳನ್ನು ತೆರೆದರೆ ಒಳ್ಳೆಯದು. ಯಾವಾಗಲೂ ಮೇವು ಸಿಗದೇ ಇರಬಹುದು. ಆದರೆ, ಗುಡ್ಡಗಾಡು ಪ್ರದೇಶದ ಪಕ್ಕದಲ್ಲೇ ಒಂದು

ಗೋ ಶಾಲೆ ತೆರೆದರೆ ಅಲ್ಲಿ ಕನಿಷ್ಠ ಪಕ್ಷ ಮೂಲಭೂತ ಸೌಕರ್ಯಗಳನ್ನು ಕೊಟ್ಟು ಮೇವನ್ನು ಒಂದು ವಾರ ಅಥವಾ 15 ದಿವಸ stock ಇಟ್ಟುಕೊಂಡು ಸ್ವಲ್ಪ ಲೇಟ್ ಆದರೂ ಪರವಾಗಿಲ್ಲ, ಬೆಳಗ್ಗೆ ಟೈಂ ನಮ್ಮಲ್ಲಿರುವ ಗುಡ್ಡಗಳಲ್ಲಿ, ಬೆಟ್ಟಗಳಲ್ಲಿ ಬಾದೆ ಹುಲ್ಲು ಎಂದು ಸಿಗುತ್ತದೆ. ಈಗಾಗಲೇ ನಮ್ಮಲ್ಲಿ ಬೇರೆ ಬೇರೆ ಭಾಗದಿಂದ ಒಂದು ಟೆಂಟ್ ಹಾಕಿದ್ದಾರೆ. ಈಗಾಗಲೇ ಮಾಡುತ್ತಿದ್ದಾರೆ. ಅಲ್ಲಿ ಅವರಿಗೆ ನಮ್ಮ ಸರ್ಕಾರದ ನೆರವನ್ನೇನೂ ಕೊಟ್ಟಿಲ್ಲ. Already ರೈತರೇ ಎಲ್ಲ ಕೆಲಸ ಅಲ್ಲಿ ಮಾಡುತ್ತಿದ್ದಾರೆ. ಆ ಮೇವನ್ನು ಬಾದೆಹುಲ್ಲನ್ನು ತಿಂದುಕೊಂಡು at least ಅವರಿಗೆ shelter, ಕುಡಿಯುವ ನೀರಿಗೆ ಅವಕಾಶ ಮಾಡಿಕೊಟ್ಟರೆ ಅದೂ ಕೂಡ ಒಳ್ಳೆಯದಾಗುತ್ತದೆ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.ರೈತರ ನೆರವಿಗೆ, ಗ್ರಾಮೀಣ ಪ್ರದೇಶದ ಜನರ ನೆರವಿಗೆ ಸರ್ಕಾರ ಧಾವಿಸಬೇಕು. ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕು. ವಲಸೆ ಹೋಗುವ ಜನರಿಗೆ ಅಲ್ಲಿಯೇ ಸ್ಥಳೀಯವಾಗಿ ಕೆರೆಕಟ್ಟೆ ಇರಬಹುದು, ಗೋಕಟ್ಟೆಗಳಿರಬಹುದು. ಒಂದು ಸಣ್ಣ ಕೆರೆ ಬತ್ತಿಹೋಗುತ್ತದೆ.ಅಂಥ ಕಡೆ ಒಂದೊಂದು, ಎರಡೆರಡು, ಮೂರು ಮೂರು ಲಕ್ಷ ಹಾಕಿ ಕೆಲಸ ಮಾಡಿದರೆat least ಅಲ್ಲಿ ಸ್ವಲ್ಪ seepage water ಇರುತ್ತದೆ. silt remove ಮಾಡಿದರೆ, ಅಲ್ಲಿ ನೀರು ಬರುತ್ತದೆ. ದನಕರುಗಳಿಗೆ ಕುಡಿಯಲು ನೀರು ಸಿಗುತ್ತದೆ. ಜೊತೆಗೆ, ಬಹಳಷ್ಟು AIDP ಯಲ್ಲಿ, ಬೇರೆ ಬೇರೆ ಯೋಜನೆಗಳಲ್ಲಿ ಕೆರೆ ಹೂಳೆತ್ತುವ ಕೆಲಸವಾಯಿತು. ಕೆರೆ ಹೂಳೆತ್ತುವ ಕೆಲಸ ಖಂಡಿತವಾಗಿ ಅದು contractor ಕೆಲಸ. 15–20% minus ಹೋಗುತ್ತಾರೆ. ಅಲ್ಲಿ ಬೇರೆ ಯಾರಿಗೂ ಅನುಕೂಲವಾಗುವುದಿಲ್ಲ. 15–20% minus ಹೋಗಿ contractors ಗೆ ಹಣ ಹೊಡೆಯುವ ಕೆಲಸವಾಗುತ್ತದೆ. ಅದರಿಂದ ಯಾವುದೂ ಕೂಡ ಪ್ರಯೋಜನವಾಗುವುದಿಲ್ಲ. ನಮ್ಮಲ್ಲಿಕೆರೆ ಹೂಳೆತ್ತಿದ್ದಾರೆ. ಒಂದು border ನಲ್ಲಿ ಹೂಳೆತ್ತಿದ ರೈತರು ಅದನ್ನು ಇಟ್ಟಿಗೆ ಮಾಡಿಕೊಳ್ಳಲಿಕ್ಕೆ ಇಟ್ಟುಕೊಂಡಿರುತ್ತಾರೆ. ಅದನ್ನೇ ಲೆಕ್ಕ ತೋರಿಸಿ ನಾವು ಹೂಳೆತ್ತಿದ್ದೇವೆಂದು ಬಿಲ್ ತೋರಿಸಿದ ಉದಾಹರಣೆಗಳಿವೆ. ಹಾಗಾಗಿ ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಅದನ್ನು ಮಾಡಿದ್ದೇ ಆದರೆ ಒಳ್ಳೆಯದಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರ ರೈತರ ನೆರವಿಗೆ, ಬರಪೀಡಿತ ಪ್ರದೇಶಗಳಲ್ಲಿಹೆಚ್ಚು ಹೆಚ್ಚು ಕೆಲಸಗಳನ್ನುತೆಗೆದುಕೊಳ್ಳಹಬೇಕೆಂಬ ಮನವಿಯನ್ನು ಮಾಡುತ್ತಾ ನನ್ನ ಮಾತುಗಳನ್ನುಮುಗಿಸುತ್ತೇನೆ.

ಡಾ: ಬಗಲಿ ಸಾರ್ವಭೌಮ ಸಾತಗೌಡ(ಇಂಡಿ): ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಆವರಿಸಿದ ಬರಗಾಲದ ಬಗ್ಗೆ ಹಿರಿಯರುಸಾಕಷ್ಟು

ಮಾತನಾಡಿದ್ದಾರೆ. ಸನ್ಮಾನ್ಯ ಯಡಿಯೂರಪ್ಪನವರು ಈ ಬರಗಾಲ ಪರಿಸ್ಥಿತಿಯಲ್ಲಿ ಯಾವ ರೀತಿಯಾಗಿ ಸರ್ಕಾರ ನಡೆದುಕೊಳ್ಳಬೇಕು, ಯಾವ ರೀತಿಯಾಗಿ ಸರ್ಕಾರ ರೈತರ ಭಾವನೆಗಳಿಗೆ ಸ್ಪಂದಿಸಬೇಕೆನ್ನುವ ಬಗ್ಗೆ ವಿವರವಾಗಿ ಹೇಳಿದ್ದಾರೆ. ಅವರ ಎಲ್ಲ ಸೂಚನೆಗಳಿಗೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ. ಮುಖ್ಯವಾಗಿ, ನನ್ನ ಮತ ಕ್ಷೇತ್ರದಲ್ಲಿ ಸರ್ಕಾರ, ಜಿಲ್ಲಾಡಳಿತ ಬರವನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದೆ. ಕುಡಿಯುವ ನೀರಿಗಾಗಿ ಈಗಾಗಲೇ ನನ್ನ ಕ್ಷೇತ್ರದಲ್ಲಿ 200 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ. ಆದರೆ, ಇನ್ನೂ 100 ಬೋರ್‌ವೆಲ್‌ಗಳ payment ಆಗಿಲ್ಲ. ಮುಖ್ಯವಾಗಿ ಸರ್ಕಾರ ಹಣದ ಕೊರೆತ ಇಲ್ಲವೆಂದು ಹೇಳುತ್ತಿದ್ದರೂ ಕೂಡ ಬಿಜಾಪುರ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಯಾವುದೇ ಹಣ ಲಭ್ಯವಿಲ್ಲ. ಇವತ್ತು ನಾವು ಹೊಸ ಬೋರ್‌ವೆಲ್‌ಗಳನ್ನು ಕೊರೆಸಬೇಕೆಂದು contractor ರಿಗೆ ಅಥವಾ ಇಂಜಿನಿಯರ್‌ಗೆ ಮನವಿ ಮಾಡಿದರೆ ಹಿಂದಿನ ಬಿಲ್‌ಗಳು ಪೇಮೆಂಟ್ ಆಗುವವರೆಗೆ ಮುಂದೆ ನಾವು ಯಾವುದೇ ಕೊಳವೆ ಬಾವಿಗಳನ್ನು ಕೊರೆಯುವುದಿಲ್ಲವೆನ್ನುವ ಮಾತು ಬರುತ್ತಿದೆ. ಇವತ್ತು ನಾವು 100 ಕೊಳವೆ ಬಾವಿಗಳಿಗೆ ಮೋಟರ್ ಅಳವಡಿಸಬೇಕಾಗಿದೆ. ಅದಕ್ಕೆ ಸರ್ಕಾರದ ಹತ್ತಿರ ಹಣವಿಲ್ಲ. ನಾನು ಸನ್ಮಾನ್ಯ RDPRಮಂತ್ರಿಗಳಿಗೆ ಹೇಳುವುದೇನೆಂದರೆ, ನನ್ನ ಮತ ಕ್ಷೇತ್ರಕ್ಕೆ pending bill payment ಸಲುವಾಗಿ 1 ಕೋಟಿ ರೂಪಾಯಿ, ಮುಂದೆ ಕೊರೆಸಬಹುದಾದ ಬೋರ್‌ವೆಲ್‌ಗಳಿಗಾಗಿ 2 ಕೋಟಿ ರೂಪಾಯಿಗಳೆಂದುರಾಜ್ಯ ಸರ್ಕಾರದ ವತಿಯಿಂದ, RDPR ಇಲಾಖಾವತಿಯಿಂದ ಬಿಡುಗಡೆ ಮಾಡಬೇಕೆಂದು ಅವರಲ್ಲಿ ಕೋರುತ್ತೇನೆ. ಅದರಂತೆ, ಮೋಟರ್ ಅಳವಡಿಸಲು ಸುಮಾರು 2 ಕೋಟಿ ರೂಪಾಯಿಗಳನ್ನು CRF ಹಣದಿಂದ ಬಿಡುಗಡೆ ಮಾಡಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಇವತ್ತು ರೈತ ಬಹಳ ಸಂಕಷ್ಟದಲ್ಲಿದ್ದಾನೆ. ನನ್ನ ಮತ ಕ್ಷೇತ್ರದಲ್ಲಿ 2007– 08ರಲ್ಲಿ ಕಬ್ಬು ಸಾಗಾಣಿಕೆಯಾಗಬೇಕಾಗಿತ್ತು ಅದಕ್ಕೆ ಸನ್ಮಾನ್ಯ ಯಡಿಯೂರಪ್ಪನವರು ಪರಿಹಾರ ಘೋಷಿಸಿದ್ದರು. ಅವರ ಕಾಲದಲ್ಲಿ ಅರ್ಧ ಹಣವನ್ನು ಈಗಾಗಲೇ ಕೊಟ್ಟಿದ್ದಾರೆ. ಇನ್ನೂ 50% ಪರಿಹಾರದ ಹಣ ರೈತರಿಗೆ ತಲುಪಬೇಕಾಗಿದೆ. ಇವತ್ತು ರೈತ ಸಂಕಷ್ಟದಲ್ಲಿದ್ದಾನೆ. ಇವತ್ತು ರೈತನ ಕೈಯಲ್ಲಿ ಯಾವುದೇ ಹಣವಿಲ್ಲ. ಇಂಥ ಸಂಕಷ್ಟದ ಸಮಯದಲ್ಲಿ ರೈತನಿಗೆ ಸಲ್ಲಬೇಕಾದ 50% ಕಬ್ಬಿನ ಪರಿಹಾರವೇನಿದೆ, ಅದನ್ನು ಕೊಡಬೇಕು. ನನ್ನ ಮತ ಕ್ಷೇತ್ರದಲ್ಲಿ

ಸುಮಾರು 15 ಕೋಟಿ ರೂಪಾಯಿ ಕೊಡಬೇಕಾಗಿದೆ. 15 ಕೋಟಿ ರೂಪಾಯಿಗಳೇನೂ ದೊಡ್ಡ ಮೊತ್ತವಲ್ಲ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಸನ್ಮಾನ್ಯ ಸಕ್ಕರೆ ಮಂತ್ರಿಗಳಲ್ಲಿ, ನನ್ನ ಮತಕ್ಷೇತ್ರದ ರೈತರಿಗೆ ಬರಬೇಕಾದಂಥ 15 ಕೋಟಿ ರೂಪಾಯಿಗಳ ಪರಿಹಾರ ಧನವನ್ನು ಕೊಡಲೇ ವಿತರಣೆ ಮಾಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ಕಳಕಳಿಯಿಂದೆ ವಿನಂತಿಸಿಕೊಳ್ಳುತ್ತೇನೆ. ಇನ್ನು ಮುಂದೆ ಮುಖ್ಯವಾಗಿ, ವೈದ್ಯಕೀಯ problem ಗಳಿವೆ. ನನ್ನ ಕ್ಷೇತ್ರದಲ್ಲಿ ಡೆಂಗ್ಯೂ ಬಹಳ ಹೆಚ್ಚಾಗಿದೆ ಮೊನ್ನೆ ನಮ್ಮ ಆರೋಗ್ಯ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತಾ, 741 ಡೆಂಗ್ಯೂ ಕೇಸ್‌ಗಳು ಪತ್ತೆಯಾಗಿವೆ, 8 ಮಾತ್ರ death ಆಗಿದೆ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತೆಂಬುದು ನನ್ನ ಭಾವನೆ. ಏಕೆಂದರೆ, ನನ್ನ ಮತಕ್ಷೇತ್ರದಲ್ಲಿ ಸುಮಾರು 20 ಡೆಂಗ್ಯೂ ಕೇಸ್‌ಗಳು ಪತ್ತೆಯಾಗಿ, ಮೂರು ಕೂಸುಗಳು ಒಂದೇ ಗ್ರಾಮದಲ್ಲಿ ಮರಣ ಹೊಂದಿವೆ. ತೊಂದರೆ ಏನೆಂದರೆ, ನನ್ನ ಕ್ಷೇತ್ರದ ಯಾವುದೇ ದವಾಖಾನೆಯಲ್ಲಿ platelet ಅನ್ನು count ಮಾಡುವ ವ್ಯವಸ್ಥೆ ಇಲ್ಲ. ಡೆಂಗ್ಯೂ ಒಂದು ರೋಗ. Diagnosis ಮತ್ತು prognosis ನೋಡಲು platelet countಒಂದುಅತ್ಯಂತ ಮಹತ್ವವಾದ ರಕ್ತ ತಪಾಸಣೆ. ಆ ವ್ಯವಸ್ಥೆ ನನ್ನ ಕ್ಷೇತ್ರದ ಯಾವುದೇ ಆಸ್ಪತ್ರೆಗಳಲ್ಲಿ ಲಭ್ಯವಿಲ್ಲ. ಇದು ಅತ್ಯಂತ ನೋವಿನ ಸಂಗತಿ. ದಯವಿಟ್ಟು ಆದಷ್ಟು ಬೇಗನೆ ಸರ್ಕಾರ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ platelet count ಮಾಡುವಂಥ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಕಷ್ಟದ ಸಮಯದಲ್ಲಿ ಮತ್ತೊಂದು ಮಹತ್ವವಾದ ವಿಷಯವೇನೆಂದರೆ, ರೋಗಿಗಳಿಗೆ ನಾವು ಕಡಿಮೆ ದರದಲ್ಲಿ ಔಷಧವನ್ನು supply ಮಾಡುವಂಥ ಒಂದು ವ್ಯವಸ್ಥೆ ಆಗಬೇಕು. ನಾನು ಮೊನ್ನೆ ಪೇಪರ್‌ನಲ್ಲಿನ ವಿಷಯ ಓದಿದೆ. ಸನ್ಮಾನ್ಯ ವೈದ್ಯಕೀಯ ಶಿಕ್ಷಣಸಚಿವರು, ನಾನು ವೈದ್ಯಕೀಯ ಶಿಕ್ಷಣದ ವ್ಯಾಪ್ತಿಯಲ್ಲಿ ಬರುವಂಥ ಸರ್ಕಾರಿ ಆಸ್ಪತ್ರೆಗಳಲ್ಲಿ generic ಮಳಿಗೆಗಳನ್ನು ತೆರೆದು ಸುಮಾರು 50–75% ಕಡಿಮೆ ಬೆಲೆಯಲ್ಲಿಔಷಧ ಕೊಡುತ್ತೇವೆನ್ನುವ ಮಾತನ್ನು ಹೇಳಿದರು. ಈ ಮಾತು ಸತ್ಯವಿದ್ದರೆ, ನಿಜವಾಗಿಯೂ ನಾನು ಸನ್ಮಾನ್ಯ ಸಚಿವರನ್ನು ಅಭಿನಂದಿಸುತ್ತಿದ್ದೆ.***. ಏಕೆಂದರೆ, ಇತ್ತೀಚೆಗೆ victoria ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ 10 cetinizine tablet ಖರೀದಿ ಮಾಡಿದೆ. ಈ 10 cetinizine tablet ಗೆ ನಾನು 25/– ರೂಪಾಯಿ ಕೊಟ್ಟು ಪಾವತಿ

ಪಡೆದುಕೊಂಡಿದ್ದೇನೆ. ಇದೇ cetinizine ಮಾತ್ರೆಯನ್ನು ನನ್ನ ಆಸ್ಪತ್ರೆಯಲ್ಲಿ ನನ್ನ ರೋಗಿಗಳಿಗೆ 2 ರೂಪಾಯಿ 30 ಪೈಸೆಯಲ್ಲಿ ನಾನು ಕೊಡುತ್ತೇನೆ. ಅಂದರೆ ಸರ್ಕಾರದ ಔಷಧ ಮಳಿಗೆಗಳಲ್ಲಿ ಮಾರ್ಕೆಟ್‌ನಲ್ಲಿ ಲಭ್ಯವಿರುವುದಕ್ಕಿಂತ 10 ಪಟ್ಟು ಹಣ ವಸೂಲಿ ಮಾಡಿ ಇವತ್ತು ನೀವು *** ಮತ್ತೊಂದು ಮಾತ್ರೆ ಖರೀದಿ ಮಾಡಿದೆ. pantoprazole ಇದಕ್ಕೆ ನಾನು 57/–ರೂಪಾಯಿ ಕೊಟ್ಟಿದ್ದೇನೆ. ನನ್ನ ಹತ್ತಿರ ಪಾವತಿ ಇದೆ. ಈ ಮಾತ್ರೆ ನನ್ನ ಆಸ್ಪತ್ರೆಯಲ್ಲಿ7/– ರೂಪಾಯಿಗಳಿಗೆ ಸಿಗುತ್ತದೆ. ಅಂದರೆ ಸುಮಾರು 7 ಪಟ್ಟು ಹಣವನ್ನು ಸರ್ಕಾರದ ಕೃಪಾಪೋಷಿತ ಡ್ರಗ್ ಮಳಿಗೆಗಳಿಂದ ಜನರ ರಕ್ತ ಶೋಷಣೆ ಮಾಡುತ್ತಿದ್ದೀರಿ. ನಾನು ಮತ್ತೊಂದು ಮಾತ್ರೆ ಖರೀದಿ ಮಾಡಿದೆ. Fluconazole ಈ ಮಾತ್ರೆಗೆ ನಾನು 29/– ರೂಪಾಯಿ ಕೊಟ್ಟೆ. ಈ ಮಾತ್ರೆ ನನ್ನ ಔಷಧ ಅಂಗಡಿಯಲ್ಲಿ 2/– ರೂಪಾಯಿಗಳಿಗೆ ಲಭ್ಯವಿದೆ. ನಾನು ಮತ್ತೊಂದು injection ceftriaxone ಎನ್ನುವುದನ್ನುಖರೀದಿ ಮಾಡಿದೆ. ಇದಕ್ಕೆ ಇವರು ತೆಗೆದುಕೊಂಡ ಹಣ 57/– ರೂಪಾಯಿ. ಈ injection ನನ್ನ ಆಸ್ಪತ್ರೆಯಲ್ಲಿ 18/– ರೂಪಾಯಿಗಳಿಗೆ ಲಭ್ಯವಿದೆ. ಈ ಬಗ್ಗೆ ಸರ್ಕಾರ ಏನು ಹೇಳುತ್ತದೆ? 50% to 75% ಕಡಿಮೆ ದರದಲ್ಲಿ ಔಷಧವನ್ನು ಕೊಡುತ್ತೇವೆಂದು ಹೇಳುತ್ತಾ, *** ಅವರು ದಿ:16.11.12 ರಂದು ಒಂದು ಪತ್ರ ಬರೆಯುತ್ತಾರೆ.

*** ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಸದರಿ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಬಂಡೆಪ್ಪ ಖಾಶೆಂಪೂರ್: ಮಾನ್ಯ ಸದಸ್ಯರು ಮುಖ್ಯವಾದ ವಿಷಯ ಪ್ರಸ್ತಾಪ ಮಾಡಿದ್ದಾರೆ. ಈ ವಿಷಯವನ್ನು immediate ಆಗಿ ಸದನ ಸಮಿತಿಗೆ order ಮಾಡಿ. 10 ಪಟ್ಟು ಹೆಚ್ಚಿಗೆ ಮಾರಾಟ ಮಾಡುತ್ತಿದ್ದೇರೆಂದು ಹೇಳುತ್ತಿದ್ದಾರೆ. ಇದಕ್ಕೆ ಇನ್ನೇನು ಬೇಕು? ಅವರ ಹತ್ತಿರ ಪಾವತಿ ಎಲ್ಲಾ ಇದೆ. immediate ಆಗಿ ತಾವು ಸದನ ಸಮಿತಿಯನ್ನು ಸರ್ಕಾರದ ಕಡೆಯಿಂದ ಘೋಷಣೆ ಮಾಡಬೇಕು.

(ಗೊಂದಲ)

ಶ್ರೀ **ಬಂಡೆಪ್ಪ ಖಾಶೆಂಪೂರ್:** ಅವರು ಗಂಭೀರವಾದ ಆರೋಪ ಮಾಡುತ್ತಿದ್ದಾರೆ. ಸರ್ಕಾರದ ಮಂತ್ರಿಯವರು, ಸರ್ಕಾರ ಏನು ಮಾಡುತ್ತಿದೆ ಎಂದು ಹೇಳಬೇಕು.

(ಗೊಂದಲ)

ಶ್ರೀ **ನೆ.ಲ.ನರೇಂದ್ರಬಾಬು:** ಅವರು document ಆಧಾರದ ಮೇಲೆ ಮಾತನಾಡುತ್ತಿದ್ದಾರೆ.ದಯವಿಟ್ಟು ಸ್ಪಷ್ಟಪಡಿಸಿ. ಯಾರ್‍ಯಾರ ಜೇಬಿಗೆ ಹೋಗುತ್ತಿದೆ? ಯಾರು ಜನರ ಆರೋಗ್ಯದ ಹೆಸರಿನಲ್ಲಿ ಈ ರೀತಿ ಮಾಡುತ್ತಿದ್ದಾರೆಂಬುದನ್ನು ಹೇಳಿ.

(ಗೊಂದಲ)

ಶ್ರೀ **ಬಂಡೆಪ್ಪ ಖಾಶೆಂಪೂರ್:** ತನಿಖೆ ಮಾಡಬೇಕು.

ಶ್ರೀ **ಕೆ.ಎಸ್.ಈಶ್ವರಪ್ಪ(ಉಪಮುಖ್ಯಮಂತ್ರಿಗಳು):** ನಮ್ಮ ಮಾನ್ಯ ಶಾಸಕರೇನು ಪ್ರಸ್ತಾಪ ಮಾಡುತ್ತಿದ್ದಾರೆ, ಅದರ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಹತ್ತಿರ ಖಂಡಿತವಾಗಿಯೂ ಇದೇ ಸದನದಲ್ಲಿ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ **ಬಂಡೆಪ್ಪ ಖಾಶೆಂಪೂರ್:**Receipt ಸಮೇತ 10 ಪಟ್ಟು ಜಾಸಿ ಹಣ ತೆಗೆದುಕೊಳ್ಳುತ್ತಿದ್ದಾರೆ ಅವರು ಹೇಳುತ್ತಿದ್ದಾರೆ. ಇನ್ನೇನು enquiry ಮಾಡುತ್ತೀರಿ? ಉಪ ಮುಖ್ಯಮಂತ್ರಿಗಳೇ, ಈಗಲೇ order ಮಾಡಿ.

ಶ್ರೀ **ಕೆ.ಎಸ್.ಈಶ್ವರಪ್ಪ:** ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳಿ ಮಾಡೋಣ.

ಶ್ರೀ **ಬಂಡೆಪ್ಪ ಖಾಶೆಂಪೂರ್:**Receipt ಸಮೇತ ಕೊಡುತ್ತಿದ್ದಾರೆ. ಅವರೊಬ್ಬ ಡಾಕ್ಟರ್ ಮಾನ್ಯ ಉಪಮುಖ್ಯಮಂತ್ರಿಗಳೇ, ಅವರೊಬ್ಬ ಡಾಕ್ಟರ್.

ಶ್ರೀ **ಕೆ.ಎಸ್.ಈಶ್ವರಪ್ಪ:** ನಾನು ಇಲ್ಲವೆಂದಿಲ್ಲ; ನಾನೇನು ಡಾಕ್ಟರ್ ಅಲ್ಲವೆಂದಿಲ್ಲವಲ್ಲ.

ಶ್ರೀ **ಬಂಡೆಪ್ಪ ಖಾಶೆಂಪೂರ್:** ಹೇಳಿಬಿಡಿ ನೀವೇ ಕೊಟ್ಟುಬಿಡಿ.

ಶ್ರೀ **ಕೆ.ಎಸ್.ಈಶ್ವರಪ್ಪ:** ಅವರು ಹೇಳಿದ್ದು ಸರಿಯಿದೆ. ನಾನು ಇಲ್ಲವೆಂದು ಹೇಳಲಿಲ್ಲ. ಸಂಬಂಧಪಟ್ಟ ಮಂತ್ರಿಗಳು ಬರಲಿ.

ಶ್ರೀ **ಬಂಡೆಪ್ಪ ಖಾಶೆಂಪೂರ್:** ಸದನ ಸಮಿತಿಗೆ ಆದೇಶ ಕೊಟ್ಟು ಬಿಡಿ.

ಉಪಾಧ್ಯಕ್ಷರು: ಬಂಡೆಪ್ಪ ಖಾಶೆಂಪೂರ್‌ರವರೆ ಈ ಬಗ್ಗೆ ಸಂಪೂರ್ಣವಾದ ಮಾಹಿತಿ ತೆಗೆದುಕೊಂಡು ಆರೋಗ್ಯ ಸಚಿವರು ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್ ಉತ್ತರ ಕೊಡಲಿ, ಅದು ತಪ್ಪಿದ್ದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಯೋಚನೆ ಮಾಡಿ.

ಶ್ರೀ ಕೆ.ರಾಜು: ಉಪಾಧ್ಯಕ್ಷರೆ, ಡಾಕ್ಟರ್‌ರವರಿಗೆ ಪೂರ್ತಿಯಾಗಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಡಾ॥ ಸಾರ್ವಭೌಮ ಸಾತಗೌಡ ಬಗಲಿ: ಇನಾಂಕ: 16-12-2011 ರಂದು ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಒಂದು ಟಿಪ್ಪಣಿ ಕಳುಹಿಸುತ್ತಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು 20 ರಂದು ನಿರ್ದೇಶಕರು, ಕಿಮ್ಸ್ ಹುಬ್ಬಳ್ಳಿ ಯವರಿಗೆ, ಸನ್ಮಾನ್ಯ ಮಾನನೀಯ ವೈದ್ಯಕೀಯ ಶಿಕ್ಷಣ ಸಚಿವರು ಕಡಿಮೆ ದರದಲ್ಲಿ ಔಷಧಿಗಳನ್ನು ಪೂರೈಕೆ ಮಾಡುವಂಥ ಮಹಾನ್ ಕಾರ್ಯ ಮಾಡುತ್ತಿದ್ದಾರೆ ಅದಕ್ಕೆ ದಯವಿಟ್ಟು ಕ್ರಮ ತೆಗೆದುಕೊಳ್ಳಿ ಎಂದು ಪತ್ರ ಬರೆಯುತ್ತಾರೆ. ಪತ್ರ ಬರೆದ ಮೂರು ದಿನದಲ್ಲಿ ಸನ್ಮಾನ್ಯ ನಿರ್ದೇಶಕರು,...

ಶ್ರೀ ಸಿ.ಎಸ್.ನಾಡಗೌಡ(ಅಪ್ಪಾಜಿ): ಮಾನ್ಯ ಬಗಲಿಯವರೆ, not, to disturb your argument, ನಾನೇನು ಅವರಿಗೆ ತೊಂದರೆ ಮಾಡುತ್ತಿಲ್ಲ. ಮಾನ್ಯ ಉಪಾಧ್ಯಕ್ಷರಿಗೆ ಏನು ಹೇಳುತ್ತೇನೆಂದರೆ, ಮಾನ್ಯ ಸದನಸ್ಯರೇನು ಪದೇ ಪದೇ ಹೇಳುತ್ತಿದ್ದಾರೆ, ಬೆಲೆ ಪಟ್ಟಿಯನ್ನಿಟ್ಟುಕೊಂಡಿದ್ದಾರೆ, ಅವರು ಬಹುತೇಕ Drug purchase Department ನಿಂದ ಮಾಹಿತಿ ಪಡೆದ ಹಾಗೆ ಕಾಣುತ್ತದೆ.Let that be on record of the House. ಮಾನ್ಯ ಉಪಾಧ್ಯಕ್ಷರಿಗೆ ಕಳುಹಿಸಿ ಕೊಡಿ.

ಉಪಾಧ್ಯಕ್ಷರು: Details ಕಳುಹಿಸಿ ಕೊಡಿ.ಡಾಕ್ಟರೆ, ತಮ್ಮಲ್ಲಿ ಏನು ಸಾಕಷ್ಟು ಮಾಹಿತಿಗಳಿವೆ ಅವುಗಳನ್ನೆಲ್ಲಾ ದಯವಿಟ್ಟು ಇಲ್ಲಿಗೆ ಕಳುಹಿಸಿ ಕೊಡಿ. ಈಗ ಬರದ ಬಗ್ಗೆ ಮಾತನಾಡಿ.

ಡಾ: ಸಾರ್ವಭೌಮ ಸಾತಗೌಡ ಬಗಲಿ: ದಿನಾಂಕ: 16 ರಂದು ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಪತ್ರ ಬರೆಯುತ್ತಾರೆ, 20 ರಂದು ಶ್ರೀ ಸಾಯಿಬಾಬಾ ಸರ್ಕಾರದ ಅಧೀನ ಕಾರ್ಯದರ್ಶಿಗಳು,DMC ನಿರ್ದೇಶಕರಿಗೆ, ದಯವಿಟ್ಟು ಬೇಗನೆ generic ಮಳಿಗೆಯನ್ನು ಪ್ರಾರಂಭ ಮಾಡಿ ಎಂದು ಪತ್ರ ಬರೆಯುತ್ತಾರೆ. ಆ ಪತ್ರ ಮುಟ್ಟಿದ ಮೂರೇ ದಿನಗಳಲ್ಲಿ ವೈದ್ಯಕೀಯ

ಶಿಕ್ಷಣ ಸಚಿವರು ಕರ್ನಾಟಕ ರಾಜ್ಯ ಸಹಕಾರ ಗ್ರಾಹಕ ಮಹಾಮಂಡಳಿಗೆ ಪತ್ರ ಬರೆದು ನಿಮಗೆ ನಾವು ಜಾಗ ಕೊಡುತ್ತೇವೆ ದಯವಿಟ್ಟು ಮಳಿಗೆ ಪ್ರಾರಂಭಿಸಿ ಎಂದು ಪತ್ರ ಬರೆಯುತ್ತಾರೆ. ಆ ಮಳಿಗೆ ಮೊದಲು ಪ್ರಾರಂಭವಾಗಿದ್ದು ಬೆಂಗಳೂರಿನಲ್ಲಿ. ಮೂರು ದಿವಸಗಳ ಹಿಂದೆ ಹುಬ್ಬಳ್ಳಿಯಲ್ಲಿ ಪ್ರಾರಂಭವಾಯಿತು. ಅವತ್ತು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಸನ್ಮಾನ್ಯರೆ ಈ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಬಾರದು ಎಂದು ಹೇಳಬೇಕೆಂದು ಪ್ರಯತ್ನಿಸಿದ್ದೆ, but it was not possible for me to communicate with Hon'ble chief minister.ಆದುದರಿಂದ, ಬಡರೋಗಿಗಳಿಂದ ಹತ್ತುಪಟ್ಟು ಹಣವನ್ನೇನು ಚಾರ್ಜ್ ಮಾಡುತ್ತಿದ್ದಾರೆ ಇದರಲ್ಲಿ ಯಾವುದೂ ಸುಳ್ಳಿಲ್ಲ I got all the documents.*ವೈದ್ಯಕೀಯ ಶಿಕ್ಷಣ ಸಚಿವರು ರಾಜೀನಾಮೆ ಕೊಡಬೇಕು. ಈ ಒಂದು ಅವ್ಯವಹಾರದಲ್ಲಿ ಪಾಲ್ಗೊಂಡಿರುವ Under secretary, Deputy secretary, principal secretary of Health, principal secretary of medical Education ವಿರುದ್ಧ Criminal case should be filed and They have to be sent to parappana Agraharaa jail. These are my requests.

ಉಪಾಧ್ಯಕ್ಷರು: ಡಾಕ್ಟರ್ ತಾವು ಮಾಹಿತಿ ಕಳುಹಿಸಿ ಕೊಡಿ. ಡಾ: ಶರಣ ಪ್ರಕಾಶ್‌ರವರೆ, ತಾವು ಮಾತನಾಡಿ.

---

* ಅಧ್ಯಕ್ಷರ ಆದೇಶದ ಮೇರೆಗೆ ಸದರಿ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್(ಸೇಡಂ): ಮಾನ್ಯ ಉಪಾಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ, ನಮ್ಮ ಡಾ: ಬಗಲಿಯವರು ಒಂದು ವಿಷಯದ ಬಗ್ಗೆ ಬೆಳಕು ಚೆಲ್ಲಿದರು. ಇದು ಬಹಳ ಗಂಭೀರವಾದಂಥ ವಿಷಯ. ಏಕೆಂದರೆ, ಒಬ್ಬ ರೂಲಿಂಗ್ ಪಾರ್ಟಿಯ ಶಾಸಕರಾಗಿ ಅವರು ವೈದ್ಯರೂ ಕೂಡ ಆಗಿದ್ದಾರೆ. ಅದಕ್ಕೆ ಅವರಿಗೆ ಗಮನಕ್ಕೆ ಬಂದಿರುವ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದಾರೆ ಮತ್ತು ಅದರ ಬಗ್ಗೆ enquiry ಮಾಡಬೇಕು ಹಾಗೂ ಅವರು ರಾಜೀನಾಮೆ ಕೊಡಬೇಕೆಂದು ಕೂಡ ಹೇಳಿದ್ದಾರೆ. ರೂಲಿಂಗ್ ಪಾರ್ಟಿಯ ಸದಸ್ಯರೇ ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡಿದ ಮೇಲೆ ಖಂಡಿತವಾಗಿ ನೀವು ಅದರ ಬಗ್ಗೆ enquiry ಮಾಡಬೇಕು ಇದಕ್ಕೆ

ಏನಾದರೊಂದು ಅಂತ್ಯವನ್ನು ಕಾಣಬೇಕು. ಏಕೆಂದರೆ, ಅವರು ಈಗ ಮಾತನಾಡಿದರೂ ಅದರ ಬಗ್ಗೆ ಏನೂ ಕ್ರಮವಾಗಲಿಲ್ಲವೆಂದರೆ, ಖಂಡಿತವಾಗಿ ಈ ಸದನದ ಮೇಲೆ ಜನರಿಗೆ ವಿಶ್ವಾಸ ಇರುವುದಿಲ್ಲ. ಅದಕ್ಕೆ ದಯವಿಟ್ಟು, ತಾವೊಬ್ಬ ಜನರ ಬಗ್ಗೆ ಕಳಕಳಿ ಇರುವಂಥ ನಾಯಕರಾಗಿ ಉಪಾಧ್ಯಕ್ಷರಾಗಿರುವುದರಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಮನವಿ ಇದೆ. ಡಾ: ಬಗಲಿಯವರೆ, ತಮ್ಮ ಹತ್ತಿರ ಏನು ಇದೆ ಆ ಡಾಕುಮೆಂಟ್ಸ್ ಎಲ್ಲಾ ಸನ್ಮಾನ್ಯ ಉಪಾಧ್ಯಕ್ಷರಿಗೆ ಕಳುಹಿಸಿ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ ಬರದ ಬಗ್ಗೆ ಬಹಳ ಸುದೀರ್ಘವಾದ ಚರ್ಚೆ ಈಗಾಗಲೇ ನಡೆದಿದೆ. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ರೇವಣ್ಣನವರು ಹಾಗೂ ನಮ್ಮ ಮಾನ್ಯ ಯಡಿಯೂರಪ್ಪನವರು ಸೇರಿದಂತೆ ಬಹಳಷ್ಟು ಹಿರಿಯ ನಾಯಕರು ಈ ಸದನದಲ್ಲಿ ಮಾತನಾಡಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ, ಒಂದೇ ಒಂದು ಮಾತನ್ನು ನಾನು ಸರ್ಕಾರದ ಗಮನಕ್ಕೆ ತರಲಿಚ್ಚಿಸುತ್ತೇನೆ. ಏನೆಂದರೆ; ಬರ ಬಂದಾಗ ಕೇವಲ ನಾವು ಏನು ಚರ್ಚೆ ಮಾಡುತ್ತಿದ್ದೇವೆ, ಕುಡಿಯುವ ನೀರಿಗೆ ಸರ್ಕಾರ ಏನು ಉತ್ತರ ಕೊಟ್ಟಿದೆ ಎಂದು ನಾನು ಕಳೆದ ಸದನದಲ್ಲಿ ಕೇಳಿದ್ದೇನೆ. ಏಕೆಂದರೆ, ಬರಗಾಲ ಈ ವರ್ಷ ಬಂದಿಲ್ಲ. ಕಳೆದ ವರ್ಷ 123 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಸರ್ಕಾರ ಘೋಷಣೆ ಮಾಡಿತ್ತು. ಆದರೆ, ಸರ್ಕಾರ ಕೈಗೊಂಡಿರತಕ್ಕಂಥ ಕ್ರಮಗಳೇನೆಂದರೆ, ಕ್ರೇಂದ್ರ ಸರ್ಕಾರದಿಂದ ಬಂದಿರುವ ಹಣವನ್ನು ರಿಲೀಸ್ ಮಾಡಿ ಅಲ್ಲಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿದ್ದೇವೆಂದು ಹೇಳಿ ಸರ್ಕಾರ ಕೈ ತೊಳೆದುಕೊಂಡು ಬಿಟ್ಟರೆ ವಿನಹ ಸಮರ್ಪಕವಾಗಿ ಅಲ್ಲಿ ಆಗತಕ್ಕಂಥ ತೊಂದರೆಗಳ ಬಗ್ಗೆ ಏನು ಕಾಳಜಿವಹಿಸಿದೆ ಎಂದು ನಮಗಂತೂ ಗೊತ್ತಾಗಲ್ಲಿ. ನಾವು ಪದೇ ಪದೇ ಸದನದಲ್ಲಿಯೂ ಕೂಡ ಪ್ರಸ್ತಾಪಿಸಿದ್ದೇವೆ. ಆದರೆ, ನಾವು ಈ ಜಿಲ್ಲೆಗಳಿಗೆ ಇಷ್ಟು ಕುಡಿಯುವ ನೀರಿಗೆ ಬಿಡುಗಡೆ ಮಾಡಿದ್ದೇವೆ ಈ ಜಿಲ್ಲಗೆ ಇಷ್ಟು ಮಾಡಿದ್ದೇವೆ, ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ನಾವು ಕಾಳಜಿ ವಹಿಸಿದ್ದೇವೆಂದು ಪ್ರಾರಂಭದಲ್ಲಿ ಬಹಳಷ್ಟು ಸಾರಿಹೇಳಿದರೂ ಅದು ಸತ್ಯಕ್ಕೆ ದೂರವಾದ ಮಾಹಿತಿ ಕೊಟ್ಟರೂ ಕೂಡ ಕ್ರಮೇಣವಾಗಿ ಅದರ ಹಣವನ್ನು ಬಿಡುಗಡೆ ಮಾಡಿರಬಹುದು. ಆದರೆ, ಬರ ಬಂದಾಗ ಕೇವಲ ಕುಡಿಯುವ ನೀರಿನ ಸಮಸ್ಯೆ ಮಾತ್ರ ಇರಲ್ಲ. ಅಲ್ಲಿ ಬಹಳಷ್ಟು ಸಮಸ್ಯೆಗಳು ಇವೆ. ಆ ಭಾಗದಲ್ಲಿ ಇರತಕ್ಕಂಥ ಸಮಸ್ಯೆಗಳನ್ನು ಸಮರ್ಪಕವಾಗಿ ನಿಭಾಯಿಸಬೇಕಾದರೆ ಅಲ್ಲಿ ಒಂದು taskforce ಎಂದು ತಾವು ಮಾಡಿದ್ದೀರಿ. ಶಾಸಕರ

ಅಧ್ಯಕ್ಷತೆಯಲ್ಲಿ taskforce ಎಂದು ಇದೆ. ಆದರೆ, taskforce ಗೆ ನೀವು ಏನು ಅಧಿಕಾರ ಕೊಟ್ಟಿದ್ದೀರಿ? ಕುಡಿಯುವ ನೀರಿನ ನಿರ್ವಹಣೆಗೆ ಮಾತ್ರ ಏನಾದರೂ ಒಂದು ನಿರ್ಧಾರ ತೆಗೆದುಕೊಳ್ಳಬಹುದು. ಅದು ಲಭ್ಯವಿರುವ ಹಣದ ಮಿತಿಯಲ್ಲಿ ಎಂದು ತಾವು ಆದೇಶ ಮಾಡಿದ್ದೀರಿ. ಇದರಿಂದ ಸಮಸ್ಯೆಗೆ ಯಾವುದೇ ಸಂಪೂರ್ಣ ಪರಿಹಾರ ಸಿಕ್ಕಿದೆ ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ.ಇಲ್ಲಿ ಪ್ರಮುಖವಾಗಿ ಒಂದು ಪ್ರದೇಶದಲ್ಲಿ ಬರ ಬಂದಾಗ ಆ ಭಾಗದಲ್ಲಿರುವ ಜನರ ಸಮಸ್ಯೆ ಏನಿದೆ ಎಂದು ಸರ್ಕಾರ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಅಲ್ಲಿ ಜನ ಗುಳೆ ಹೋಗುತ್ತಿದ್ದಾರೆ, ಇದು ಸತ್ಯಾಂಶ. ನಮ್ಮ ಭಾಗದಲ್ಲಿ ವಿಶೇಷವಾಗಿ ಹೈದರಾಬಾದ್ –ಕರ್ನಾಟಕದ ಭಾಗದಲ್ಲಿ ಬಹಳಷ್ಟು ಜನ ಗುಳೆ ಹೋದರು. ಹೋದ ವರ್ಷವೂ ಕೂಡ ಅವರಿಗೆ ಕೆಲಸ ಇಲ್ಲದೇ ಅವರು ಬೇರೆ ಬೇರೆ ಪ್ರದೇಶಗಳಾದ ಹೈದರಾಬಾದ್, ಬಾಂಬೆ, ಬೆಂಗಳೂರಿಗೆ ಎಲ್ಲಾ ಟ್ರೈನ್‌ಗಳಲ್ಲಿ ಗುಳೆ ಬರತಕ್ಕಂಥ ವಿಚಾರ ಎಲ್ಲಾ ಪತ್ರಿಕೆಗಳಲ್ಲಿ ಬಂತು. ಅದನ್ನು ತಡೆಯಲಿಕ್ಕೆ ಸರ್ಕಾರ ಏನೂ ಮಾಡಲಿಕ್ಕೆ ಆಗಲಿಲ್ಲ. ನಾವು ಪದೇ. ಪದೇ ಜಿಲ್ಲಾಧಿಕಾರಿಗಳಿಗೆ ಮತ್ತೆ ಅಲ್ಲಿರುವ ಅಧಿಕಾರಿಗಳ ಗಮನಕ್ಕೆ ತಂದು ನೀವು ಇದರ ಬಗ್ಗೆ ಏನಾದರೊಂದು ಕ್ರಮ ತೆಗೆದುಕೊಳ್ಳಬೇಕು. ಇಲ್ಲಿರುವ ಜನಗಳಿಗೆ ಕೆಲಸ ಕೊಡುವ ಪ್ರಯತ್ನ ಮಾಡಬೇಕು ಎಂದು ಹೇಳಿದಾಗ, ಸರ್ಕಾರದವರು ಏನು ಹೇಳಿದರು ಎಂದರೆ, ಇಲ್ಲಾ ಅಲ್ಲಿ ಉದ್ಯೋಗ ಖಾತಿಯಲ್ಲಿ ನಿಮಗೆ ಅವಕಾಶವಿದೆ ಅದನ್ನೇ ಮಾಡಬೇಕೆನ್ನುವ ಮಾತನ್ನು ಹೇಳಿದರು. ಏಕೆಂದರೆ, ಜಿಲ್ಲಾ ಉಸ್ತುವಾರಿ ಸಚಿವರು ಆಗಾಗ ಒಂದೆರಡು ಸಾರಿ ಬರದ ಸಮಯದಲ್ಲಿ ಅಲ್ಲಿಗೆ ಬಂದು ಕಷ್ಟ ಕೇಳಿ ಅದಕ್ಕೆ ಪರಿಹಾರ ಹುಡುಕುವಂಥ ಕೆಲಸ ಮಾಡಲಿಲ್ಲ. ಆದರೂ ಕೂಡ ಒಂದೆರಡು ಸಮಯದಲ್ಲಿ ನಾವು ಅದನ್ನು ಪ್ರಶ್ನೆ ಮಾಡಿದಾಗ, ಇವತ್ತು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಒಂದು ವರ್ಷಕ್ಕೆ ನಮಗೆ ಸುಮಾರು ಎರಡು ಸಾವಿರ ಕೋಟಿ ರೂಪಾಯಿ ಲಭ್ಯವಿತ್ತು. ಆದರೆ, ಬರ ಬಂದಾಗ ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ನಾವು Action plan ಮಾಡಿ ಕಳಿಹಿಸಿರಿ ಎಂದು ಸಲಹೆ ಕೊಟ್ಟಿದ್ದೆವು. ಆದರೆ, ರಾಜ್ಯ ಸರ್ಕಾರ ಅದನ್ನು ಮಾಡಲಿಲ್ಲ ಏಕೆ ಮಾಡಲಿಲ್ಲವೆಂದು ನನಗೆ ಇಲ್ಲಿಯವರೆಗೆ ಅರ್ಥವಾಗಲಿಲ್ಲ. ಏಕೆಂದರೆ, ಯಾವ್ಯಾವಾಗ ಯಾವ್ಯಾವ ಪ್ರದೇಶದಲ್ಲಿ ಬರ ಇರುತ್ತದೆ ಅಂಥ ಸಂದರ್ಭದಲ್ಲಿ ನೂರು ದಿನಗಳಿಂದ ಹೆಚ್ಚು ಕೆಲಸ ಕೊಡಬೇಕಾಗುತ್ತದೆನ್ನುವುದನ್ನು ನೀವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರೆ ಕೇಂದ್ರ ಸರ್ಕಾರ ಹೆಚ್ಚಿನ ಹಣ

ಕೊಡುವುದಕ್ಕೆ ಸಿದ್ಧವಿದೆ.ಆದರೆ, ರಾಜ್ಯ ಸರ್ಕಾರ ಈ ಒಂದು ಉಪಯೋಗ ತೆಗೆದುಕೊಳ್ಳಲಿಲ್ಲ. ನಾನು ಆಗ ಏನು ಹೇಳಿದ ಎಂದರೆ, ಪ್ರತಿಯೊಂದು ಗ್ರಾಮದಲ್ಲಿ ಜನರಿಗೆ ಕೆಲಸ ಕೊಡಬೇಕಾದರೆ additional action plan ಮಾಡಿ ಕಳುಹಿಸಿ ಎಂದು ಹೇಳಿದೆ, ಅದಕ್ಕೆ ಸರ್ಕಾರ ಮುಂದೆ ಬರಲಿಲ್ಲ. ಅಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳಾಗಲಿ, ಜಿಲ್ಲಾಧಿಕಾರಿಗಳಾಗಲಿ, ಸಂಬಂಧಪಟ್ಟ ಉಸ್ತುವಾರಿ ಸಚಿವರಾಗಲಿ ಇದರ ಬಗ್ಗೆ ಗಮನವೂ ಕೊಡಲಿಲ್ಲ, ಅದರ ಬಗ್ಗೆ ಕ್ರಮನೂ ತೆಗೆದುಕೊಳ್ಳಲಿಲ್ಲ. ಈ ವರ್ಷ ಸತತವಾಗಿ ಎರಡನೇ ವರ್ಷ ಬರ. ಈ ವರ್ಷನೂ ನೀವು ಕೆಲಸ ಕೊಡದೇ ಹೋದರೆ, ಕಷ್ಟ ಏಕೆಂದರೆ ಬರ ಬಂದಾಗ ಒಂದು ಗ್ರಾಮದಲ್ಲಿ ಒಂದು ಪ್ರದೇಶದಲ್ಲಿ ರೈತರು ಮತ್ತು ಕೃಷಿಯ ಮೇಲೆ ಅವಲಂಬಿತರಾಗಿರತಕ್ಕಂಥ ಕೂಲಿಕಾರರು ಇರುತ್ತಾರೆ. ಅಲ್ಲಿ ಯಾರ್‍ಯಾರ ಮೇಲೆ ಬರದ ಪರಿಣಾಮವಾಗುತ್ತದೆ ಎನ್ನತಕ್ಕಂಥದ್ದು ನಾವು ಕೂಲಂಕುಷವಾಗಿ ವಿಚಾರ ಮಾಡಬೇಕಾಗುತ್ತದೆ. ರೈತರು ಸಂಕಷ್ಟದಲ್ಲಿಯೇ ಇದ್ದಾರೆ. ಆದರೆ, ಕೃಷಿಯ ಮೇಲೆ ಅವಲಂಬಿತರಾಗಿರತಕ್ಕಂಥ ಕೂಲಿ ಕಾರ್ಮಿಕರ ಪರಿಸ್ಥಿತಿ ಏನು ಇದೆ ಎಂಬುದನ್ನು ಕೂಡ ನಾವು ನೋಡಬೇಕಾಗುತ್ತದೆ. ಇದು ಸರ್ಕಾರದ ಜವಾಬ್ದಾರಿಯಿದೆ, ಏಕೆಂದರೆ,ಕೂಲಿ ಕಾರ್ಮಿಕರಿಗೆ ಕೃಷಿ ಚಟುವಟಿಕೆಯಲ್ಲಿ ಕೆಲಸ ಸಿಗದೇ ಹೋದರೆ ಅವರು ಏನು ಮಾಡಿ ಬದುಕಬೇಕು ಎನ್ನುವುದರ ಬಗ್ಗೆ ಸರ್ಕಾರ ಚಿಂತನೆ ಮಾಡಲಿಲ್ಲ.ಅದರ ಬಗ್ಗೆ ಚಿಂತನೆ ಮಾಡಿ. ಅಲ್ಲಿ ಕೆಲಸ ಸೃಷ್ಠಿ ಮಾಡುವುದಕ್ಕೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಹೆಚ್ಚುವರಿಯಾಗಿ ಕೆಲಸ ಕೊಡುವುದಕ್ಕೆ ಇವರು ಹೋಗಲಿಲ್ಲ. ಇವತ್ತಿನ ದಿವಸ ನಮ್ಮ ಭಾಗದಲ್ಲಿ ಮತ್ತು ವಿಶೇಷವಾಗಿ ಇಡೀ ಕರ್ನಾಟಕದಲ್ಲಿ ಮಳೆಯ ಅಭಾವದಿಂದ ಬಿತ್ತನೆ ಕೆಲಸ ಕೂಡ ಸರಿಯಾಗಿ ಆಗಿಲ್ಲ. ಅಂತಹ ಒಂದು ಸಂದರ್ಭದಲ್ಲಿ ಮುಂದಿನ ದಿನಗಳಲ್ಲಿ ಮಳೆ ಬಾರದೇ ಇದ್ದರೆ ಏನು ಮಾಡಬೇಕೆಂಬುದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಅಂದರೆ ಇದರ ಬಗ್ಗೆ ಸರ್ಕಾರ ಏನಾದರೊಂದು concrete ಆಗಿ ಒಂದು ಸ್ಟೆಪ್ ಅನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಯಾರು ಉತ್ತರ ಕೊಡುತ್ತಾರೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಯೋ ಅಥವಾ ಕಂದಾಯ ಇಲಾಖೆ ಸಚಿವರು ಉತ್ತರ ಕೊಡುತ್ತಾರೋ ಗೊತ್ತಿಲ್ಲ. ಆದರೆ, ಇದಕ್ಕೆ ಏನು ಪರಿಹಾರ ಮಾಡುತ್ತೇವೆಂಬುದನ್ನು ಅವರು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅಂದರೆ, ಮುಂದೆ ಬರತಕ್ಕಂಥ ದಿನಗಳಲ್ಲಿ ಇದಕ್ಕೆ ಯಾವ ರೀತಿಯಾಗಿ ಜನರಿಗೆ ಏನು ಪರಿಹಾರ ಕೊಡುತ್ತೀರಿ? ಕೂಲಿ

ಕಾರ್ಮಿಕರಿಗೆ ಏನು ಕೆಲಸ ಕೊಡುತ್ತೀರಿ? ಹಾಗೆಯೇ ರೈತರಿಗೆ ನೀವು ಯಾವ ರೀತಿಯಾಗಿ ಸಹಾಯ ಮಾಡುತ್ತೀರಿ? ಏಕೆಂದರೆ, ನಮ್ಮ ಹವಾಮಾನದ ವೈಪರೀತ್ಯದಿಂದಕಳೆದ ನಾಲ್ಕೈದು ವರ್ಷಗಳಿಂದ ಸರಿಯಾಗಿ ಮಳೆ ಬರುತ್ತಿಲ್ಲದೇ ಇರುವುದನ್ನು ನಾವೆಲ್ಲ ನೋಡುತ್ತಿದ್ದೇವೆ. ಮತ್ತೆ ಇವತ್ತಿನ ದಿವಸ ನಾವು ಯಾವರೀತಿಯಾದ cropping pattern follow ಮಾಡಬೇಕೆಂಬುದರ ಬಗ್ಗೆ Agriculture Department ನವರುಸಹ ಸರಿಯಾಗಿ ಸಲಹೆ ಕೊಡುತ್ತಿಲ್ಲ. ಈಗ ಮಳೆ ಬಂದರೂ ಕೂಡ ಕೆಲವು ಕ್ರಾಪ್‌ಗಳನ್ನು ಬಿತ್ತನೆ ಮಾಡುವುದಕ್ಕೆ ಆಗುವುದಿಲ್ಲ.ಇದಕ್ಕೆ ಏನು ಪರಿಹಾರ ಮಾಡಬೇಕೆಂಬುದರ ಬಗ್ಗೆ ಯಾರು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಅಥವಾ ಇದಕ್ಕೆ ಯಾರು ಸರಿಯಾದಂಥ ಸಲಹೆಗಳನ್ನು ಕೊಡಬೇಕು? Agriculture Department ನ ಸಚಿವರು ಇಲ್ಲಿಲ್ಲ. ಬಹುಶಃ ಅವರು ವಿಧಾನ ಪರಿಷತ್ತಿನಲ್ಲಿದ್ದಾರೆಯೋ ಏನೋ ಗೊತ್ತಿಲ್ಲ. ಆದರೆ, ಅವರ ಮೇಲೆ ಬಹಳ ದೊಡ್ಡ ಜವ್ದಾಬ್ದಾರಿ ಇದೆ. ಇವತ್ತು ಇಲ್ಲಿ ಬರದ ಬಗ್ಗೆ ಚರ್ಚೆ ನಡೆಯುತ್ತಿದೆ. ಆದ್ದರಿಂದ, Agriculture minister . ರವರು ಸದನದಲ್ಲಿರಬೇಕಾಗಿತ್ತು. ಕಳೆದ ವರ್ಷ ಕೂಡ ನಮಗೆ ಬರ ಇತ್ತು. ಆಗಲೂ ಕೂಡ ಜನರಿಗೆ ಏನೂ ಪರಿಹಾರ ಸಿಗಲಿಲ್ಲ. ಈ ವರ್ಷ ಕೂಡ ಬರ ಇದೆ. ಆದ್ದರಿಂದ Agriculture ministry ಏನು ಮಾಡುತ್ತಿದೆ? what isthe plan of the Agriculture ministry? ಈಗ ಬರತಕ್ಕಂಥ ಬರವನ್ನು ಯಾವರೀತಿಯಾಗಿ ನಿಭಾಯಿಸಬೇಕೆಂದು ಅವರ contingency plan ಏನಿದೆ? ವಿಶೇಷವಾಗಿ ನಮ್ಮ ಭಾಗದಲ್ಲಿ ಅಂದರೆ, ಉತ್ತರ ಕರ್ನಾಟಕದಲ್ಲಿ ಬರ ಈಗಿನಿಂದ ಇರತಕ್ಕಂಥದಲ್ಲ. ಬಹಳ ವರ್ಷಗಳಿಂದ this is drought prone area ಎಂದು ಕೇಂದ್ರ ಸರ್ಕಾರವೇ ಒಪ್ಪಿಕೊಂಡಿರತಕ್ಕಂಥ ಭಾಗವಾಗಿದೆ. ಇದಕ್ಕೆ ಒಂದು long term plan ಆದರೂ ಇರಬೇಕಾಗಿತ್ತು. ಇದಕ್ಕೆ Agriculture Department ಜವಾಬ್ದಾರಿಯಾಗಿದೆ. ಏನೆಂದರೆ, ಸತತವಾಗಿ ಒಣ ಬೇಸಾಯದ ಮೇಲೆ ಅವಲಂಬಿತವಾಗಿರುವ ಈ ಭಾಗದಲ್ಲಿ ಏನಾದರೊಂದು ಶಾಶ್ವತ ಪರಿಹಾರವಾದ drought proofing ಮಾಡತಕ್ಕಂಥ ಜವಾಬ್ದಾರಿ Agriculture Department ಗೆ ಇರಬೇಕಾಗಿತ್ತು. ಕೃಷಿ ಸಚಿವರು ಕೃಷಿ ಇಲಾಖೆ ಬಗ್ಗೆ ಕಾಳಜಿ ಕೂಡ ವಹಿಸಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಈ ಮಾತನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಕಳೆದ ಹತ್ತಾರು ವರ್ಷಗಳಿಂದ ಬರದ

ಛಾಯೆಯಲ್ಲಿರುವಂಥ ಪ್ರದೇಶಗಳಿಗೆ ಒಂದು ಶಾಶ್ವತವಾದಂಥ ಪರಿಹಾರ-ವನ್ನು ಕೊಡಲಿಕ್ಕೆ ಏನು ಕ್ರಮ ಇಲಾಖೆ ಕೈಗೊಂಡಿದೆ? ಈ ಸಂದರ್ಭದಲ್ಲಿ ಒಂದು ಉದಾಹರಣೆ ಕೊಡುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ನಿರ್ದಿಷ್ಟವಾದಂಥ ಒಂದು experiment ಕೂಡ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಇದು ಸರ್ಕಾರದ ಗಮನಕ್ಕೆ ಗೊತ್ತಿದೆಯೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಗದಗ್‌ನಲ್ಲಿ ಒಂದು ಕೃಷಿ ವಿಜ್ಞಾನ ಕೇಂದ್ರ ಇದೆ. ನಾನು ಕೃಷಿ ವಿಜ್ಞಾನ ಕೇಂದ್ರಕ್ಕೆ ಹೋದಾಗ ಇಲ್ಲಿ drought proofing ಗೆ ಒಂದು experiment ಮಾಡುತ್ತಿದ್ದೇವೆಂದು ಅವರು ಹೇಳಿದರು. ಕಳೆದ 7 ವರ್ಷಗಳಿಂದ ಈ ಭಾಗದಲ್ಲಿ ಬರಗಾಲ ಪದೇಪದೇ ಬರುತ್ತಿದೆ. ಆದ್ದರಿಂದ, ಅದಕ್ಕೆ ಒಂದು ಶಾಶ್ವತವಾಗಿರತಕ್ಕಂಥ ಪರಿಹಾರ ಹುಡುಕುವುದಕ್ಕೋಸ್ಕರ ಕೇವಲ 100, 200 ಎಕರೆ ಪ್ರದೇಶದಲ್ಲಿ ಅಲ್ಲ, ಸುಮಾರು 3 ಸಾವಿರ ಎಕರೆ ಪ್ರದೇಶದಲ್ಲಿ drought proofing ಗೆ ಶಾಶ್ವತವಾದ ಒಂದು ಪರಿಹಾರ ಹುಡುಕುವುದಕ್ಕೋಸ್ಕರ ಒಂದು experiment ಮಾಡುತ್ತಿದ್ದೇವೆಂದು ಹೇಳಿದ್ದರು. ಅವರುಅಲ್ಲಿ ಏನು ಮಾಡಿದ್ದಾರೆಂದರೆ, they are using alternate farming method. ಲ್ಯಾಂಡ್ ಅನ್ನು ಪರ್ಯಾಯವಾಗಿ ಬಳಕೆ ಮಾಡತಕ್ಕಂಥದ್ದರ ಬಗ್ಗೆ ಅವರು ಪ್ರಯತ್ನ ಮಾಡುತ್ತಿದ್ದಾರೆ. ಅವರು ಅಲ್ಲಿ ಏನು ಮಾಡಿದರೆಂದರೆ, ಮಳೆ ಅವಲಂಬಿತವಾಗಿರುವ ಪ್ರದೇಶದಲ್ಲಿ ಮಾವು ಬೆಳೆಸತಕ್ಕಂಥದ್ದಾಗಲೀ ಅಥವಾ ತೋಟಗಾರಿಕೆಗೆ ಸಂಬಂಧಪಟ್ಟಂತಹ ಗಿಡಗಳನ್ನು ಬೆಳೆಸತಕ್ಕಂಥದರ ಜೊತೆಗೆ along with agriculture ಸುಮಾರು 3000 ಎಕರೆ ಪ್ರದೇಶದಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸಿದ್ದಾರೆ. Alternate crop pattern ಮಾಡುವುದರಿಂದ ಮಳೆ ಯಾವಾಗಲಾದರೂ ಬರಲಿ ಅಥವಾ ಬಾರದೇ ಇದ್ದರು ಕೂಡ 3 ರಿಂದ 5 ಸಾವಿರ ರೂಪಾಯಿ ಆದಾಯ ರೈತನಿಗೆ ಬಂದೇ ಬರುತ್ತದೆ. ಇದರಿಂದ ರೈತನಿಗೆ protection ಸಿಗುತ್ತದೆ. ಆದ್ದರಿಂದ, ಈ ರೀತಿಯಾದ ಮಾದರಿಯನ್ನು ಇಡೀ ರಾಜ್ಯದಲ್ಲಿ ಮಾಡುವುದಕ್ಕೆ ಇವತ್ತಿನ ದಿವಸ ಕೃಷಿ ಇಲಾಖೆಗೆ ಏನಾಗಿದೆ? Horticulture and Agriculture Departmentsಈ ಬಗ್ಗೆ ಜಂಟಿಯಾಗಿ ವಿಚಾರ ಮಾಡಿ ಮಾಡಬಹುದಾಗಿದೆ. ಹವಾಮಾನದ ವೈಪರೀತ್ಯದಿಂದ ಮಳೆ ಕೆಲವು ಸಂದರ್ಭದಲ್ಲಿ ಜೂನ್ ತಿಂಗಳಲ್ಲಿ ಅಥವಾ ಜುಲೈ ಅಥವಾ ಆಗಸ್ಟ್ ತಿಂಗಳಲ್ಲಿ ಬರಬಹುದಾಗಿದೆ. ಆದ್ದರಿಂದ, ನಾವು cropping pattern ನಲ್ಲಿ ಬದಲಾವಣೆ ಆದಾಗ ಯಾವಾಗಲಾದರೂ ಮಳೆ ಬಂದರೂ ಸಹ

ಕೊನೇಪಕ್ಷ ಒಬ್ಬ ರೈತನಿಗೆ ಒಂದು ಎಕರೆಗೆ ನಾಲ್ಕೈದು ಸಾವಿರ ರೂಪಾಯಿ ಶಾಶ್ವತವಾಗಿ ಬರತಕ್ಕಂಥ ಒಂದು ಪರ್ಯಾಯ ವ್ಯವಸ್ಥೆಯನ್ನು ಅಂದರೆ, alternate cropping method ಅನ್ನು Horticulture and Agriculture Departments ಮಾಡಬೇಕಾಗಿತ್ತು. ಆದರೆ, ಅದನ್ನು ಮಾಡುತ್ತಿಲ್ಲ. ಮುಂದೆಯಾದರೂ ಇದನ್ನು ಮಾಡಬೇಕೆಂಬುದು ನನ್ನ ಸಲಹೆಯಾಗಿದೆ. cloud seeding ಬಗ್ಗೆ ನಮ್ಮಸದನದಲ್ಲಿ ಚರ್ಚೆಯಾಗಿತ್ತು. cloud seeding ಬಗ್ಗೆ ಕೂಡ ಗದಗ್‌ನಲ್ಲಿರುವ KVK ಯಲ್ಲಿ experiment ನಡೆದಿದೆ. ಇಲ್ಲಿ ಮುಖ್ಯವಾಗಿ duct of the cloud is very important. Cloud seeding successful ಆಗುತ್ತದೆ ಅಥವಾ successful ಆಗುವುದಿಲ್ಲವೆಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಅಂದರೆ, ಯಾವಾಗಲೂ ಕೂಡ successful ಆಗಿದೆ ಎಂದು ಸಹ ಹೇಳುವುದಕ್ಕೆ ಆಗುವುದಿಲ್ಲ. ಇದರಲ್ಲಿ ಏನು ಮುಖ್ಯವಾಗಿದೆ ಎಂದರೆ. ಸಮಯಕ್ಕೆ ಸರಿಯಾಗಿ cloud seeding ಆಗಬೇಕು. ಅಂದರೆ, The ductof the cloud is very important in this. Cloud seeding ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿ ಅದಕ್ಕೆ ಟೆಂಡರ್ ಪ್ರೋಸೆಸ್ ಮಾಡಿಯಾರಿಗಾದರೂ ಟೆಂಡರ್ ಕೊಡುವಷ್ಟರಲ್ಲಿ ಆ Clouds ಹೋಗಿರುತ್ತದೆ. ಆಗ Cloud seeding successful ಆಗುವುದಿಲ್ಲ. This is the problem which is occurring. ಆದ್ದರಿಂದ ಸರ್ಕಾರ ಇದಕ್ಕೆ ಏನು ಮಾಡಬೇಕೆಂದರೆ, ಇದಕ್ಕೆ ತನ್ನದೇ ಆದಂಥ ಒಂದು ಇಲಾಖೆಯನ್ನು ಮಾಡಿ ಸರಿಯಾದ ಸಮಯಕ್ಕೆ cloud seeding ಮಾಡತಕ್ಕಂಥದನ್ನು ಅವರು ಮಾಡಿದರೆ ಖಂಡಿತವಾಗಿಯೂ successful ಆಗಬಹುದೆಂಬ ಒಂದು ವರದಿ ಇದೆ.ನಾನು ಈ ಸಂದರ್ಭದಲ್ಲಿ ಬೇರೆ ಬೇರೆ ವಿಷಯಗಳನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಏನು ಮಾಡಬಹುದೆಂಬುದನ್ನು ಮಾತ್ರ ಹೇಳುತ್ತಿದ್ದೇನೆ. ರಾಜಸ್ಥಾನ ಬಿಟ್ಟರೆ ಒಣ ಬೇಸಾಯದ ಮೇಲೆ ಅವಲಂಬಿತರಾಗಿರುವ ಅತೀ ದೊಡ್ಡ ರಾಜ್ಯ ಎಂದರೆ ಅದು ನಮ್ಮ ಕರ್ನಾಟಕ ಮಾತ್ರ, ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಶಾಶ್ವತವಾದ ನೀರಾವರಿಗೆ ಅವಕಾಶ ಇಲ್ಲವೋ ಅಂಥ ಕಡೆ ಪರ್ಯಾಯವಾಗಿ ಏನು ಮಾಡಬೇಕೆಂ-ಬುದು ಬಹಳ ಮುಖ್ಯವಾದ ವಿಚಾರ ಇದರಲ್ಲಿ water shed ಕೂಡ ಬಹಳ ಮುಖ್ಯವಾದಂಥ ಪಾತ್ರ ವಹಿಸುತ್ತದೆ. ಆದರೆ, ನಾನು ಬಹಳ ವ್ಯಥೆಯಿಂದ

ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ water shed development activities ಆಗಬೇಕಾಗಿತ್ತು. ಇವತ್ತಿನ ದಿವಸ ಒಂದು ಎಕರೆ ಭೂಮಿ ಅದು ಚೆಕ್‌ಬಂಡ್ ಆಗಿರಬಹುದು ಅಥವಾ ಅದು ಒಡ್ಡಾಗಿರಬಹುದು ಅಥವಾ ಕೃಷಿ ಹೊಂಡ ಆಗಿರಬಹುದು ಆದರೆ, ಅದು ಸಮರ್ಪಕವಾಗಿ ಟ್ರೀಟ್ ಮಾಡತಕ್ಕಂಥದ್ದರಲ್ಲಿ ಅಂದರೆ, ನಮ್ಮಲ್ಲಿ ಎಷ್ಟೇ ಮಳೆ ಬಿದ್ದರೂ ಸಹ ಆ ಮಳೆ ನೀರನ್ನು ಸಮರ್ಪಕವಾಗಿ ಭೂಮಿಯಲ್ಲಿ ಇಂಗಿಸಿ ವಾಟರ್ ಟೇಬಲ್ ಅನ್ನು ಜಾಸ್ತಿ ಮಾಡಬಹುದು ಮತ್ತು ನಮ್ಮಲ್ಲಿ ಮಳೆ ಶಾಶ್ವತವಾಗಿ ಬರದೇ ಇದ್ದರೂ ಸಹ ತೇವಾಂಶವನ್ನು ಕಾಯ್ದಿರಿಸುವಂಥ ಒಂದು ಪದ್ಧತಿಯನ್ನು ನಾವು ಇಲ್ಲಿಯವರೆಗೆ ಮಾಡುವುದಕ್ಕೆ ಆಗಿಲ್ಲ. ಏಕೆಂದರೆ, Water shed Department has completely failed in that direction. ಏಕೆಂದರೆ,ಒಂದು ಎಕರೆ ಭೂಮಿಯನ್ನು ಟ್ರೀಟ್ ಮಾಡುವುದಕ್ಕೆ ನಮಗೆ ಎಷ್ಟು ಹಣ ಬೇಕಾಗಿತ್ತೋ ಅಷ್ಟು ಹಣವನ್ನು ಸಮರ್ಪಕವಾಗಿ ಕೊಡುವುದಕ್ಕೆ ಅವರಿಂದ ಆಗಿಲ್ಲ. ಈ ಒಂದು ಯೋಜನೆಗೆ ಕೇಂದ್ರ ಸರ್ಕಾರ ಕೂಡ ಸಾಕಷ್ಟು ಹಣ ಕೊಡುವುದಕ್ಕೆ ಸಿದ್ಧವಾಗಿದೆ. ಆದರೆ, ಇದನ್ನು ಅನುಷ್ಠಾನ ಮಾಡುವುದಕ್ಕೆ ಕೃಷಿ ಇಲಾಖೆಯಲ್ಲಿ ಒಂದು ದೊಡ್ಡ ಗೊಂದಲ ಇದೆ. ಅದೇನೆಂದರೆ, Agriculture Departments and watershed development ಅನ್ನು bifurcate ಮಾಡುತ್ತೇವೆಂದು ನಮ್ಮ ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಏನು ಉದ್ದೇಶದಿಂದ ಹೇಳಿದ್ದಾರೋ ನನಗೆ ಗೊತ್ತಿಲ್ಲ. ಆದರೆ, ಇವತ್ತಿನ ದಿವಸ ಏನಾಗಿದೆ, ಎಂದರೆAgriculture Departments and water shed development ಅನ್ನು bifurcateಮಾಡುವುದರಿಂದ Agriculture Departments ನಲ್ಲಿ ಇರತಕ್ಕಂಥವರು watershed development ಗೆ ಹೋಗಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದು ತಮಗೂ ಸಹ ಗೊತ್ತಿದೆ. ಇವತ್ತಿನದಿವಸ policy decisionತೆಗೆದುಕೊಳ್ಳುವಾಗ ಇದರಿಂದ ಏನು ಪರಿಣಾಮವಾಗುತ್ತ-ದೆಂಬುದನ್ನು ಅರ್ಥ ಮಾಡಿಕೊಳ್ಳದೇ ಈ ರೀತಿ ಗೊಂದಲವನ್ನು ಸೃಷ್ಟಿ ಮಾಡತಕ್ಕಂಥವರ ಹಿಂದೆ ಉದ್ದೇಶ ಏನಿದೆ ಎಂಬುದನ್ನು ಕೂಡ ನಾವು ಅರ್ಥ ಮಾಡಿಕೊಳ್ಳಬೇಕು. ಇವತ್ತಿನ ದಿವಸ ರಾಜ್ಯದಲ್ಲಿ ಬಹಳಜವಾಬ್ದಾರಿಯುತವಾಗಿ ಕೆಲಸ ಮಾಡಬೇಕಾಗಿರ–ಬೇಕಾಗಿರುವಂಥಕೃಷಿ ಸಚಿವರು ಇವತ್ತು ಈ ರೀತಿಯಾದಂತಹ ಗೊಂದಲವನ್ನು ಸೃಷ್ಟಿ ಮಾಡಿ watershed department ನವರು ಸರಿಯಾಗಿ ಕೆಲಸ ಮಾಡುವುದಕ್ಕೆ

ಬಿಡುತ್ತಿಲ್ಲ. ಹಾಗೆಯೇ Agriculture Department ನಲ್ಲಿ ಕೂಡ Extension officers ಸರಿಯಾಗಿ ಕೆಲಸ ಮಾಡುವುದಕ್ಕೆ ಅವರಿಗೂ ಸಹ ಆಗುತ್ತಿಲ್ಲ. ಆದ್ದರಿಂದ, ಈ ಜವಾಬ್ದಾರಿಯನ್ನು ಇವತ್ತಿನ ದಿವಸ Agriculture Department ನವರು ಹೊರಬೇಕಾಗುತ್ತದೆ. ಕೊನೇಪಕ್ಷ ಮುಂದಿನ ದಿನಗಳಲ್ಲಿ ಪರ್ಯಾಯವಾಗಿ ಏನು ವ್ಯವಸ್ಥೆ ಮಾಡುತ್ತಾರೆಂಬ ಬಗ್ಗೆ ಕೂಡ ಅವರು ಸಮಪರ್ಕವಾಗಿ ಉತ್ತರ ಕೊಡಬೇಕಾಗುತ್ತದೆ. ಮತ್ತೊಂದು ವಿಚಾರ ಏನೆಂದರೆ., ವಿಶೇಷವಾಗಿ ಈಗ ಬರ ಬಂದಿರುವಂಥ ಸಂದರ್ಭಕ್ಕೆ ಸಂಬಂಧಪಟ್ಟಂತೆ ಮಾನ್ಯ ಯಡಿಯೂರಪ್ಪನವರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಮ್ಮ ಬಜೆಟ್‌ಅನ್ನು ಕಡಿತಗೊಳಿಸಿ ನಾವು ಈ ಕಾರ್ಯಕ್ರಮಕ್ಕೆ ಹಣವನ್ನು ಕೊಡಬಹುದೆಂಬ ಮಾತನ್ನು ಅವರು ಹೇಳಿದ್ದಾರೆ. ಅದನ್ನು ಸರ್ಕಾರ ಅನುಷ್ಠಾನ ಮಾಡುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ಕಾದು ನೋಡಬೇಕಾಗುತ್ತದೆ. ಏಕೆಂದರೆ, ಇದು ಬಹಳ ಒಳ್ಳೆಯ ಸಲಹೆಯಾಗಿದೆ. ಆದರೆ, ಈಸಲಹೆಯನ್ನು ಅನುಷ್ಠಾನ ಮಾಡುವುದಕ್ಕೆ ಸರ್ಕಾರದಿಂದ ಆಗುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ, ಇದಕ್ಕೆ public commitment ಸಹ ಬೇಕಾಗುತ್ತದೆ. There is a provision. ಏನೆಂದರೆ, ಬರ ಬಂದಾಗ ನಾವು ಎಲ್ಲವನ್ನೂ ಬದಿಗೊತ್ತಿ ಈ ಕೆಲಸ ಮಾಡಬೇಕಾಗುತ್ತದೆ. ರೈತರ ಮತ್ತು ಕೃಷಿ ಕೂಲಿ ಕಾರ್ಮಿಕರ ವಿಚಾರ ಏಕೆಂದರೆ ಇದರಲ್ಲಿ ರೈತರಿಗೆ ಅಷ್ಟೇ ಅಲ್ಲ. ಇವತ್ತು ಕೃಷಿ ಚಟುವಟಿಕೆಯಲ್ಲಿ ಅವಲಂಬಿತರಾಗಿರತಕ್ಕಂಥ ಕೃಷಿ ಕಾರ್ಮಿಕರ ಹಿತವನ್ನು ಸರ್ಕಾರ ಕಾಪಾಡಬೇಕಾಗುತ್ತದೆ. ಅದಕ್ಕಾಗಿ ಈ ಇಬ್ಬರ interest ನ್ನು protect ಮಾಡಲಿಕ್ಕೆ ಸರ್ಕಾರ ಏನೇನು ಕ್ರಮ ಕೈಗೊಳ್ಳುತ್ತದೆ ಎನ್ನತಕ್ಕಂಥದ್ದು ನಾವು ಕಾದು ನೋಡಬೇಕಾಗಿದೆ. ಅದಕ್ಕಾಗಿ ಸರ್ಕಾರ ಬರಿ ಕುಡಿಯುವ ನೀರಿನ ಬಗ್ಗೆ ಅಷ್ಟೇ ಅಲ್ಲ, ಇದರಲ್ಲಿ ಇನ್ನೊಂದು ವಿಶೇಷವಾಗಿ ರತಕ್ಕಂಥದ್ದು ಎಂದರೆ, ಮೇವಿನ ಸಂಗತಿ ಬಗ್ಗೆ ಬಹಳಷ್ಟು ಜನ ಶಾಸಕರು ಇದರ ಬಗ್ಗೆ ಸುದೀರ್ಘವಾಗಿ ಹೇಳಿದ್ದಾರೆ, ಅದನ್ನು ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಆದರೆಸರ್ಕಾರ ಇವತ್ತು commitment ತೋರಿಸ–ಬೇಕಾಗುತ್ತದೆ. ಇವತ್ತು ಮೇವಿನ ಸಮಸ್ಯೆಯನ್ನು ನೀವು ಯಾವ ರೀತಿಯಾಗಿ ನಿಭಾಯಿಸುತ್ತೀರಿ ಎನ್ನತಕ್ಕಂಥದ್ದನ್ನು ಈ ರಾಜ್ಯದ ಜನ ನೋಡುತ್ತಿದ್ದಾರೆ. ನೀವು ಈ ಗೋಹತ್ಯೆ ಕಾಯಿದೆ ನಿಷೇಧ ತಂದಾಗ ಯಾವ ರೀತಿ

ಮಾತನಾಡಿದ್ದೀರಿ ಎನ್ನುವುದನ್ನು ನಾವು ನೋಡಿದ್ದೇವೆ. ಸದನದ ರೆಕಾರ್ಡ್ಸ್‌ನಲ್ಲಿದೆ. ಆದರೆ ಇವತ್ತು ಆ ಗೋವು ಕಷ್ಟದಲ್ಲಿದ್ದಾಗ ನೀವು ಯಾವ ರೀತಿಯಾಗಿ ಕ್ರಮ ಕೈಗೊಳ್ಳುತ್ತೀರಿ ಎನ್ನುವುದು ಮುಖ್ಯವಾಗುತ್ತದೆ. ಏಕೆಂದರೆ ನೀವು ಏನು ಆಡುತ್ತೀರಿ ಆ ರೀತಿ ನಡೆಯುತ್ತೀರೋ ಇಲ್ಲವೋ ಎನ್ನುವುದನ್ನು ಜನ ನೋಡುತ್ತಾರೆ. ಅದಕ್ಕಾಗಿ ಇವತ್ತು ಗೋರಕ್ಷಣೆ ಬಹಳ ಮುಖ್ಯವಾಗಿದೆ. ಗೋಶಾಲೆ ಎಂದು ಇವತ್ತು ಯಾರಾದರೂ ತೆಗೆದರೆ ಅದಕ್ಕೆ ಪರಿಹಾರವೆಂದು ನೀವು ಯಾರೂ ಅಂದುಕೊಳ್ಳಬಾರದು. ಒಂದು ಹೋಬಳಿಗೆ ಒಂದು ಗೋಶಾಲೆ ತೆಗೆದರೂ ಪರಿಹಾರ ಆಗುವುದಿಲ್ಲ. ಇನ್ನು ಸ್ವಲ್ಪ ದಿವಸ ಹೋದರೆ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಒಂದು ಗೋಶಾಲೆಯನ್ನುತೆರೆದರೂ ಕೂಡ ಸಮಸ್ಯೆಯನ್ನು ನಿಭಾಯಿಸುವುದಕ್ಕಾಗು–ವುದಿಲ್ಲ. ಮಾನ್ಯ ಕೆ.ಎಂ.ಶಿವಲಿಂಗೇಗೌಡರು ಈಗ ಇಲ್ಲಿ ಇಲ್ಲ. ಅವರು ಮಾತನಾಡುವಾಗ ಬಹಳ ಸರಿಯಾಗಿ ಹೇಳಿದರು. ನೀವು ಒಂದು ತಾಲ್ಲೂಕಿಗೆ ಕೋಟ್ಯಂತರ ರೂ.ಗಳನ್ನು ಖರ್ಚು ಮಾಡುವಂಥ ಒಂದು ಸಂದರ್ಭವೂ ಕೂಡ ಬಂದರೂ ಬರಬಹುದು. ಅದಕ್ಕಾಗಿ ನಾನು ಜಾಸ್ತಿ ಏನೂ ಹೇಳುವುದಿಲ್ಲ.ಬೇರೆ ಬೇರೆ ಜಾನುವಾರುಗಳು ಮೇವು ಇಲ್ಲವೆಂದರೆ, ಕುರಿಗಳಾಗಲಿ ಅಥವಾ ಬೇರೆ ಬೇರೆ ಜಾನುವಾರುಗಳನ್ನು ರಕ್ಷಣೆ ಕೂಡ ಯಾವ ರೀತಿಯಾಗಿ ಮಾಡಬೇಕು ಎನ್ನುವುದನ್ನು ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಅದಕ್ಕಾಗಿ ವಿಶೇಷವಾಗಿ ನೀವು ಉದ್ಯೋಗ ಖಾತ್ರಿಗೆ ಇನ್ನೊಂದು ಅಡಿಷನಲ್ ಆಕ್ಷನ್ ಪ್ಲಾನ್‌ನ್ನು ಮಾಡಬೇಕು. ಸರ್ಕಾರದಿಂದ ಅದನ್ನು ಅನುಮೋದನೆ ತೆಗೆದುಕೊಂಡು ನೀವು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ(ಸಕಲೇಶಪುರ): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸರ್ಕಾರ ಅಧಿಕೃತವಾಗಿ 123ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿದರು ಆದರೆ ವಾಸ್ತವಿಕವಾಗಿ ಇನ್ನೂ ಹೆಚ್ಚು ತಾಲ್ಲೂಕುಗಳಲ್ಲಿ ಕೂಡ ಈ ಪರಿಸ್ಥಿತಿ ತಲೆದೋರಿದೆ. ನಮ್ಮ ಜಿಲ್ಲೆಯ ಬಗ್ಗೆ ನಾವು ಈಗಾಗಲೇ ಒತ್ತಾಯವನ್ನು ಮಾಡಿದ್ದೇವೆ. ನನ್ನ ಕ್ಷೇತ್ರಕ್ಕೆ ಮೂರು ತಾಲ್ಲೂಕುಗಳು ಬರುತ್ತವೆ. ಸಕಲೇಶಪುರ, ಆಲೂರು ತಾಲ್ಲೂಕು ಮತ್ತು ಹಾಸನ ತಾಲ್ಲೂಕಿನ ಒಂದು ಹೋಬಳಿ ಬರುತ್ತದೆ. ಹಾಸನ ತಾಲ್ಲೂಕು ಈಗಾಗಲೇ ಬರಪೀಡಿತ ಪ್ರದೇಶಕ್ಕೆ ಸೇರಿದೆ. ಆದರೆ ಇದೇ ಸಂದರ್ಭದಲ್ಲಿ ತಮಗೂ ಕೂಡ ಕರಾವಳಿ ಪ್ರದೇಶದ ಬಗ್ಗೆ ಗೊತ್ತಿದೆ. ಸನ್ಮಾನ್ಯ

ಸಭಾಧ್ಯಕ್ಷರಾದ ಬೋಪಯ್ಯನವರು ಕೂಡ ಆ ಪ್ರದೇಶದಿಂದ ಬಂದಿದ್ದಾರೆ. ಶಿವಮೊಗ್ಗ ಮತ್ತು ಕಾರವಾರದ ಕಡೆಯ ಅನೇಕ ಸದಸ್ಯರು ಇಲ್ಲಿ ಇದ್ದಾರೆ. ಇವತ್ತಿನ ಪರಿಸ್ಥಿತಿ ಹೇಗೆ ಇದೆ ಎಂದರೆ, ಮಲೆನಾಡು ಪ್ರದೇಶದಲ್ಲಿ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಕೂಡ ಮಳೆಯ ಪ್ರಮಾಣ ಅತ್ಯಂತ ಕಡಿಮೆ ಆಗಿದೆ. ಅಂಕಿ ಅಂಶಗಳ ಪ್ರಕಾರವೇ ಶೇಕಡ 20–30 ರಷ್ಟು ಮಳೆ ಇವತ್ತು ಬಿದ್ದಿದೆ. ಇವತ್ತು ಡ್ಯಾಂಗಳಿಗೆ ನೀರು ಬರುತ್ತಿಲ್ಲ. ಇವತ್ತು ಜುಲೈ 23ನೇ ತಾರೀಖು ತಮಗೆ ಅಂಕಿ ಅಂಶಗಳ ಪ್ರಕಾರ ಹೇಳಬೇಕಾದರೆ, ಮೇ ತಿಂಗಳಲ್ಲಿ ಹಾಸನದಲ್ಲಿ ವಾಡಿಕೆ ಮಳೆ 108 mm ಆಗಬೇಕಾಗಿತ್ತು, 40 mm. ಬಂದಿದೆ. ಜೂನ್ ತಿಂಗಳಲ್ಲಿ 102 mm ಬರಬೇಕಾಗಿತ್ತು 66 mm . ಬಂದಿದೆ. ಚಿಕ್ಕಮಗಳೂರಿನಲ್ಲಿ ಮೇ ತಿಂಗಳಲ್ಲಿ 102 mm ಬರಬೇಕಾಗಿತ್ತು ಕೇವಲ 34 mm ಬಂದಿದೆ. ಕೋಡಗಿನಲ್ಲಿ 148 mm ಆಗಬೇಕಾಗಿತ್ತು 30 mm . ಮಳೆ ಆಗಿದೆ. ಶಿವಮೊಗ್ಗದಲ್ಲಿ 98 mm ಬರಬೇಕಾಗಿತ್ತು 22 mm ಬಂದಿದೆ. ಅದೇ ಜೂನ್ ತಿಂಗಳಲ್ಲಿ ಹಾಸನದಲ್ಲಿ 152 mm ಬರಬೇಕಾಗಿತ್ತು 66 mm . ಬಂದಿದೆ. ಚಿಕ್ಕಮಗಳೂರಿನಲ್ಲಿ 224 mm ಬರಬೇಕಾಗಿತ್ತು 162 mm. ಮಳೆ ಆಗಿದೆ. ಕೊಡಗಿನಲ್ಲಿ 579mm ಬರಬೇಕಾಗಿತ್ತು 305 mm . ಬಂದಿದೆ. ಶಿವಮೊಗ್ಗದಲ್ಲಿ 451 mm ಬರಬೇಕಾಗಿತ್ತು 254 mm . ಬಂದಿದೆ. ನಮ್ಮ ಮಲೆನಾಡಿನ ಭಾಗದಲ್ಲಿಯೂ ಕೂಡ ಶೇಕಡಾ 30 ಕ್ಕಿಂತ ಹೆಚ್ಚು ಮಳೆ ಬಂದಿಲ್ಲ. ಪರಿಸ್ಥಿತಿಈ ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ.ಇದರ ದುಷ್ಪರಿಣಾಮವಾಗಿ ನಾವು ಏನು ಬಯಲುಸೀಮೆಯಲ್ಲಿ ಬಿತ್ತನೆ ಮಾಡಿಲ್ಲ, ಅದೆಲ್ಲಾ ಸರಿ. ಬಿತ್ತನೆ ಮಾಡಿದರೂ ಕೂಡ ಹೆಚ್ಚು ಪ್ರಮಾಣದಲ್ಲಿ ಹುಟ್ಟಿಲ್ಲ ಬೆಳೆ ಬಂದಿಲ್ಲ ಸರಿ. ಅದೇ ರೀತಿಯಲ್ಲಿ ನಾವು ಮಲೆನಾಡಿನ ಭಾಗದಲ್ಲಿ ಕಾಫಿ, ಏಲಕ್ಕಿ ಬೆಳೆ ಮಾಡುತ್ತೇವೆ. ಕಾಫಿಗೆ ಸರಿಯಾದ ರೀತಿಯಲ್ಲಿ ಮಳೆ ಆಗದಿದ್ದರೆ ಕಷ್ಟ ಕನಿಷ್ಠ 70–80 ಇಂಚು ಆದರೂ ಮಳೆ ಬರಬೇಕು. ಕನಿಷ್ಠ ಈಗಾಗಲೇ ಕಾಫಿಗೆ 40 ಇಂಚು ಮಳೆ ಆಗಬೇಕಾಗಿತ್ತು. ಆದರೆ ಇಲ್ಲಿ ಆಗಿರತಕ್ಕಂಥದ್ದು 15–20 ಇಂಚು ಮಳೆ ಈಗ ಬಂದಿದೆ. ಕಾಫಿ ಬೊರಾನ್ ಬಗ್ಗೆ ತಮ್ಗೂ ಕೂಡ ಗೊತ್ತಿದೆ. ಬೋರಾನ್ ಬೀಟಲ್ ಏನಾದರೂ ಒಂದು ಸಲ ಬಂದರೆ ಪ್ರತಿ ಎಕರೆಯಲ್ಲಿ ಶೇಕಡ 40 ರಷ್ಟು ಗಿಡಗಳನ್ನು ತೆಗೆಯಬೇಕಾಗುತ್ತದೆ. ಅದರ ಪರಿಣಾಮ ಮುಂದೆ ಆಗುತ್ತದೆ. ಅದೇ ರೀತಿ ಏಲಕ್ಕಿ ಬೆಳೆ ಹಾಸನ ಜಿಲ್ಲೆ ಸಕಲೇಶಪುರ ನನ್ನ ಕ್ಷೇತ್ರ ಇರಬಹುದು, ಕೊಡಗು, ಶಿವಮೊಗ್ಗ ಇರಬಹುದು ಈ ಭಾಗಗಳಲ್ಲಿ ಕೂಡ ಇವತ್ತು

ಏಲಕ್ಕಿಬೆಳೆಗೆ ರೋಗ ಬಂದಿದೆ ಮತ್ತು ಮಳೆ ಅತ್ಯಂತ ಕಡಿಮೆ ಆಗಿದೆ. ಈ ರೀತಿಯಾಗಿ ಇನ್ನೂ ಕೂಡ ಏಲಕ್ಕಿ ಸಂಪೂರ್ಣ ನಾಶವಾಗತಕ್ಕಂಥ ಸಂದರ್ಭ ಇದೆ. ಈಗಾಗಲೇ ಏಲಕ್ಕಿ ಬೆಳೆಗಾರರು ಎರಡು-ಮೂರು ವರ್ಷದಿಂದ ತುಂಬಾ ಒತ್ತಾಯ ಮಾಡುತ್ತಿದ್ದಾರೆ. ಇವತ್ತು ಏಲಕ್ಕಿ ದರ ಸಂಪೂರ್ಣ ಕಡಿಮೆ ಆಗಿದೆ. ರೋಗ ಬಂದಿರುವುದರಿಂದ ಇವತ್ತು ಸುಮಾರು ಹಾಸನ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ 4 ಜಿಲ್ಲೆಯಿಂದ ಸುಮಾರು 11 ಕೋಟಿ ರೂ.ಗಳ ಸಾಲವನ್ನು ಮಾಡಿದ್ದಾರೆ. ಸಾಲ ಮನ್ನಾ ಮಾಡಬೇಕೆಂದು ನಮ್ಮ ಹಿಂದಿನ ಮುಖ್ಯ ಮಂತ್ರಿಗಳಾದ ಮಾನ್ಯ ಸದಾನಂದಗೌಡರು ಇದ್ದಂಥ ಕಾಲದಲ್ಲಿ ಬಹಳ ಒತ್ತಾಯ ಮಾಡಿದೆವು. ನಮ್ಮ ಪಕ್ಷದ ನಾಯಕರಾದ ಮಾನ್ಯ ರೇವಣ್ಣನವರು ಮತ್ತು ನಾವು ಕೂಡ ಒತ್ತಾಯ ಮಾಡಿ ಧರಣಿ ಕೂಡ ಮಾಡಿದೆವು. ಆದರೆ ಆಶ್ವಾಸನೆ ಆಶ್ವಾಸನೆಯಾಗಿಯೆ ಉಳಿದಿದೆ. ಭರವಸೆ ಭರವಸೆಯಾಗಿಯೇ ಉಳಿದಿದೆ. ಅದು ಏನೂ ಕೂಡ ಈಡೇರಿಲ್ಲ. ಆ ನಿಟ್ಟಿನಲ್ಲಿ ನಾನು ಈಗಲೂ ಕೂಡ ಒತ್ತಾಯವನ್ನು ಮಾಡುತ್ತೇನೆ. ಸರ್ಕಾರ ಏಲಕ್ಕಿ ಬೆಳೆಗಾರರ ಸಾಲವನ್ನು ಮನ್ನಾ ಮಾಡಬೇಕು. ಜೊತೆಗೆ ಆಲೂಗಡ್ಡೆ ಬೆಳೆಯನ್ನು ನಮ್ಮ ಬಯಲು ಸೀಮೆ ಪ್ರದೇಶದಲ್ಲಿ ಸುಮಾರು ಒಂದು ಲಕ್ಷ ಎಕರೆಯಲ್ಲಿ ನಮ್ಮ ಆಲೂರು ತಾಲ್ಲೂಕಿನಲ್ಲಿ ಬೆಳೆಯುತ್ತಿದ್ದೆವು. ಈ ಸಲ ಶೇಕಡ 20 ರಷ್ಟು sowing ಆಗಿರತಕ್ಕಂಥದ್ದು. ಕೇವಲ 10 ರಷ್ಟು ಮಾತ್ರ ಬೆಳೆ ಉಳಿದಿದೆ. ಆದ್ದರಿಂದ ಆಲೂಗಡ್ಡೆಗೂ ಕೂಡ ಪರಿಹಾರವನ್ನು ಕೊಡಬೇಕು. ನನ್ನ ಕ್ಷೇತ್ರದ ಆಲೂರು ತಾಲ್ಲೂಕಿನಲ್ಲಿ ಬಿತ್ತಿದಂಥ ಹದಿಮೂರುವರೆ ಸಾವಿರ ಹೆಕ್ಟೇರ್ ಭೂಮಿಯಲ್ಲಿ ಬೆಳೆ ಉಳಿದಿರತಕ್ಕಂಥದ್ದು ಕೇವಲಮೂರುವರೆ ಸಾವಿರ ಹೆಕ್ಟೇರ್ ಮಾತ್ರ. ಅದರಲ್ಲಿಯೂ ಕೂಡ 80% ಪೂರ್ತಿಯಾಗಿ ಒಣಗಿ ಹೋಗಿದೆ. ಆದ್ದರಿಂದ ಸರ್ಕಾರ ಇದನ್ನು ಕೂಡ ಪರಿಗಣಿಸಿ ಈಗಾಗಲೇ ಆಲೂರು ತಾಲ್ಲೂಕನ್ನು ಪೂರ್ತಿಸಕಲೇಶಪುರ ತಾಲ್ಲೂಕಿನ ಕಸಬಾ ಮತ್ತು ಬೆಳಗೋಡ ಎರಡು ಹೋಬಳಿಗಳನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಈಗಾಗಲೇ ಮಾನ್ಯ ಕಂದಾಯ ಸಚಿವರನ್ನು ನಾನು ಒತ್ತಾಯ ಮಾಡಿದ್ದೇನೆ. ಮಾನ್ಯ ಕಂದಾಯ ಸಚಿವರು ಆಗಿರುವ ಉಪ ಮುಖ್ಯಮಂತ್ರಿಗಳು ಮೊನ್ನೆ ಅವರ ಜಿಲ್ಲೆಗೆ ಹೋದಂಥ ಸಂದರ್ಭದಲ್ಲಿ ಅವರೇ ಅಧಿಕಾರಿಗಳಿಗೆ ಪ್ರಶ್ನೆ ಮಾಡಿರುವಂಥ ಸಂದರ್ಭದಲ್ಲಿ ಶೇಕಡ 20 ಕ್ಕಿಂತ ಹೆಚ್ಚು ಮಳೆ ಆದರೆ ಬರ ಪೀಡಿತ ಪ್ರದೇಶದೊಳಗಡೆ ಬರುವುದಿಲ್ಲವೆನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಈ ಕಾನೂನನ್ನು ಸಡಿಲ ಮಾಡಬೇಕು. ಕೆಲವು ಸಲ 20,30,40 ಆದರೂ

ಕೂಡ ಆಯಾ ಸಂದರ್ಭಕ್ಕೆ ತಕ್ಕನಾಗಿ ತಾವು ಘೋಷಣೆ ಮಾಡಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ನಮ್ಮ ಪ್ರದೇಶ ಮಲೆನಾಡು ಆಗಿದ್ದರೂ ಕೂಡ ಕುಡಿಯುವ ನೀರಿನ ಹಾಹಾಕಾರ ಅತೀ ಹೆಚ್ಚು ಇದೆ. ಒಂದು ಹಳ್ಳಿಯಲ್ಲಿ 30–40 ಇರತಕ್ಕಂಥ ಮನೆಗಳಲ್ಲಿ 3–4 ಕಿ.ಮೀ. radius ನಲ್ಲಿ ಮನೆಗಳು ಇರುತ್ತವೆ. ಅವುಗಳಿಗೆ ನೀರು ಕೊಡಬೇಕಾಗುತ್ತದೆ. ಎಲ್ಲಕ್ಕಿಂತ ದುರಂತವೆಂದರೆ ಮಲೆನಾಡಿನಲ್ಲಿಕೂಡ ಇವತ್ತು ನೀರಿನ ಮಟ್ಟ ತುಂಬಾ ಕೆಳಗಡೆ ಇಳಿದಿರುವುದರಿಂದ ನೀರಿಗೂ ಕೂಡ ತುಂಬಾ ತೊಂದರೆ ಆಗಿದೆ. ಅದಕ್ಕಾಗಿ ನಾನು ಒತ್ತಾಯ ಮಾಡಿದ್ದೆ, ಹಿಂದೆ 123 ತಾಲ್ಲೂಕುಗಳಿಗೆ ಶಾಸಕರ ನೇತೃತ್ವದ taskforce ಸಮಿತಿಗಳಿಗೆ ಹಣವನ್ನು ಬಿಡುಗಡೆ ಮಾಡುತ್ತೀರಿ. ಅದೇ ಹಣವನ್ನು ಉಳಿದಂಥ ತಾಲ್ಲೂಕುಗಳಿಗೆ ಏಕರೂಪವಾಗಿ ಮಾಡಿ ಇಲ್ಲಿಯೂ ಕೂಡ ಕುಡಿಯುವ ನೀರಿಗೆ ತೊಂದರೆ ಇದೆ ಎನ್ನತಕ್ಕಂಥ ಮಾತನ್ನು ನಾನು ಈಗಾಗಲೇ ಹೇಳಿರುತ್ತೇನೆ. ಆದ್ದರಿಂದ ಉಳಿದ ತಾಲ್ಲೂಕುಗಳಿಗೂ ಕೂಡ ಹಣವನ್ನು ಬಿಡುಗಡೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಈಗಾಗಲೇ ಮಾನ್ಯ ಸದಸ್ಯರುಗಳೆಲ್ಲರೂ ಹೇಳಿದ್ದಾರೆ. ಯಾವುದೇ ಒಂದು ಕಾರ್ಯಕ್ರಮವನ್ನು ಜಾರಿಗೆ ಮಾಡಬೇಕಾದರೆ ಸಾಕಷ್ಟು ಸಿಬ್ಬಂದಿ ಇರಬೇಕಾಗುತ್ತದೆ. ಸಿಬ್ಬಂದಿ ಇಲ್ಲವೆಂದರೆ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಕೃಷಿ ಇಲಾಖೆಯಲ್ಲಿ ಶೇಕಡ 80 ರಷ್ಟು ಕೃಷಿ ಸಹಾಯಕರು ಇವತ್ತು ಇಲ್ಲ. ಅಲ್ಲಿ AD ಬಿಟ್ಟರೆ ಒಬ್ಬ AO ಅಥವಾ AOO ಇರುತ್ತಾರೆ. 16 ಜನ ಇರತಕ್ಕಂಥ ಕೃಷಿ ಸಹಾಯಕರ ಜಾಗದಲ್ಲಿ ಇಬ್ಬರು–ಮೂರು ಜನ ಇದ್ದಾರೆ. ಇವತ್ತು ಒಂದು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡುವ ಹಾಗೆ ಇಲ್ಲ. Revenue Department ನಲ್ಲಿ ಒಬ್ಬ RI ಇರಬಹುದು, VA ಸ್ಥಳಕ್ಕೆ ಹೋಗಿ ಏನೂ ಪರಿಶೀಲನೆ ಮಾಡುವ ಹಾಗೆ ಇಲ್ಲ. ಎಲ್ಲವನ್ನೂ ಕುಳಿತಂಥ ಜಾಗದಲ್ಲಿಯೇ ಬರೆಯುತ್ತಾನೆ. ಪಹಣಿಯಲ್ಲಿ ಅಲ್ಲಿ ಹೋಗಿ ನೋಡಿ ಯಾವ ಬೆಳೆ ಬರೆಯಬೇಕು ಯಾವ ಬೆಳೆ ಬರೆಯಬಾರದು ಎನ್ನುವುದು ಅಲ್ಲಿ ಇಲ್ಲ. ಈ ರೀತಿಯಾಗಿ ಅನೇಕ ಅನಾಹುತಗಳು ಆಗುತ್ತಿವೆ. ಸರ್ಕಾರ ವಿಶೇಷವಾಗಿ ಸಿಬ್ಬಂದಿಯನ್ನು ನೇಮಿಸಿ ಬರ ಪರಿಸ್ಥಿತಿಯನ್ನು ಪೂರ್ಣವಾಗಿ ನಿಭಾಯಿಸತಕ್ಕಂಥ ಒಂದು ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿ, ನನ್ನ ಕ್ಷೇತ್ರವಾದಂಥ ಆಲೂರು ತಾಲ್ಲೂಕು ಸಕಲೇಶಪುರ ತಾಲ್ಲೂಕು ಭಾಗಶಃ ಇದನ್ನು ಕೂಡ ಹೆಚ್ಚುವರಿಯಾಗಿ ಬರ ಪಿಡೀತ ಪ್ರದೇಶವೆಂದು ಘೋಷಿಸಿ

ಹಣವನ್ನು ಬಿಡುಗಡೆ ಮಾಡಿ ಜನರ ನೆರವಿಗೆ ಬರಬೇಕೆಂದು ನಾನು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ.ನರೇಂದ್ರ ಬಾಬು(ಮಹಾಲಕ್ಷ್ಮೀಲೇಔಟ್): ಸನ್ಮಾನ್ಯ ಉಪಾಧ್ಯಕ್ಷರೆ, ರಾಜ್ಯದ್ಯಂತ ಮುಂಗಾರು ಮಳೆ ಕೈ ಕೊಟ್ಟ ಹಿನ್ನೆಲೆಯಲ್ಲಿ ಇವತ್ತು ರಾಜ್ಯ ಬರದಿಂದ ತತ್ತರಿಸುತ್ತಿದೆ. ಬಹುಶಃ ಬೆಂಗಳೂರಿನ ಶಾಸಕನಿಗೂ, ಬರಕ್ಕೂ ಏನು ಸಂಬಂಧ ಎಂದು ಸ್ನೇಹಿತರು ಛೇಡಿಸುತ್ತಿದ್ದರು. ಬಹುಶಃ ಅವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಬೆಂಗಳೂರು ಒಂದು ರೀತಿಯಾಗಿ ನೇರವಾಗಿ ಬರಕ್ಕೆ ತುತ್ತಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.ಹೇಗೆ ಎಂದು ಪ್ರಶ್ನೆ ಮಾಡಿದರೆ, ಬೆಂಗಳೂರು ನಗರದಲ್ಲಿ ಒಂದೊಂದು ತರಹ ಬರ ಅಲ್ಲ. ಬೆಂಗಳೂರು ನಗರದಲ್ಲಿ ಇವತ್ತು ಅಂತರ್ಜಲ ಎಷ್ಟು ಬತ್ತಿಹೋಗಿದೆ ಎಂದರೆ, ಅದಕ್ಕೆ ಕಾರಣ ಬೆಂಗಳೂರಿನ ಅವೈಜ್ಞಾನಿಕ ಬೆಳವಣಿಗೆ. ಒಂದು vertical growth, ಇನ್ನೊಂದು horizontal growth.ಬಹುಶಃ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಡಿದ್ದೇ ಒಂದು ದೊಡ್ಡ ಅಪಾಯ.ಬೆಂಗಳೂರಿನ ಹಳೆಯ 279 ಕೆರೆಗಳು ಏನಿದ್ದವು, ಶ್ರೀ ಲಕ್ಷ್ಮಣರಾವ್‌ರವರು ವರದಿ ಕೊಟ್ಟಿದ್ದರು, ತದನಂತರ 276 ಚ.ಕಿ.ಮೀ ನಿಂದ 876 ಚ.ಕಿ.ಮೀ ರವರೆಗೆ ವಿಸ್ತರಿಸಲ್ಪಟ್ಟಿತು. ಸನ್ಮಾನ್ಯ ಸುರೇಶ್ ಕುಮಾರ್‌ರವರು ಸಹಾ ಇಲ್ಲಿ ಕುಳಿತುಕೊಂಡಿದ್ದಾರೆ. ಅವರಿಗೂ ಸಹ ಚೆನ್ನಾಗಿ ಗೊತ್ತಿದೆ. ಬೆಂಗಳೂರು ನಗರದಲ್ಲಿ ಒಂದು ಕಾಲದಲ್ಲಿ ನಾವು ಶಾಲೆಯಲ್ಲಿ ಕಲಿಯುತ್ತಿದ್ದ ದಿನಗಳಲ್ಲಿ ಅಂತರ್ಜಲ ಎನ್ನುವುದಕ್ಕಿಂತ ಹೆಚ್ಚಾಗಿ ತೆರೆದ ಬಾವಿಗಳಲ್ಲಿ 16,17 ಅಡಿಗಳಲ್ಲಿ ನೀರು ಸಿಗುತ್ತಿತ್ತು ರಾಜಾಜಿನಗರ 1ನೇ ಬ್ಲಾಕ್‌ನಲ್ಲಿ. ಇವತ್ತು ಕೊಳವೆ ಬಾವಿಯಲ್ಲಿ ಸುಮಾರು800-900 ಅಡಿ ಹೋದರೂ ಸಹ ಸಿಕ್ಕಂಥ ನೀರು ಒಂದು ತಿಂಗಳಲ್ಲಿ ಬತ್ತಿ ಹೋಗುತ್ತಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಬಹಳ ಮುಖ್ಯವಾಗಿ ಇವತ್ತು ರಾಜ್ಯದಲ್ಲಿ 123 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಈಗಾಗಲೇ ರಾಜ್ಯ ಸರ್ಕಾರ ಘೋಷಿಸಿದ್ದರೂ ಕೂಡ, ಇವತ್ತು 150 ತಾಲ್ಲೂಕುಗಳ ಬಗ್ಗೆ ಪರಿಸ್ಥಿತಿ ತೀರಾ ಹದಗೆಟ್ಟಿದೆ ಎಂದು ವರದಿ ಹೇಳುತ್ತದೆ. ಸಣ್ಣ ನೀರಾವರಿಯ ಕೆರೆಗಳು ಬಹುಶಃ ಈಗಾಗಲೇ ಲೆಕ್ಕದ ಪ್ರಕಾರ ಸುಮಾರು 2,522 ಕೆರೆಗಳು ಸಹ ಸಂಪೂರ್ಣವಾಗಿ ಖಾಲಿಯಾಗಿವೆ. ಸುಮಾರು 911 ಕೆರೆಗಳು 30% ಇದೆ. ಸುಮಾರು 911 ಕೆರೆಗಳು ಸಂಪೂರ್ಣವಾಗಿ ನಾಶವಾಗಿವೆ ಅಥವಾ ಬತ್ತಿಹೋಗಿವೆ ಎನ್ನುವ ಅಂಕಿ-ಅಂಶಗಳು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವತ್ತು ಬೆಂಗಳೂರಿನಲ್ಲಿ ಹಲವಾರು ರೀತಿಯ ಬರಗಳನ್ನು ನಾವು ಎದುರಿಸತಕ್ಕಂಥ ಒಂದು ದುಸ್ಥಿತಿಗೆ ಬಂದಿದ್ದೇವೆ. ಪತ್ರಿಕೆಗಳಲ್ಲಿ ತೆಗೆದುನೋಡಿದ ತಕ್ಷಣ ಬೆಂಗಳೂರು ನಗರದಲ್ಲಿ ಡೆಂಗ್ಯೂ ಆವರಿಸಿದೆ ಎಂದು ಕಾಣಿಸುತ್ತದೆ. ಏಕೆ ಆವರಿಸಿದೆ? ಬೆಂಗಳೂರು ನಗರದ ಕಲುಷಿತ ನೀರನ್ನು ಸುತ್ತಮುತ್ತಲಿನ ಹಳ್ಳಿಗಳಿಗೆ ಅಥವಾ ಕೆರೆಗಳಿಗೆ ಬಿಡತಕ್ಕಂಥದ್ದು ವೈಜ್ಞಾನಿಕವಾಗಿ ಬಿಡುತ್ತಿಲ್ಲ. ಬೆಂಗಳೂರು ಮಹಾನಗರದಲ್ಲಿ ಕಳೆದ ಒಂದು ತಿಂಗಳಿನಿಂದ ಕಸವನ್ನು ತೆಗೆದಿಲ್ಲ. ಹಲವಾರು ಸೊಳ್ಳೆಗಳಿಗೆ, ಹೆಗ್ಗಣಗಳಿಗೆ, ನಾಯಿಗಳಿಗೆ, ರೋಗರುಜಿನುಗಳಿಗೆ ಕಾರಣವಾಗಿದೆ. ನಾನು ಪತ್ರಿಕೆಯನ್ನು ಓದುತ್ತಿದ್ದಾಗ, ಬೆಂಗಳೂರು ನಗರದಲ್ಲಿ ಬರದ ಪ್ರಭಾವ ಏನೇನು ಆಗಿದೆ ಎನ್ನುವುದಕ್ಕೆ ತರಕಾರಿಗಳ ಬೆಲೆ ಎಷ್ಟು ವಿಕೋಪಕ್ಕೆ ಹೋಗಿದೆ ಎಂದರೆ, ಬೀನ್ಸ್ ಹೋದ ತಿಂಗಳು 45 ರೂಪಾಯಿ ಇತ್ತು. ಇವತ್ತು 60 ರೂಪಾಯಿ ಆಗಿದೆ. ಬೆಂಡೇಕಾಯಿ 40 ರೂಪಾಯಿ ಇತ್ತು, ಈಗ 55 ರೂಪಾಯಿ ಆಗಿದೆ. ಕ್ಯಾರೆಟ್ 30 ರೂಪಾಯಿ ಇತ್ತು, 55ರೂಪಾಯಿ ಆಗಿದೆ. ಬದನೆಕಾಯಿ 25 ರೂಪಾಯಿ ಇತ್ತು, 40 ರೂಪಾಯಿ ಆಗಿದೆ. ಮೂಲಂಗಿ 20 ರೂಪಾಯಿ ಇದ್ದಿದ್ದು 40 ರೂಪಾಯಿ ಆಗಿದೆ. ಈರುಳ್ಳಿ 10 ರೂಪಾಯಿ ಇದಿದ್ದು 20 ರೂಪಾಯಿ ಆಗಿದೆ. ಹಣ್ಣುಗಳ ಬೆಲೆ ಹೇಳತೀರದು, ಕಾಬೂಲ್ ಸೇಬು 100 ರೂಪಾಯಿ ಇದ್ದಿದ್ದು 150 ರೂಪಾಯಿ ಆಗಿದೆ. ಸಪೋಟಾ 30 ರೂಪಾಯಿ ಇದ್ದಿದ್ದು 60 ರೂಪಾಯಿ ಆಗಿದೆ. ಇನ್ನು ಹೂವುಗಳ ಬೆಲೆಯೂ ಅಷ್ಟೇ. ಹಳ್ಳಿಗಾಡಿನಲ್ಲಿ ವ್ಯತ್ಯಯ ಆಗುವಂತಹ ಉತ್ಪಾದನೆ ಹೇಗೆ ನಗರ ಪ್ರದೇಶದಬದುಕಿನ ಮೇಲೆ ನೇರ ಪ್ರಭಾವ ಬೀರುತ್ತದೆ ಎನ್ನವುದಕ್ಕೆ ಇದು ಸಾಕ್ಷಿ. ಇನ್ನು ಬರದ ಪ್ರಭಾವದಿಂದ ಹೋಟೆಲ್‌ಗಳನ್ನು ಆಹಾರ ಪದಾರ್ಥಗಳ ಬೆಲೆ ನೋಡಿದರೆ, ಅಕ್ಕಿ ಇಡ್ಲಿ ಹಿಂದಿನ ಬೆಲೆ 19 ರೂಪಾಯಿ ಇದ್ದಿದ್ದು, 25 ರೂಪಾಯಿ ಆಗಿದೆ. ದೋಸೆ 18 ರೂಪಾಯಿ ಇದ್ದಿದ್ದ, 24 ರೂಪಾಯಿ ಆಗಿದೆ. ನಾನು ಮಧ್ಯಮದ ಹೋಟೆಲ್‌ಗಳ ಬಗ್ಗೆ ಹೇಳುತ್ತಿದ್ದೇನೆ ಅಷ್ಟೇ ದೊಡ್ಡ ಹೋಟೆಲ್‌ಗಳ ಬಗ್ಗೆ ಹೇಳುತ್ತಿಲ್ಲ. ತೆಳು ಅವಲಕ್ಕಿ 29 ರೂಪಾಯಿ ಇದ್ದಿದ್ದು 39 ರೂಪಾಯಿ ಆಗಿದೆ. ಇವತ್ತು ಕಡಲೆಹಿಟ್ಟು 40 ರೂಪಾಯಿ–ಇದ್ದಿದ್ದು 65 ರೂಪಾಯಿ ಆಗಿದೆ. ನನಗೆ ಚೆನ್ನಾಗಿ ನೆನಪಿದೆ, ಭಾರತೀಯ ಜನತಾ ಪಕ್ಷ, 'ಎಲ್ಲಾ ಸಮಸ್ಯೆಗಳಿಗೂ ಬಿಜೆಪಿ ಪರಿಹಾರ' ಎನ್ನುವ ಒಂದು ಪ್ರಣಾಳಿಕೆಯನ್ನು ಹೊರಡಿಸುತ್ತಾ, ಕಾಂಗ್ರೆಸ್ ಸರ್ಕಾರ ಇದ್ದಾಗ ಏನಾಗಿದೆ, ಬಿಜೆಪಿ ಸರ್ಕಾರ ಬಂದ ಮೇಲೆ ಏನು ಮಾಡುತ್ತೇವೆಂದು ಹೇಳಿದ್ದರೆ. ಇವತ್ತು ಹೇಳಬೇಕಾಗುತ್ತದೆ ಬಹಿರಂಗವಾಗಿ,

ಇದೆಲ್ಲವುಕ್ಕೂ ಕಾರಣ, ಆಡಳಿತದಲ್ಲಿರ–ತಕ್ಕಂಥ ವ್ಯತ್ಯಯ. ಒಂದುಸುಸ್ಥಿತಿ ಇಲ್ಲದಿರತಕ್ಕಂಥದ್ದು, ದೃಢತೆ ಇಲ್ಲದಿರತಕ್ಕಂಥದ್ದು ಸಮಸ್ಯೆಗಳ ಬಗ್ಗೆ ಅನೇಕ ಹಿರಿಯರುಗಳು ಆಗಲೇ ಮಾತನಾಡುತ್ತಾ, ಇದು ಕರ್ನಾಟಕಕ್ಕೆ ಹೊಸತೇನೂ ಅಲ್ಲವೆಂದು ಹೇಳಿದರು. ಈ ಸರ್ಕಾರ ಆಡಳಿತಕ್ಕೆ ಬಂದ ಮೇಲೆ, ಎರಡು ಬಾರಿ ಬರವನ್ನು, ಒಂದು ಬಾರಿ ನೆರೆಯನ್ನು ಇವತ್ತು ಕಂಡಿದೆ. ಬಹುಶಃ ನೆರೆ ಮತ್ತು ಬರವನ್ನು ಕಾಣತಕ್ಕಂಥ ಅವಕಾಶ ಬಂತು. ಉತ್ತರ ಕರ್ನಾಟಕಕ್ಕೂ ನಮ್ಮ ಪಕ್ಷದ ನಿಯೋಗದಲ್ಲಿ ನಾನೂ ಸಹ ಹೋಗಿದ್ದೆ, ಬರ ಮತ್ತು ನೆರೆಯನ್ನು ಸಮರ್ಪಕವಾಗಿ ನಿರ್ವಹಿಸತಕ್ಕಂಥದ್ದು ಏಕೆ ಆಗಿಲ್ಲವೆಂದರೆ, ಇವತ್ತು ಆಡಳಿತ ರೂಢ ಪಕ್ಷ ತನ್ನ ದೃಢತೆಯನ್ನು ಮತ್ತು ಸದೃಢತೆಯನ್ನು ನಿಶ್ಚಿತವಾದಂತಹ ಒಂದು ಒಗ್ಗಟ್ಟಿನ ಕೊರತೆ ಮತ್ತು ಆಡಳಿತದ ಮೇಲೆ ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯಿಂದಾಗಿ ಇವತ್ತು ಎಲ್ಲವನ್ನೂ ನಿಭಾಯಿಸುವುದರಲ್ಲಿ ವಿಫಲರಾಗಿದ್ದರೆ. ನಾನು ನಿನ್ನೆ ಮೊನ್ನೆ ಪತ್ರಿಕೆಯಲ್ಲಿ ಓದುವಾಗ, ಈ ದೇಶದಲ್ಲಿ ಅಥವಾ ಈ ರಾಜ್ಯದಲ್ಲಿ ಎರಡು ರೀತಿಯಾದದ್ದನ್ನು ಕಾಣುತ್ತೇವೆ. ಒಂದು ಕಡೆ ಅತಿವೃಷ್ಟಿ.ಇವತ್ತು ಹಲವಾರು ಜನರು ಮಾತನಾಡುತ್ತಿರುವಾಗ ಮಾನ್ಯ ಮುನಿಯಪ್ಪನವರು ಹೇಳಿದರು, ಎತ್ತಿನಹೊಳೆ ಯೋಜನೆಯಿಂದ 24 ಟಿ.ಎಂ.ಸಿ. ನೀರನ್ನು ತಂದು ಬೆಂಗಳೂರಿಗೆ 3 ಟಿ.ಎಂ.ಸಿ. ನೀರು ಕೇಳುತ್ತಿದ್ದಾರೆ, 3 ಟಿ.ಎಂ.ಸಿ. ನೀರು ಕೊಡುತ್ತೇವೆಂದು ಹೇಳುತ್ತಿದ್ದಾರೆ, ನಮಗೆ 10 ಟಿ.ಎಂ.ಸಿ. ನೀರು ಬೇಕೆಂದು ಒಂದು ಕಡೆ ಬೇಡಿಕೆ ಇಡುತ್ತಿದ್ದೇವೆ. ಅದೇ ಪರಮಶಿವಯ್ಯ ವರದಿಯಲ್ಲೂ ಸಹ ನಾನು ಭಾಗವಹಿಸಿದ್ದೇನೆ. ಹಿಂದೆ ನಾನು ಶಾಸಕನಾಗಿ ಪ್ರಪ್ರಥಮವಾಗಿ ಆಯ್ಕೆಯಾಗಿ ಬಂದಾಗ, ಒಂದು ದಿನ ನಾನು ಹಾಗೂ ಬಿ.ಆರ್.ಪಾಟೀಲ್ ಹಲವಾರು ಜನ ಗೆಳೆಯರು ಸೇರಿ 'ಊರಿಗೊಂದು ಕೆರೆ, ಕೆರೆಗೆ ನದಿ ನೀರು' ಎಂದು ವಿಚಾರ ಸಂಕಿರಣವನ್ನು ಆಯೋಜಿಸಿದ್ದೆವು. ಇವತ್ತು 'ಊರಿಗೊಂದು ಕೆರೆ, ಕೆರೆಗೆ ನದಿ ನೀರು' ಎಂದು ಒಂದು ದಿಕ್ಕಿನಲ್ಲಿ ಯೋಚನೆ ಮಾಡಿದಾಗ, ಇವತ್ತು ವೈಜ್ಞಾನಿಕವಾಗಿ ನೋಡಿದಾಗ, ಸುಮಾರು 300 ಟಿ.ಎಂ.ಸಿ. ನೀರು ಸಮುದ್ರದ ಪಾಲಾಗುತ್ತಿರುವುದನ್ನು ನೋಡುತ್ತಿದ್ದೇವೆ. ನಮಗೆ ಚೈನಾ ದೇಶಕ್ಕೆ ಸರ್ಕಾರ ಕಳುಹಿಸಿತ್ತು. ಸುಮಾರು 700 ಕಿ.ಮೀ. ನಿಂದ ನೀರು ತಂದಿರತಕ್ಕಂಥದ್ದನ್ನು ನೋಡಿದ್ದೇವೆ. ನಮ್ಮ ರಾಜ್ಯದಲ್ಲಿ ನೈಸರ್ಗಿಕವಾದ ಇಷ್ಟು ಸಂಪತ್ತು ಇಟ್ಟುಕೊಂಡಿರುವಂಥ ನಾವು ಏಕೆ ಈ ಕೊರತೆಯನ್ನು ಎದುರಿಸುತ್ತಿದ್ದೇವೆ ಎನ್ನುವುದು ಒಂದು ಯಕ್ಷ ಪ್ರಶ್ನೆ. ಎಲ್ಲೋ ಒಂದು ಕಡೆ ಯಾವುದೋ ಒಂದು ಯೋಜನೆ ತೆಗೆದುಕೊಂಡಾಗ ಆ ಭಾಗದ ಜನ

ವಿರೋಧಿಸುವುದು. ಒಂದೇ ರಾಜ್ಯದಲ್ಲಿ ನಾವು ಈ ರೀತಿಯಾಗಿ ತಾರತಮ್ಯ ಮಾಡುವುದಾದರೆ, ಈ ದೇಶವನ್ನು ಮುಂದೆ ತೆಗೆದುಕೊಂಡು ಹೋಗುವುದಾದರೂ ಹೇಗೆ? ಒಂದು ಕಡೆ ಈ ದೇಶದಲ್ಲಿ ಬ್ರಹ್ಮಪುತ್ರಾ ನದಿ ಬೋರ್ಗರೆಯುವ ರೀತಿಯಲ್ಲಿ ಪ್ರವಾಹ ಕಾಡುತ್ತಿದೆ. ಇನ್ನೊಂದು ಕಡೆ ನಮ್ಮ ದೇಶದಲ್ಲಿ ಅನಾವೃಷ್ಟಿಯಿಂದ ಬಳಲುತ್ತಿರುವುದನ್ನು ಕಾಣುತ್ತಿದ್ದೇವೆ. ಇವತ್ತು ಈ ಸದನವನ್ನು ಎನ್ನುವುದಕ್ಕಿಂಥ ಹೆಚ್ಚಿಗೆ ನಮ್ಮ ಜನಗಳಲ್ಲೂ ಸಹ ನಿಶ್ಚಿತವಾದಂತಹ ಒಂದು ಸದೃಢತೆ ರಾಜಕೀಯ ಪಕ್ಷಗಳಲ್ಲಿ ಮುಂದೆ ಬರತಕ್ಕಂಥ ಸ್ಥಿತಿ ಈ ದೇಶದಲ್ಲಿ ಬರಬೇಕು. ಇಲ್ಲವೆಂದರೆ, ಈ ಒಂದು ರೀತಿಯಾಗಿ, ಚೌಚೌ mixture ಅಥವಾ ಏನು ಈ ರೀತಿಯಾಗಿ ವಿಂಗಡಿಸಿರತಕ್ಕಂಥ ಒಂದು ಸ್ಥಿರತೆ ಇಲ್ಲದಂತಹ ಸರ್ಕಾರವನರ್ನು ಯಾವಾಗ ಕೊಡುತ್ತಾರೋ, ಜನ ಅಧಿಕಾರಕ್ಕೆ ತರುತ್ತಾರೋ, ಈ ರೀತಿ ಅನಿಶ್ಚಿತತೆಗೂ ಹಲವಾರು ಕಾರಣವಾಗುತ್ತದೆ ಎನ್ನವುದು ನನ್ನ ಅನುಭವ. ಮಾನ್ಯ ರಾಮಕೃಷ್ಣ ಹೆಡಡೆಯವರು ಹೇಳುತ್ತಿದ್ದನ್ನು ನಾನು ಇವತ್ತು ಈ ಸದನದಲ್ಲಿ ಉಲ್ಲೇಖ ಮಾಡಲು ಬಯಸುತ್ತೇನೆ. ನಾನು presidential follow up Government ಅನ್ನುಈ ದೇಶದಲ್ಲಿ ತರತಕ್ಕಂಥ ಅಗತ್ಯತೆ ಇದೆ. ಇಲ್ಲವೆಂದರೆ ಮುಂದಿನದಿನಗಳಲ್ಲಿ ಯಾವುದೇ ಸರ್ಕಾರವೂ ಬರಲಿಕ್ಕೆ ಸಾಧ್ಯವಿಲ್ಲ. ಅದು ಕೇಂದ್ರ ಸರ್ಕಾರದಲ್ಲಿರಬಹುದು, ರಾಜ್ಯ ಸರ್ಕಾರದಲ್ಲಿರಬಹುದು, ಒಂದು absolute majority ಬರುವುದು ಮುಂದಿನ ದಿನಗಳಲ್ಲಿ ಕಷ್ಟ ಸಾಧ್ಯವಾಗಬಹುದು. ಇವತ್ತು ಜಾತಿಯಲ್ಲಿ ವ್ಯವಸ್ಥೆ, ಜಾತಿಜಾತಿಗಳಲ್ಲಿ ಬರತಕ್ಕಂಥ secula-rization ಅನ್ನು ನೋಡಿದಾಗ ಮುಂದಿನ ದಿನಗಳಲ್ಲಿಒಂದು ಸ್ಥಿರವಾದ ಸರ್ಕಾರ ಬರಲು ಕಷ್ಟವಾಗುತ್ತದೆಯೋ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಮಳೆ ಎನ್ನತಕ್ಕಂಥದ್ದು ಬಹಳ ಮುಖ್ಯ. ನಮ್ಮ ಕವಿ ಪಾಲ್ಕುರಿಕೆ ಸೋಮನಾಥ ರವರು ಒಂದು ಮಾತನ್ನು ಹೇಳುತ್ತಾರೆ," ಮಳೆಯೇ ಸರ್ವ ಜನರ ಆಸ್ತಿಯಂ, ಬೆಳೆಯೇ ಸರ್ವರಜೀವನಂ, ಶಿವನೇ ದೇವರಗಳ್ಗೆ ತಾನಾಶ್ರಯಂ ಎಂದು ಹೇಳುತ್ತಾರೆ. ಮಳೆಯ ಬಿತ್ತನೆ ಬಗ್ಗೆ ಮಾತನಾಡುತ್ತಿದ್ದರು. ನಾವು ಸಂಕಟ ಬಂದಾಗ ವೆಂಕಟರಮಣ ಎಂದು ಹೇಳುತ್ತೇವೆ, ಸಂಕಟ ಬಂದಾಗ ವೆಂಕಟರಮಣ ಅಲ್ಲ, ದೂರದೃಷ್ಟಿ ಇರಬೇಕು, Long Term programme ಇರಬೇಕು. ಒಂದು long plan ಇರಬೇಕು. ಈ ರಾಜ್ಯಕ್ಕೆ ಎಲ್ಲಿ ಅತಿವೃಷ್ಟಿ. ಹೆಚ್ಚು ಮಳೆ ಬರುತ್ತದೆ ಅಥವಾ

ಮಳೆಯ ಕೊರತೆ ಎಲ್ಲಿ ಕಾಣುತ್ತದೆ ಅಥವಾ ಮುಂದೆ ಏನಾಗುತ್ತದೆ, Short Term plan ಏನು ಎನ್ನುವುದು ಇಲ್ಲ. ಬಜೆಟ್‌ನಲ್ಲೂ ನಾನು ನೋಡುತ್ತಿದ್ದೇನೆ, ಎಲ್ಲೋ ಒಂದು ಕಡೆ ಅತಿವೃಷ್ಟಿಯ ಬಜೆಟ್ ಆಗುತ್ತದೆ,ಇನ್ನೊಂದು ಕಡೆ ಅನಾವೃಷ್ಟಿಯ ಬಜೆಟ್ ಆಗುತ್ತದೆ. ಬಹುಶಃ ಈ ದಿಕ್ಕಿನಲ್ಲಿ ಮಾನ್ಯ ಮುನಿಯಪ್ಪನವರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ ಹಳೇ ಮೈಸೂರಿನ ಭಾಗ ಅಥವಾ ಬಯಲು ಸೀಮೆ ಜನ ಕೋಲಾರದಲ್ಲಿ ಇವತ್ತು ಹೋದರೆ ಆ ನೀರಿನ ಕಟ್ಟೆಗಳನ್ನು ತೆಗೆದುಕೊಂಡು ಕಟ್ಟಾಕುತ್ತಾರೆ. ಅದು ಟೊಮ್ಯಾಟೋ ಇರಬಹುದು, ಕ್ಯಾಬೇಜ್ ಇರಬಹುದು ಅಥವಾ ಕ್ಯಾರೇಟ್ ಇರಬಹುದು, ಬೆಳೆಯುತ್ತಿರುವುದನ್ನು ಬೆಂಗಳೂರಿಗೆ ಕಳುಹಿಸು-ತ್ತಾರೆ. ನಮ್ಮ ರಾಜ್ಯದಲ್ಲೇ ಇರತಕ್ಕಂಥ ನೀರನ್ನು ತರತಕ್ಕಂಥ ಒಂದು ಶಾಶ್ವತ ಪ್ರಯತ್ನ ಮಾಡಿ ಸ್ವಾಮಿ. ಇಲ್ಲವೆಂದರೆ, piecemeal ಆಗುತ್ತದೆ. ನಾನುಇವತ್ತು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಹೇಳುತ್ತೇನೆ, ಬಹಳ ಹಿರಿಯರು, ಅನುಭವನಿಗಳು ಇದ್ದಾರೆ. ದೂರದೃಷ್ಟಿ ಯೋಜನೆಗಳನ್ನು ಹಾಕಿಕೊಳ್ಳದೇ ಹೋದರೆ, ಖಂಡಿತಯಾಗಿಯೂ ಈ ರಾಜ್ಯ ಉದ್ಧಾರವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಬಂಧುಗಳೆ, ಈ ಸಂದರ್ಭದಲ್ಲಿ ಇನ್ನೊಂದು ವಿನಂತಿಮಾಡುತ್ತೇನೆ, ಬೆಂಗಳೂರು ನಗರದಲ್ಲಿ, ಮೊನ್ನೆಯಷ್ಟೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದರು, ಬರಪೀಡಿತ ಪ್ರದೇಶಗಳಿಗೆ 136 ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರು. ದಯವಿಟ್ಟು, ಇವತ್ತು ನಾನು ಬೆಂಗಳೂರಿನ ಒಬ್ಬ ಶಾಸಕನಾಗಿ ಒಂದು ಬೋರ್‌ವೆಲ್ ತೋಡಿಸುವುದಕ್ಕೆ ಆಗುತ್ತಿಲ್ಲ. ಸನ್ಮಾನ್ಯ ಸಚಿವರುಗಳು, ಸನ್ಮಾನ್ಯ ಶಾಸಕರುಗಳು ಇಲ್ಲಿದ್ದಾರೆ, ಬೆಂಗಳೂರಿನ ಶಾಸಕರು ಒಂದು ಕಡೆ ಏನಾದರೂ ಕೆಲಸ, ಕಾರ್ಯಕ್ರಮಗಳನ್ನು ಮಾಡಬೇಕೆಂದರೆ ನಮ್ಮ MLA Grant ಬರುವುದಿಲ್ಲ. ನಾವೇನಾದರೂ BWSSB ನವರನ್ನು ಕೇಳಿದರೆ ಹಣ ಇಲ್ಲವೆಂದು ಹೇಳುತ್ತಾರೆ. Area ವೀಕ್ಷಣೆಗೆ ಹೋದಾಗ ಜನಗಳು ಕೇಳುತ್ತಾರೆ. ಇವತ್ತು ಮಹಾನಗರಪಾಲಿಕೆಯಲ್ಲಿ ತಮ್ಮದೇ ಆದ ಚೌಕಟ್ಟನ್ನು ಹಾಕಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ತಮ್ಮ ಮುಖೇನ ನಮ್ಮ ಉಸ್ತುವಾರಿ ಸಚಿವರುಗಳಿಗೆ, ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿಮಾಡುವುದೇನೆಂದರೆ, ದಯವಿಟ್ಟು ಬೆಂಗಳೂ-ರಿನ ಶಾಸಕರುಗಳು ಜನರಿಗೆ accountable ಆಗಿ, ಆಗಲೇ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು ಶಾಸಕರು ಕುಳಿತುಕೊಳ್ಳಬಾರದೆಂದು ಹೇಳುತ್ತಿದ್ದರು, ಖಂಡಿತವಾಗಿಯೂ ನಾನು

ಕುಳಿತುಕೊಳ್ಳುವಂತಹ ಶಾಸಕನೂ ಅಲ್ಲ. ನಮ್ಮ ಬೆಂಗಳೂರಿನ ಶಾಸಕರೂ ಅಲ್ಲ. ಜನರಿಗೆ ಉತ್ತರ ಕೊಡಬೇಕಾದರೆ, ಅವರು ಕೇಳತಕ್ಕಂಥ ಕೆಲಸ-ಕಾರ್ಯಗಳು ಆಗಬೇಕಾದರೆ, ಗ್ರಾಮೀಣ ಶಾಸಕರುಗಳಿಗೆ ಇದ್ದಹಾಗೆ ಹಲವಾರು PWD ಇದೆ, PMRY, PMGSY ಈ ರೀತಿ ಹಲವಾರು ಯೋಜನೆಗಳಿವೆ. ಆದರೆ ನಗರದ ಶಾಸಕರಿಗೆ ಯಾವುದೇ ಯೋಜನೆಗಳು ಇಲ್ಲ. ನಾವು depend ಆಗಿರ-ಬೇಕಾಗಿದ್ದು BWSSB BDA ಮತ್ತು BBMP.ದಯವಿಟ್ಟು ನಾವು ಏಕೆ ಶಾಶ್ವತವಾದ ಬರದಿಂದ ಅನುಭವಿಸುತ್ತಿದ್ದೇವೆಂದು ನಮ್ಮ ಕೆಲವು ಸಹೋದ್ಯೋಗಿ ಶಾಸಕರು ಮಾತನಾಡುತ್ತಿದ್ದರು. ಬೆಂಗಳೂರಿನಲ್ಲಿ 28 ಜನ ಶಾಸಕರು ಇದ್ದೇವೆ. ಬೆಂಗಳೂರಿನಿಂದ ಎಷ್ಟು revenue ಹೋಗುತ್ತದೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಎನ್ನುವುದು ನಿಮಗೆ ಗೊತ್ತು. ದಯವಿಟ್ಟು ಶಾಸಕರುಗಳನ್ನು empower ಮಾಡಿ ಏನೇನು ಸೌಲಭ್ಯಗಳನ್ನು ಜನಗಳು ಕೇಳುತ್ತಾರೆ ಅದನ್ನು ಕೊಡುವಂಥ ನಿಟ್ಟಿನಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವುದರಲ್ಲಿ ತಕ್ಷಣದಲ್ಲಿ ಒಂದು ಮೀಟಿಂಗ್‌ನ್ನು ಮಾನ್ಯ ಮುಖ್ಯ ಮಂತ್ರಿಗಳು ಕರೆದು ಆಯೋಜಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ನಾನು ಗುಲ್ಬರ್ಗಾಕ್ಕೆ ಅತಿವೃಷ್ಟಿ ಆದಾಗ ಹೋಗಿದ್ದೆ. ಗುಲ್ಬರ್ಗಾದ ಪಕ್ಕದಲ್ಲಿಯೇ ಸುಮಾರು 5 ಕಿ.ಮೀ. ಅಂತರದಲ್ಲಿ ಭೀಮಾ ನದಿ ಸೇರತಕ್ಕಂಥದ್ದು. ಇವತ್ತು ಏಕೆ ನಮ್ಮ ನದಿಗಳು ಅಥವಾ ನಮ್ಮ ಕೆರೆಗಳು ಹಾಳಾಗುತ್ತವೆ ಎನ್ನುವುದಕ್ಕೆ ಕಾರಣ ಹೇಳುತ್ತೇನೆ. ನನ್ನ ಹುಟ್ಟೂರು ನೆಲಮಂಗಲದ ಸಮೀಪ ಇರುವ ತಿಪ್ಪಗೊಂಡನ ಹಳ್ಳಿ ಕೆರೆಯಲ್ಲಿ ನಾವು ಈಜಾಡುತ್ತಿದ್ದೆವು ಸ್ವಾಮಿ. ಇವತ್ತು ಹೋಗಿ ನೋಡಿ ಆ ಕೆರೆ ಬತ್ತಿ ಹೋಗಿದೆ. ಆ ಕೆರೆಗೆ ಊರಿನ ಗ್ರಾಮಸಾರವೆಲ್ಲ ಹೋಗಿ ಸೇರುತ್ತದೆ. ಇದೇ ರೀತಿಯಾದ ಅನುಭವ ನಾನು ಗುಲ್ಬರ್ಗಾಕ್ಕೆ ಹೋದಾಗ ಊರಿನ ಗ್ರಾಮಸಾರವೆಲ್ಲ ಬರುವಂಥ ಜಾಗದಲ್ಲಿ ಹೆಣ್ಣುಮಕ್ಕಳು ನೀರಿಲ್ಲದೇ ಆ ಗಲೀಜು ನೀರಿನಲ್ಲಿ ಬಟ್ಟೆ ಒಗೆಯುತ್ತಿದ್ದರು. ಏಕೆ sewerage Treatment plant ಗಳನ್ನು ಹಾಕಲ್ಲ, ಅಳವಡಿಸಿಲ್ಲ ಎಂದು ನಾವು ಕೇಳಿದಾಗ ಕೆಟ್ಟು ಹೋಗಿ 5 ವರ್ಷವಾಯಿತು ಎಂದು ಹೇಳಿದರು. ಆ ಊರಿನ ಹೆಸರನ್ನು ನಾನು ಮರೆತು ಬಿಟ್ಟಿದ್ದೇನೆ. ಅದು ಗುಲ್ಬರ್ಗಾದಿಂದ ಕೇವಲ 5 ಕಿ.ಮೀ ಇತ್ತು. ನಮ್ಮ ಜೊತೆಯಲ್ಲಿ ಶ್ರೀಮತಿ ಮೋಟಮ್ಮನವರು ಮತ್ತು ಶ್ರೀ ಎಸ್.ಆರ್.ಪಾಟೀಲ್-ರವರು ಬಂದಿದ್ದರು. ನಾನುಏಕೆ ಹೇಳುತ್ತಿದ್ದೇನೆಂದರೆ, ಕೆರೆಗಳು

ಉಳಿಯಬೇಕು. ಬೇಕೆಂದರೆ ದಯವಿಟ್ಟು ಪ್ರತಿಯೊಂದು ಗ್ರಾಮಗಳಲ್ಲಿ sewerage Treatment plant ಗಳನ್ನು ಕಡ್ಡಾಯವಾಗಿ ಹಾಕುವಂಥದ್ದನ್ನು ಮಾಡಿ.ಇಲ್ಲವೆಂದರೆ ಊರಿನ ಗ್ರಾಮಸಾರ ಮತ್ತು ವೇಸ್ಟ್‌ನಿಂದ ಬರತಕ್ಕಂಥ ಗಲೀಜು ನೀರು ಎಲ್ಲಾ ಸೇರಿ ಆ ಕೆರೆಯನ್ನು ಎತ್ತಂಗಡಿ ಮಾಡಿಸುತ್ತಾರೆ. ಒಂದು ಕೆರೆಯನ್ನು ನಿರ್ಮಾಣ ಮಾಡತಕ್ಕಂಥ ಒಂದು ಶಕ್ತಿ ಮತ್ತು ತಾಕತ್ತು ನಮಗೆ ಇಲ್ಲ. ಇವತ್ತು ತಿಪ್ಪಗೊಂಡನಹಳ್ಳಿ ಕೆರೆಯ ಹಣೆಬರಹ ಹೀಗೆಯೇ ಆಗಿದೆ. ಬೆಂಗಳೂರಿಗೆ ನೀರು ಕೊಡುತ್ತಿದ್ದಂತಹ ತಿಪ್ಪಗೊಂಡನಹಳ್ಳಿ ಕೆರೆಯಲ್ಲಿ ನೀರು ಇಲ್ಲ. ನಾನು ಹೋಗಿ ನೋಡಿದೆ. ಇಡೀ ಪೀಣ್ಯ ಇಂಡಸ್ಟ್ರಿಯಲ್ ನೀರು ಅಲ್ಲಿಗೆ ಹೋಗಿ ಸೇರುತ್ತದೆ. ಸನ್ಮಾನ್ಯ ಸಚಿವರಾದ ಸುರೇಶ್ ಕುಮಾರ್‌ರವರು ಒಂದು ವಿಶೇಷವಾದ ಸಭೆಯನ್ನು ಕರೆದಿದ್ದರು. ಮತ್ತೆ ಸಭೆ ಕರೆಯುತ್ತೇನೆ ಎನ್ನುವಂಥ ಮಾತನ್ನು ಕೊಟ್ಟಿದ್ದರು ಇನ್ನೂ ಸಭೆ ಕರೆದಿಲ್ಲ. ಇವತ್ತು 480 ಕೆರೆಗಳು ಕಮಾಂಡ್ ಏರಿಯಾದಲ್ಲಿ ಅರ್ಕಾವತಿ ಇನ್ನೊಂದು ಕಡೆ ಕುಮದ್ವತಿ ನದಿ. ನಂದಿಬೆಟ್ಟದಿಂದ ಒಂದು ಕಡೆ ಇನ್ನೊಂದು ಶಿವಗಂಗೆ ಬೆಟ್ಟದಿಂದ ಈ ಎರಡೂ ಕಡೆಯಿಂದ ಬರತಕ್ಕಂಥ catchment area ದಲ್ಲಿ ಈ ಒಂದು ನದಿಯು ಎಡ ಮತ್ತು ಬಲಭಾಗದಲ್ಲಿ 5 ಕಿ.ಮೀ.ಇದ್ದ ನದಿಯ ಪಾತ್ರವನ್ನು ಒಂದು ಕಿ.ಮೀ.ಗೆ reduce ಮಾಡಿದರು. ಇವತ್ತು ಕೆರೆಗಳಲ್ಲಿನ connectivity ಯನ್ನು disconnect ಮಾಡಿದರು. ಏಕೆ ಬೆಂಗಳೂರು ಬರದಿಂದ ತತ್ತರಿಸುತ್ತಿದೆಂದರೆ, ಇವತ್ತು ಎಲ್ಲರಿಗೂ ಬೆಂಗಳೂರು ಬೇಕು. ಇಲ್ಲಿಯ ಹವಾಗುಣ ಚೆನ್ನಾಗಿದೆ. ದೆಹಲಿಗೆ ಹೋದರೂ ಬೆಂಗಳೂರು ಹವಾಗುಣ ಚೆನ್ನಾಗಿ ಇರುವುದರಿಂದ ಅಲ್ಲಿ ಒಂದು ಸೈಟ್ ನೋಡಿ ಎಂದು ಹೇಳುತ್ತಾರೆ. North-East ಗೆ ಹೋದರೂ ಬೆಂಗಳೂರಿನಲ್ಲಿ ಒಂದು Master Degree ಮಾಡಬೇಕು ನಮ್ಮ ವಿದ್ಯಾರ್ಥಿಗಳಿಗೆ ಒಂದು ಜಾಗ ಕೊಡಿ ಎನ್ನುವ ಮಾತನ್ನು ಹೇಳುತ್ತಾರೆ. ಆದರೆ ಬೆಂಗಳೂರಿನಲ್ಲಿರತಕ್ಕಂಥ ಸಮಸ್ಯೆಯನ್ನು ಬೆಂಗಳೂರಿಗೆ ಇರುವ ಇಂತಹ ಶಾಶ್ವತ ಬರವನ್ನು ನಿಭಾಯಿಸುವಲ್ಲಿ ಸರ್ಕಾರ ಗಮನ ಹರಿಸಬೇಕು ಎನ್ನುವಂಥ ಮಾತನ್ನು ಹೇಳುತ್ತೇನೆ. ಕೊನೆಯದಾಗಿ ಒಂದು ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಬೆಂಗಳೂರಿನಲ್ಲಿ ರೇನ್ ವಾಟರ್ ಹಾರ್ವೆಸ್ಟನ್ನು ಕಡ್ಡಾಯವಾಗಿ ಮಾಡುವಂಥದ್ದು ಬಹಳ ಮುಖ್ಯವಿದೆ. ಬಹುಶಃ ಆ ದಿಕ್ಕಿನಲ್ಲಿ ನಾನು ಕಸದ ಬಗ್ಗೆ ಬೆಳಿಗ್ಗೆ ಮಾತನಾಡುತಿದ್ದೆ. ಆ ಪ್ರಶ್ನೆ ಶೂನ್ಯವೇಳೆಗೆ ಹೊರಟು ಹೋಯಿತು. ಕಡ್ಡಾಯವಾಗಿ ಪ್ಲಾಸ್ಟಿಕ್ ಬ್ಯಾನ್ ಮಾಡಿ, ಸ್ವಾಮಿ.

ಬೆಂಗಳೂರಿನ ಕಸವನ್ನು ಹಳ್ಳಿಯ ರೈತರು ಏಕೆ ಒಪ್ಪುತ್ತಿಲ್ಲವೆಂದರೆ, ಕಸವನ್ನು ಎಲ್ಲಾ ಮಿಕ್ಸ್ ಮಾಡಿಕೊಡುತ್ತಿದ್ದೇವೆ. ಆದ್ದರಿಂದ ಕಡ್ಡಾಯವಾಗಿ ಸರ್ಕಾರದ ಇಚ್ಛಶಕ್ತಿಯನ್ನು ಈ ಕಡೆ ಕೊಡಿ. ಎಲ್ಲಾ 224 ಜನ ಶಾಸಕರು ಈ ಪ್ಲಾಸ್ಟಿಕ್‌ನ್ನು ಬ್ಯಾನ್ ಮಾಡತಕ್ಕಂಥದ್ದರ ಕಡೆ ಇದ್ದಾರೆ. ಮೊದಲು ಬೆಂಗಳೂರಿನ ಕಸವನ್ನು ಸ್ವಾಗತ ಮಾಡುತ್ತಿದ್ದರು. ಆದರೆ ಇವತ್ತು ಆ ಕಸವನ್ನು ತಿರಸ್ಕಾರ ಮಾಡುತ್ತಿದ್ದಾರೆ. ಕೊನೆಯದಾಗಿ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. 2009 ರಲ್ಲಿ ಕರ್ನಾಟಕದಲ್ಲಿ ನೆರೆಹಾವಳಿ ಬಂತು. ಆ ಸಂದರ್ಭದಲ್ಲಿ ಕರ್ನಾಟಕದ. ವಿಶೇಷವಾಗಿ ಉತ್ತರ ಕರ್ನಾಟಕದ ಬಹುಭಾಗ ಜಿಲ್ಲೆಗಳು ಮತ್ತು ನಗರಗಳು ಅತಿವೃಷ್ಟಿಯಿಂದ ತತ್ತರಿಸಿ ಮುಳುಗಿ ಹೋದವು.ಆ ಸಂದರ್ಭದಲ್ಲಿ ಸಭಾಧ್ಯಕ್ಷರಾಗಿದ್ದಂಥ ಮಾನ್ಯ ಜಗದೀಶ್ ಶೆಟ್ಟರ್‌ರವರು ರೆಡ್ಡಿಗಳ ಒಂದು ಕೃಪಾಕಟಾಕ್ಷದಿಂದ ಮಂತ್ರಿಗಳಾದರು. ಇವತ್ತು ಬರ ಬಂದಿದೆ ಮಂತ್ರಿಗಳಾಗಿದ್ದಂಥವರು ಇವತ್ತು ಮುಖ್ಯ ಮಂತ್ರಿಯ ಸ್ಥಾನದಲ್ಲಿದ್ದಾರೆ. ಇವತ್ತು ಏಕೋ ಗೊತ್ತಿಲ್ಲ ಬಹುಶಃ ಕಾಕತಾಳೀಯವಾಗಿ ನೆರೆ ಮತ್ತು ಬರ ಬಂದಾಗ ಪ್ರಮೋಷನ್ ಆಗಿ ಮುಖ್ಯಮಂತ್ರಿ ಸ್ಥಾನದಲ್ಲಿ ಹೋಗಿ ಕುಳಿತಂಥ ಮಾನ್ಯ ಜಗದೀಶ್ ಶೇಟ್ಟರ್‌ರವರಿಗೆ ಮನವಿ ಮಡುತ್ತೇನೆ. ದಯವಿಟ್ಟು ಶಾಶ್ವತವಾದ ದಿಕ್ಕಿನಲ್ಲಿ ನಾವು ಈ ಸಮಸ್ಯೆ ಪರಿಹರಿಸೋಣ. ನದಿಯ ಜೋಡಣೆ ಇರಬಹುದು ಇದರ ಬಗ್ಗೆ ನಾವು ಶಾಶ್ವತವಾದ ದಿಕ್ಕಿನಲ್ಲಿ ಚಿಂತನೆ ಮಾಡಿದರೆ ಮಾತ್ರ ಇದಕ್ಕೊಂದು ಪರಿಹಾರ ಸಿಗಬಹುದು. BPL card ಇವತ್ತು ನವೀಕರಣ ಮಾಡಬೇಕಾದರೆ ಕಡ್ಡಾಯವಾಗಿ ರತಕ್ಕಂಥ ಆ Income Certificate ನ್ನು ರದ್ದು ಮಾಡಿ ಸ್ವಾಮಿ. ಇವತ್ತು ಬಡವರು ಹೋಗಿ Income Certificate ತೆಗೆದುಕೊಳ್ಳಬೇಕಾದರೆ ನೆಮ್ಮದಿ ಕೇಂದ್ರ ಮತ್ತು Bangalore one centre ನಲ್ಲಿ ಏನಾಗಿದೆ ಎಂದು ಮಾನ್ಯ ಸುರೇಶ್ ಕುಮಾರ್‌ವರಿಗೆ ಗೊತ್ತಿದೆ. ಅಲ್ಲಿಗೆ ಹೋಗಿ ನೋಡಿದರೆ ಜನರ ಸ್ಥಿತಿ ಗೊತ್ತಾಗುತ್ತದೆ.

ಉಪಾಧ್ಯಕ್ಷರು: ಒಂದು ನಿಮಿಷ, ನೀವು demands ಮೇಲೆ ಚರ್ಚೆಯನ್ನು ಮುಂದುವರೆಸಿ.

ಶ್ರೀ ನೆ.ಲ.ನರೇಂದ್ರಬಾಬು: ನಾನು ನನ್ನ ಮಾತನ್ನು ಮುಗಿಸುವುದಕ್ಕೆ ಮುಂಚೆ ನೀವು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳುತ್ತಾ, ಈ ಒಂದು ಕಸದ ಬರ ನೀರಿನ ಬರ ಮತ್ತು ದುಪ್ಪಟವಾಗು–ತ್ತಿರುವ ಬೆಲೆಯ ಬರಗಳನ್ನು ನಿಭಾಯಿಸುವ ದಿಕ್ಕಿನಲ್ಲಿ ರಾಜ್ಯ ಸರ್ಕಾರ ಸಮರೋಪಾದಿಯಲ್ಲಿ

ಕಾರ್ಯೋನ್ಮುಖರಾಗಬೇಕೆಂದು ಹೇಳುತ್ತಾ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಆಗ್ರಹಿಸಿ ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ರಾಜು(ರಾಮನಗರ): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾತನಾಡಿರತಕ್ಕಂಥ ಎಲ್ಲಾ ಹಿರಿಯರು ಈ ರಾಜ್ಯದ ಇತಿಹಾಸದಲ್ಲಿ 41 ವರ್ಷದ ನಂತರ ಇಂತಹ ಒಂದು ಭೀಕರ ಬರಗಾಲ ಬಂದಿದೆ ಎಂದು ಹೇಳಿದ್ದಾರೆ. ನಮ್ಮ ರಾಮನಗರ ತಾಲ್ಲೂಕಿನಲ್ಲಿ 45% ಗಿಂತ ಮಳೆ ಕಡಿಮೆ ಆಗಿದೆ ಎಂದು ಅಂಕಿ ಅಂಶಗಳನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಮೊನ್ನೆ KDP ಸಭೆಯಲ್ಲಿ ಕೂಡ ರಾಮನಗರ ತಾಲ್ಲೂಕಿನಲ್ಲಿ ಕೇವಲ ಒಂದು percentage ಮಾತ್ರ ಬಿತ್ತನೆ ಆಗಿದೆ ಎಂದು ಹೇಳಿ ವರದಿ ಕೊಟ್ಟಿದ್ದಾರೆ. ರಾಮನಗರ ಜಿಲ್ಲೆಯಲ್ಲಿ ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ಈ 4 ತಾಲ್ಲೂಕಿನಲ್ಲಿ ರಾಮನಗರ ಮತ್ತು ಚನ್ನಪಟ್ಟಣವನ್ನು ವ್ಯತ್ಯಾಸ ಮಾಡಿ ನೋಡಿದಾಗ ಕೇವಲ 2mm ಮಾತ್ರ ರಾಮನಗರದಲ್ಲಿ ಜಾಸ್ತಿ ಮಳೆ ಆಗಿದೆ ಎಂದು ವರದಿ ಕೊಟ್ಟಿದ್ದಾರೆ. ಆದ್ದರಿಂದ ರಾಮನಗರವನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿಲ್ಲ. ಅನೇಕ ಸಂದರ್ಭದಲ್ಲಿ ಅಂಕಿ ಅಂಶಗಳ ಲೆಕ್ಕ ಹಾಕಿದಾಗ ಚನ್ನಪಟ್ಟಣಕ್ಕಿಂತ ರಾಮನಗರ ಕಡಿಮೆ ಇದ್ದರೂ ಕೂಡ ಅದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೋ ಗೊತ್ತಿಲ್ಲ. ದಯಮಾಡಿ ರಾಮನಗರವನ್ನು ಕೂಡ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಕಂದಾಯ ಮಂತ್ರಿಗಳಿಗೆ ವಿನಂತಿಯನ್ನು ಮಾಡಿಕೊಂಡು ನಾನು ಈಗಾಗಲೇ ಪತ್ರವನ್ನು ಕೊಟ್ಟಿರುತ್ತೇನೆ. ರಾಮನಗರದಲ್ಲಿ ಸುಮಾರು 380 ಹಳ್ಳಿಗಳು ಇದ್ದರೂ ಕೂಡ ಅದರಲ್ಲಿ ಸುಮಾರು 60 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಜಾಸ್ತಿಯಾಗಿದೆ. ಈಗಾಗಲೇ ಸುಮಾರು 18 ಹಳ್ಳಿಗಳಲ್ಲಿ ಟ್ಯಾಂಕರ್‌ಗಳ ಮೂಲಕ ನೀರನ್ನು ಸರಬರಾಜು ಮಾಡುತ್ತಿದ್ದೇವೆ. ಜೊತೆಗೆ 150 ಹಳ್ಳಿಗಳಲ್ಲಿ ಹೊಸದಾಗಿ 150 ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆ. ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಈಗಾಗಲೇ ಕೊರೆದಂಥ ಕೊಳವೆಬಾವಿಗಳಲ್ಲಿ ಸುಮಾರು 23 ಕೊಳವೆ ಬಾವಿಗಳು ಬತ್ತಿ ಹೋಗಿವೆ. 700–800 ಅಡಿ ಬೋರ್‌ವೆಲ್ ಕೊರೆದು ಮೂರು ತಿಂಗಳಾದರೂ ಕೂಡ ಈಗಾಗಲೇ 28 ಕೊಳವೆ ಬಾವಿಗಳು ಬತ್ತಿ ಹೋಗಿವೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ತಾವು ಕೂಡ ಸರ್ಕಾರಕ್ಕೆ ರಾಮನಗರ ತಾಲ್ಲೂಕನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ರಾಮನಗರ ತಾಲ್ಲೂಕಿನಲ್ಲಿ ವಿಶೇಷವಾಗಿ ರಾಗಿ ಮತ್ತು ನೆಲಗಡಲೆಯನ್ನು ಬೆಳೆಯತಕ್ಕಂಥ ಒಂದು ಪ್ರದೇಶವಾಗಿದೆ. ನೀರಾವರಿಯ ಯಾವುದೇ ಜಮೀನು ಇಲ್ಲದಿರುವುದರಿಂದ ಬರ ಇರುವುದರಿಂದ ಇವತ್ತಿನವರೆಗೂ ರಾಗಿ ಮತ್ತು ನೆಲಗಡಲೆಯನ್ನು ಬಿತ್ತನೆ ಮಾಡಿಲ್ಲ. ನಮಗೆ ಗೊತ್ತಿರುವ ಮಟ್ಟಿಗೆ ಜುಲೈ ತಿಂಗಳ ಕೊನೆಯ ವಾರದಲ್ಲಿ ಮಳೆ ಆಗಿಲ್ಲವೆಂದು ಹೇಳಿದರೆ ಇನ್ನು ಬಿತ್ತನೆ ಮಾಡುವುದು ಅಷ್ಟು ಸುಲಭವಾದ ಮಾತಲ್ಲ. ಮಳೆ ಆಗಿಲ್ಲವೆಂದು ಹಿಂಗಾರಿನ ಫಸಲು ಬರುವುದಿಲ್ಲ. ಆದ್ದರಿಂದ ದಯಮಾಡಿ ಈ ಸರ್ಕಾರ ಒಂದು ಶಾಶ್ವತವಾದ ಪರಿಹಾರವನ್ನು ಈ ರಾಮನಗರ ಜಿಲ್ಲೆ ಒಂದೇ ಅಲ್ಲ, ರಾಮನಗರ ತಾಲ್ಲೂಕು ಒಂದೇ ಅಲ್ಲ, ರೈತರ ಈ ಒಂದು ಕಷ್ಟ ಜೀವನದ ಬಗ್ಗೆ ನಾವು ನೀವೆಲ್ಲರೂ ರೈತ ಈ ದೇಶದ ಬೆನ್ನೆಲುಬು ಎಂದು ಒಂದು ಮಾತನ್ನು ಹೇಳುತ್ತಿರುತ್ತೇವೆ. ಆದರೆ ರೈತರ ಬಗ್ಗೆ ನಿಜವಾಗಲೂ ಕೂಡ ಯಾವ ಸರ್ಕಾರಗಳೂ ಕೂಡ ಹೆಚ್ಚಿನ ಕಾಳಜಿ ವಹಿಸಿಕೊಂಡು ಕೆಲಸವನ್ನು ಮಾಡಿಲ್ಲ. ಇವತ್ತು 100 ಕ್ಕೆ 70 ಭಾಗ ಇದ್ದ ರೈತರು ಇವತ್ತು 50-60 ಭಾಗ ಮಾತ್ರ ಹಳ್ಳಿಗಳಲ್ಲಿ ಇದ್ದಾರೆ. ಈಗಾಗಲೇ ಅನೇಕ ಜನ ರೈತರು ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ರಾಮನಗರ ತಾಲ್ಲೂಕಿನಲ್ಲಿ ರೇಷ್ಮೆ ಮತ್ತು ಹೈನುಗಾರಿಕೆ ಮಾಡುತ್ತಿದ್ದಾರೆ. ಇದಕ್ಕೆ ನೀರಿನ ಅವಶ್ಯಕತೆ ಇದೆ. ನೀರು ಇಲ್ಲದೇ ಇರುವುದರಿಂದ, ಅದೂ ಕೂಡ ರೈತರಿಗೆ ಒಂದು ಶಾಪವಾಗಿ ಪರಿಗಣಿಸುತ್ತಿದೆ. ಆದ್ದರಿಂದ ರಾಮನಗರ ತಾಲ್ಲೂಕನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡುವುದರ ಜೊತೆಗೆ ರಾಮನಗರದಲ್ಲಿ ವಿಶೇಷವಾಗಿ ಅನೇಕ ಕಾರ್ಖಾನೆಗಳು ಇದ್ದರೂ ಕೂಡ ಸ್ಥಳೀಯವಾಗಿ ಕೆಲಸ ಕೊಡುತ್ತಿಲ್ಲ. ಆದ್ದರಿಂದ ಸರ್ಕಾರವನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆ ಹಳ್ಳಿ ಪ್ರದೇಶದಲ್ಲಿರುವಂಥವರಿಗೆ ಕೈಗಾರಿಕೆಗಳವರು ಕೆಲಸವನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ರಾಮನಗರ ತಾಲ್ಲೂಕಿನಲ್ಲಿ ಸುಮಾರು ನಾಲ್ಕೂವರೆ ಸಾವಿರ ಜನ ಅಂಗವಿಕಲರ ಮಾಸಾಶನ, ವಿಧವಾ ವೇತನ ಮತ್ತು ವೃದ್ಧಾಪ್ಯ ವೇತನವನ್ನು ವಜಾ ಮಾಡಿದ್ದಾರೆ. ಈ ಒಂದು ಬರ ಪರಿಸ್ಥಿತಿಯಲ್ಲಿ ನಾಲ್ಕೂವರೆ ಸಾವಿರ ಜನ ಬಡವರ ಮಾಸಾಶನವನ್ನು ಯಾವ ಆಧಾರದ ಮೇಲೆ ವಜಾ ಮಾಡಿದ್ದಾರೆ ನನಗೆ ಗೊತ್ತಿಲ್ಲ. ಕೆಲವು ಶೇಕಡಾ 10-20 ರಷ್ಟು ಲೋಪದೋಷಗಳು ಆಗಿರಬಹುದು. ಆದ್ದರಿಂದ ಎಲ್ಲವನ್ನೂ ಪರಿಶೀಲನೆ ಮಾಡುವುದಕ್ಕೆ ಅಧಿಕಾರಿಗಳು ಗಮನ ಹರಿಸಬೇಕೆಂದು ವಿನಂತಿಯನ್ನು ಮಾಡಿಕೊಳ್ಳುವಂಥದ್ದು. ಜೊತೆಗೆ ಈಗಾಗಲೇ ಅನೇಕ ಬಡವರು ವಿಧವಾ ವೇತನ ಮತ್ತು ವೃದ್ಧಾಪ್ಯ ವೇತನಕ್ಕೆ ಅರ್ಜಿಯನ್ನು ಕೊಟ್ಟಿದ್ದಾರೆ. ಅವರನ್ನು ಕೂಡ ಆದಷ್ಟು ಬೇಗ ಮಾಸಾಶನ

ವಿತರಣೆ ಮಾಡುವುದಕ್ಕೆ ಪರಿಶೀಲನೆ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ರಾಮನಗರದಲ್ಲಿ ಒಂದೇ ಒಂದು ನೆಮ್ಮದಿ ಕೇಂದ್ರವಿದೆ. ಹಳ್ಳಿಗಳಲ್ಲಿರುವಂತಹ ನೆಮ್ಮದಿ ಕೇಂದ್ರಗಳು ಯಾವುವೂ ಕೆಲಸ ಮಾಡುತ್ತಿಲ್ಲ. ಕಾರಣವೇನೆಂದರೆ ಅಲ್ಲಿ ಕರೆಂಟ್ ಇರುವುದಿಲ್ಲ. ಆದುದರಿಂದ ಎಲ್ಲರೂ ಕೂಡ ರಾಮನಗರಕ್ಕೆ ಬರುತ್ತಾರೆ. ಪಹಣಿ ತೆಗೆದುಕೊಳ್ಳುವುದಕ್ಕೆ ರೈತ ಅರ್ಧ ದಿನಕ್ಕಿಂತ ಜಾಸ್ತಿ ಹೊತ್ತು ಕಾಯಬೇಕಾಗುತ್ತದೆ. ಆದುದರಿಂದ ಯಾವ ಖಾಸಗಿ ಸಂಸ್ಥೆಗೆ ಕೊಟ್ಟಿದ್ದೀರೋ ಅದನ್ನು ಸರ್ಕಾರ ಕೂಡಲೇ ಪರಿಶೀಲನೆ ಮಾಡಿ ರಾಮನಗರದ ಎಲ್ಲಾ ತಾಲ್ಲೂಕುಗಳಿಗೂ ಹೋಬಳಿ ಮಟ್ಟದಲ್ಲಿ ಉಪ ತಹಶೀಲ್ದಾರರನ್ನು ನೇಮಕ ಮಾಡಿಕೊಳ್ಳಬೇಕೆಂದು ಹೇಳಿ ಸರ್ಕಾರ ಈಗಾಗಲೇ ಏನು ತೀರ್ಮಾನ ಮಾಡಿಕೊಂಡಿದೆ, ಅದರ ಜೊತೆಗೆ ಅದಕ್ಕೆ ಸವಲತ್ತುಗಳನ್ನು ಕೊಡಬೇಕೆಂದು ಹೇಳಿ ನಾನು ವಿನಂತಿಸುತ್ತಿದ್ದೇನೆ. ಕೆಲವರಿಗೆ ನನ್ನ ಮಾತಿನಿಂದ ನೋವಾಗಬಹುದು. ಅಕ್ಕಿ ಮತ್ತು ರಾಗಿಯ ಬೆಲೆ ಜಾಸ್ತಿಯಾಗಿದೆ ಎಂದು ಅದರ ಬಗ್ಗೆ ಮಾತನಾಡುತ್ತಾರೆ. ತರಕಾರಿ ಬೆಲೆ ಜಾಸ್ತಿಯಾಗಿದೆ ಆಗಲೇ ನರೇಂದ್ರರವರು ಮಾತನಾಡುತ್ತಿದ್ದರು. ಇವತ್ತು ರೈತರಿಗೆ ಎಲ್ಲೋ ಒಂದು ಕಡೆ ತರಕಾರಿ ಬೆಲೆ ಅಥವಾ ಅವರು ಬೆಳೆದಂಥ ಪದಾರ್ಥಗಳ ಬೆಲೆ ಜಾಸ್ತಿಯಾದಾಗ ಅದು ದೊಡ್ಡ ಹುಯಿಲೆಬ್ಬಿಸುವಂತಹ ಕೆಲಸವಾಗುತ್ತದೆ. ದಯಮಾಡಿ ಜನ ಇಷ್ಟೊಂದು ಕಷ್ಟ ಪರಿಸ್ಥಿತಿಯಲ್ಲಿದ್ದರೂ ಕೂಡ ನಾವು ರೈತರ ಕಷ್ಟವನ್ನು ಅರ್ಥ ಮಾಡಿಕೊಂಡು ಇವೆಲ್ಲಾ ಒಂದೂವರೆ ಎರಡು ತಿಂಗಳುಗಳಿಗೆ ಬರುವಂಥ ಕಷ್ಟವೆಂದು ನಾವೆಲ್ಲಾ ಅರ್ಥ ಮಾಡಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿ ಕೃಷಿ ಸಚಿವರು, ತೋಟಗಾರಿಕೆ, ರೇಷ್ಮೆ ಸಚಿವರೂ ಇಲ್ಲ, ಪಶುಸಂಗೋಪನೆ ಸಚಿವರು ಸಹ ಇಲ್ಲ. ರೈತರ ಈ ಬರಗಾಲದ ಚರ್ಚೆ ಮಾಡುವಾಗ ನಿಜವಾಗಲೂ ನಾಲ್ಕು ಜನ ಮಂತ್ರಿಗಳೂ ಇಲ್ಲ. ಆದರೆ ನಿಜವಾಗಲೂ ಕೂಡ ಅಕ್ಕಿ ಮತ್ತು ರಾಗಿಯ ಬೆಲೆ ಮತ್ತು ಅವರು ಹಾಕುವಂಥ shoes ಬೆಲೆ ನೋಡಿದರೆ, ನಿಜವಾಗಲೂ ಈ ಮಾತನ್ನು ಹೇಳುವಾಗ ನೋವಾಗುತ್ತದೆ. ಇವತ್ತು ಜವಾಬ್ದಾರಿ ಸ್ಥಾನದಲ್ಲಿರುವವರು ಇಲ್ಲಿದ್ದಾರೆ. ಅವರು ಹಾಕುವಂಥ ಶೂ ಬೆಲೆ ಎಷ್ಟಿದೆಯೋ ಅದಕ್ಕಿಂತ ಒಂದು ಕ್ವಿಂಟಾಲ್ ರಾಗಿಯ ಬೆಲೆ ಕಡಿಮೆ ಇದೆ. ಅದನ್ನು ಅರ್ಥ ಮಾಡಿಕೊಳ್ಳಬೇಕು. ಒಂದು ಕ್ವಿಂಟಾಲ್ ಅಕ್ಕಿಯ ಬೆಲೆ ಕೂಡ ಅದಕ್ಕಿಂತ ಕಡಿಮೆ ಇದೆ. ಆದ್ದರಿಂದ ಸರ್ಕಾರ ದೊಡ್ಡ ದೊಡ್ಡ ಮಾತನಾಡದೆ, ಘೋಷಣೆಗಳನ್ನು ಮಾಡದೇನೆ ಒಂದು ಆತ್ಮ ವಿಮರ್ಶೆ ಮಾಡಿಕೊಂಡು ರೈತರ ಪರವಾಗಿ ನಿಲ್ಲುವಂಥ ಕೆಲಸವನ್ನು ಮಾಡಬೇಕು. ಶಾಶ್ವತವಾದ ಒಂದು ಪರಿಹಾರವನ್ನು ರೈತರಿಗೆ ಕೊಡಿಸಬೇಕೆಂದು

ವಿನಂತಿ ಮಾಡಿಕೊಂಡು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಉಪಾಧ್ಯಕ್ಷರು: ನರೇಂದ್ರಸ್ವಾಮಿಯವರು ಮಾತನಾಡಿ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಳವಳ್ಳಿ): ಈಗಾಗಲೇ ವಿರೋಧಪಕ್ಷದ ನಾಯಕರು, ಹಿರಿಯ ಮುಖಂಡರುಗಳು, ಮಾಜಿ ಮುಖ್ಯಮಂತ್ರಿಗಳು ವಿಸ್ತಾರವಾಗಿ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಬರದ ಬಗ್ಗೆ, ಜನರ ಬವಣೆ ಬಗ್ಗೆ ಇಂದಿನ ಪರಿಸ್ಥಿತಿಯ ಅವಲೋಕನವನ್ನು ಸುದೀರ್ಘವಾಗಿ ಮಾಡಿದ್ದಾರೆ. ನಾನು ಸೀಮಿತವಾಗಿ ಕೆಲವೇ ವಿಚಾರಗಳನ್ನು ಈ ಸದನದ ಮೂಲಕ ಸರ್ಕಾರದ ಗಮನ ಸೆಳೆಯಲಿಕ್ಕೆ ಪ್ರಯತ್ನ ಮಾಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಬರಪೀಡಿತ ಪ್ರದೇಶಗಳಲ್ಲಿ ಏನು ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆಂದರೆ ಕುಡಿಯುವ ನೀರಿಗೆ ಮೊದಲನೇ ಆದ್ಯತೆ ಕೊಟ್ಟು ಇವತ್ತು ಕುಡಿಯುವ ನೀರಿನ ಬೋರ್‌ವೆಲ್‌ಗಳಿರಬಹುದು ಅಥವಾ ಪೈಪ್‌ಲೈನ್‌ಗಳಿರಬಹುದು, ಇದಕ್ಕೆ ಇಂತಿಷ್ಟು ಹಣವೆಂದು ನಿಗದಿ ಮಾಡಿ ಪ್ರತಿಯೊಂದು ಕ್ಷೇತ್ರವಾರು ಕೊಡಲಾಗಿದೆ. ಆದರೆ ಇದರಿಂದ ನಾವು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಆಗಿದೆಯೇ? ಎಲ್ಲಾದರೂ surface water ಇರತಕ್ಕಂಥ ಜಾಗದಲ್ಲಿ ಬಹು ಹಳ್ಳಿಗಳಿಗೆ ನೀರು ಹೊರಿಸತಕ್ಕಂಥ ಯೋಜನೆಗಳಿಗೆ ನಾವ್ಯಾಕೆ ಒತ್ತನ್ನು ಕೊಡುತ್ತಿಲ್ಲ? ಇದೇನು ಮೊದಲನೇ ಬಾರಿ ಕರ್ನಾಟದಲ್ಲಿ ಬರ ಬಂದಿಲ್ಲ. ಇದು ಸತತವಾಗಿ ನಮ್ಮ ಮೇಲೆ ಬೀಳುತ್ತಿರುಬವಂಥ ಒಂದು ದೊಡ್ಡ ಬರೆ, ಇದನ್ನು ಬರ ಎನ್ನುವುದಕ್ಕಿಂತ ಒಂದು ದೊಡ್ಡ ಬರೆ ಎಂದು ಹೇಳಬಹುದು. ಈ ಬರೆಯ ನೋವನ್ನು ನಾವು ಅನುಭವಿಸುತ್ತಿದ್ದರೂ ಕೂಡ ನಾವು ಎಲ್ಲೋ ಒಂದು ಕಡೆ ನಮ್ಮ ಇಚ್ಚಾಶಕ್ತಿ ನಮ್ಮ ವಿರುದ್ಧವಾಗಿ ಕೆಲಸ ಮಾಡುತ್ತಿರುವುದರಿಂದ ಸರಿಯಾದ ದಿಕ್ಕಿನಲ್ಲಿ ಯಾವುದೇ ಸರ್ಕಾರಗಳಿರಲಿ ಕಾರ್ಯಕ್ರಮಗಳನ್ನು ಸರಿಯಾಗಿ ಅನುಷ್ಠಾನಗೊಳಿಸದಿರುವುದೇ ಇವತ್ತು ಬರವನ್ನು ಎದುರಿಸಲಿಕ್ಕೆ ಕುಡಿಯುವ ನೀರಿನ ವಿಚಾರದಲ್ಲಿ ಮೊದಲಿದ್ದ ಪರಿಸ್ಥಿತಿಗಿಂತ ತುಂಬಾ ತೀಕ್ಷ್ಣವಾದ ಪರಿಸ್ಥಿತಿಯನ್ನು ನಾವು ಈ ಸಂದರ್ಭದಲ್ಲಿ ಅನುಭವಿಸುತ್ತಿದ್ದೇವೆ. ಉದಾಹರಣೆಗೆ ನನ್ನ ಕ್ಷೇತ್ರವನ್ನೇ ಸೀಮಿತವಾಗಿ ನಾನು ಮಾತನಾಡುವುದಾದರೆ ಕಾವೇರಿ ಸುತ್ತುವರಿದಿದೆ. ಆದರೆ ಒಂದು ಕಡೆ ತಲಕಾಡು ದಾಟಿದ ತಕ್ಷಣ ನಮ್ಮ ಕ್ಷೇತ್ರ ಬರುತ್ತಿದ್ದಂತೆ ಗಗನಚುಕ್ಕಿ, ಭರಚುಕ್ಕಿ ಪ್ರಪಾತಕ್ಕೆ ನೀರಿಳಿಯುತ್ತದೆ. ನೀರು ಇಳಿದ ತಕ್ಷಣ 1200 ಅಡಿ ಆಳಕ್ಕೆ ನೀರು ಇಳಿದುಹೋಗುತ್ತದೆ. ಅಂದರೆ ನಮ್ಮ ಭೂಪ್ರದೇಶದ 1200 ಅಡಿ ಆಳದಲ್ಲಿ ನೀರು ಹಾದುಹೋಗುತ್ತದೆ. ನೋಡುವವರಿಗೆ ಮಂಡ್ಯ ಜಿಲ್ಲೆ, ಪಕ್ಕದಲ್ಲಿ ಕಾವೇರಿ. ಆದರೆ ನಮ್ಮ ಬವಣೆ ನೀವು

Aerial map ಏನಿವತ್ತು Geological survey ಮಾಡಿ Satellite ನಿಂದ ಮಂಡ್ಯ ಜಿಲ್ಲೆಯ ಚಿತ್ರಣವನ್ನು ನಮ್ಮ ಸರ್ಕಾರದಲ್ಲಿ ಏನು ಮಾಹಿತಿ ಒದಗಿಸಿಕೊಟ್ಟಿದ್ದಾರೆ ಅದರಲ್ಲಿ ನೋಡಿದರೆ ಇಡೀ ಮಳವಳ್ಳಿ ಪ್ರದೇಶ ನೀರಿನಿಂದ ತೀವ್ರತರವಾದ ಕೊರತೆಯನ್ನು ಎದುರಿಸುತ್ತಿರುವುದು ನಾವು ಕಣ್ಣಾರೆ ಕಾಣುತ್ತೇವೆ. ಇದಕ್ಕೆ ಎರಡು ಕಾರಣ, ಪ್ರಪಾತಕ್ಕೆ ಇಳಿದ ನೀರಿನ ಸಮಸ್ಯೆಯಾದರೆ, ಇನ್ನೊಂದು ಮುಂದುವರೆದು ಹೋಗುತ್ತಿರುವ ಜಾಗದಲ್ಲಿ ಬರಿ ಕಲ್ಲು ಪ್ರದೇಶದಲ್ಲಿ ನೀರು ಹರಿದು ಹೋಗುತ್ತದೆ. ಅಲ್ಲಿ ಮಣ್ಣಿನ ಪ್ರದೇಶವಿರದೆ ನೀರಿನ ಅಂಶವನ್ನು ಹೀರಿಕೊಳ್ಳಲು ಅವಕಾಶವೇ ಇಲ್ಲ. ಮೇಕೆದಾಟು ದಾಟುವವರೆಗೆ ಈ ಕಲ್ಲು ಪ್ರದೇಶವನ್ನು ನಾವು ನೋಡುತ್ತೇವೆ. ಆದರೆ ನೀರಿನ ಲಭ್ಯತೆ ಅಲ್ಲಿದೆ. ಬಹುಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಮಾಡದೇನೆ ನಾವು ಬೆಂಗಳೂರಿನವರೆಗೆ ಕುಡಿಯುವ ನೀರನ್ನು ತರುತ್ತಿದ್ದೇವೆ. ಯಾವ ಭಾಗದಿಂದ ನೀರು ಎತ್ತುತ್ತಿದ್ದೇವೆ ಆ ಜಾಗದ ಜನರ ಒಂದು ಬವಣೆಯನ್ನು ಇವತ್ತಿನ ತನಕ ದೊಡ್ಡ ದೊಡ್ಡ ಗಾತ್ರದ pipeline ಗಳನ್ನು ನೋಡುತ್ತಿರುವಂಥ ನಮ್ಮ ಜನ ಕುಡಿಯಲಿಕ್ಕೆ ನೀರು ಇಲ್ಲದೇನೆ, ಗೋವುಗಳಿಗೆ ಕುಡಿಸಲಿಕ್ಕೆ ನೀರು, ಮೇವು ಇಲ್ಲದೇನೆ ಬವಣೆ ಪಡುತ್ತಿರುವುದನ್ನು ನಾನು ಕಣ್ಣೀರಿಟ್ಟು ಈ ಸದನದಲ್ಲಿ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸರ್ಕಾರದಲ್ಲಿ ಕೈಮುಗಿದು ಬೇಡಿಕೊಳ್ಳುತ್ತೇನೆ. ಇಡೀ ಹಲಗೂರು ಹೋಬಳಿ ಇವತ್ತು ನಿಕೃಷ್ಟವಾದಂಥ ಪ್ರದೇಶವಾಗಿದ್ದು ಆ ಪ್ರದೇಶದಲ್ಲಿ ಕುಡಿಯುವ ನೀರಿಗೆ ಎಷ್ಟು ಬೋರ್‌ವೆಲ್ ಕೊರೆದರೂ ನೀರು ಬರುತ್ತಿಲ್ಲ. ಇಡೀ ಮಳವಳ್ಳಿ ಕ್ಷೇತ್ರದಲ್ಲಿ 300 ಬೋರ್‌ವೆಲ್‌ಗಳಿದ್ದರೂ ನೀರು ಸಿಗದಿರುವಂಥ ಬೋರ್‌ವೆಲ್‌ಗಳು ಒಂದು ಕಡೆಯಿದ್ದರೆ existing borewellಗಳಲ್ಲಿ 300 ಬೋರ್‌ವೆಲ್‌ಗಳು failure ಆಗಿವೆ. ನಾನು ಸರ್ಕಾರದ ಗಮನವನ್ನು ಸೆಳೆಯುವುದೇನೆಂದರೆ ನೀವು ಬೇರೆ ಕ್ಷೇತ್ರಗಳನ್ನು ಯಾವರೀತಿ ನೋಡುತ್ತೀರಿ ಎಂದು ಹೇಳುವುದಿಲ್ಲ. ನಾನು ವೈಯಕ್ತಿಕವಾಗಿ ಯಾವುದನ್ನೂ ತಮ್ಮಲ್ಲಿ ಬೇಡಿಕೊಳ್ಳುತ್ತಿಲ್ಲ. ನನ್ನ ಕ್ಷೇತ್ರದ ಹಿತದೃಷ್ಟಿಯಿಂದ ನಿಜವಾಗಿರುವ ನೋವನ್ನು ಸರ್ಕಾರದ ಗಮನ ಸೆಳೆಯಲಿಕ್ಕೆ ಈ ಸಂದರ್ಭವನ್ನು ಬಳಸಿಕೊಳ್ಳುತ್ತಿದ್ದೇನೆ. ದಯಮಾಡಿ ಈ ಭಾಗಕ್ಕೆ ಶಿಂಷಾ ನದಿ ಪಾತ್ರ ಕಾವೇರಿ ನದಿ ಪಾತ್ರ ಎರಡೂ ಇದ್ದರೂ ಕೂಡ ಆ ಪ್ರದೇಶ ತೀವ್ರತರವಾದಂಥ ಬರದಲ್ಲಿ ತುತ್ತಾಗಿರುವಂಥದ್ದನ್ನು ಗಣನೆಗೆ ತೆಗೆದುಕೊಂಡು ಈ ಬಾರಿಯಾದರೂ ಒಂದು ಶಾಶವತವಾದಂಥ ಪರಿಹಾರವನ್ನು ಕೊಡಲಿಕ್ಕೆ ಏತ ನೀರಾವರಿ ಯೋಜನೆಯೊಂದು ಮತ್ತು ಬಹುಹಳ್ಳಿಗಳ ಕುಡಿಯುವ ನೀರಿನ ಯೋಜನೆಗೆ ಅನುಮೋದನೆ ಕೊಟ್ಟು ತಾವು ಆ ಜನತೆಗೆ ಸಹಾಯ

ಮಾಡಬೇಕೆಂದು ಮನವಿ ಮಾಡಲಿಚ್ಛೆ ಪಡುತ್ತೇನೆ. ಉದ್ಯೋಗ ಖಾತ್ರಿ ವಿಚಾರದಲ್ಲಿ ನನ್ನ ಅನುಭವದಲ್ಲಿ ಹೇಳುವುದಾದರೆ ಇವತ್ತು PDO ಗಳು ತಪ್ಪುಗಳನ್ನು ಮಾಡುತ್ತಿರುವಂಥ ಬಗ್ಗೆ ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ಎಲ್ಲರೂ ಹೊಸದಾಗಿ ಬಂದಿದ್ದಾರೆ. ನಮ್ಮ ಹಾಲಿ ಮುಖ್ಯಮಂತ್ರಿಗಳು ಹಿಂದೆ RDPR Department ನೋಡುತ್ತಿದ್ದರು. ಆಗ ಈ PDO ವಿಚಾರದಲ್ಲಿ ಪಂಚಾಯಿತಿಗಳ ಅಧ್ಯಕ್ಷರು, ಮತ್ತೊಬ್ಬರೂ ಯಾರಾದರೂ ಮಾತನಾಡಿದರೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕುತ್ತೇವೆಂಬ ದೊಡ್ಡ ದಂಡವನ್ನು ಇಟ್ಟಿದ್ದಾರೆ. ಒಂದು ಕಡೆ ಅವರ ಮೇಲೂ ಸಹ ದಬ್ಬಾಳಿಕೆ ನಡೆಯುತ್ತಿರಬಹುದು. ಆದರೆ ನಿಜವಾಗಿ ಈ ಯೋಜನೆಯನ್ನು ಜಾರಿ ಕೊಡಬೇಕಾದರೆ ಅವರಿಲ್ಲದೆ ಈ ಯೋಜನೆಯನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಕ್ರಿಯಾ ಯೋಜನೆಗಳನ್ನು ಮಾಡುವ ಹಂತದಿಂದ ಹಿಡಿದು ಪ್ರತಿಯೊಂದು ಪಂಚಾಯಿತಿಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕಾದರೆ ಈ PDO Secretaryಗಳೇ ಮೊದಲು ಮೂಲ. ಅರ್ಧಂಬರ್ಧ ಪಂಚಾಯಿತಿಗಳಿಗೆ ಈಗ PDO ಗಳಿಲ್ಲ. ಅರ್ಧಂಬರ್ಧ ಪಂಚಾಯಿತಿಗಳಲ್ಲಿ ಇವತ್ತು ಕಾರ್ಯದರ್ಶಿಗಳು ಇಲ್ಲ. ಉದ್ಯೋಗ ಖಾತ್ರಿ ಯೋಜನೆಯನ್ನು ಇವತ್ತು ಕ್ರಿಯಾ ಯೋಜನೆ ಮಾಡಿ ಅನುಷ್ಠಾನಕ್ಕೆ ತರಬೇಕಾದ ಜಾಗದಲ್ಲಿ ಪೂರ್ಣ ನಿಷ್ಕ್ರಿಯತೆ ಈ ಒಂದು ಲೋಪದಿಂದ ನಡೆಯುತ್ತಿದೆ. ನಮ್ಮ ಉಪ ಮುಖ್ಯಮಂತ್ರಿಗಳು ಇವತ್ತು ಸದನದಲ್ಲಿದ್ದಾರೆ. ಇವತ್ತು ಇಲಾಖೆಯನ್ನು ತಾವೇ ನೋಡುತ್ತಿದ್ದೀರಿ, ದಯಮಾಡಿ ಈ ಅಂಶವನ್ನು ಗಮನಿಸಬೇಕು. ಏಕೆಂದರೆ ಈ ಕೊರತೆಯನ್ನು ಸರಿದೂಗಿಸದೆ, ನೇಮಕಾತಿಯನ್ನು ಮಾಡದೇನೆ ನೀವು ಯೋಜನೆಯನ್ನು ಆ ಗ್ರಾಮೀಣ ಪ್ರದೇಶಕ್ಕೆ ತಲುಪಿಸುತ್ತೇವೆಂದರೆ ಇದು ಬಹಳ ಅಸಾಧ್ಯವಾದಂಥ ವಿಚಾರ. ದಯಮಾಡಿ ಮೊದಲು ಬೇರೆ ಇಲಾಖೆಗಳಿಂದಲಾದರೂ ತೆಗೆದುಕೊಳ್ಳಿ. ಏನಾದರೂ ಆಗಲಿ ಈ ಬರವನ್ನು ನೀವು ನಿಭಾಯಿಸಬೇಕಾದರೆ ಆ ಪಂಚಾಯಿತಿಗಳಿಗೆ deputation ಮೂಲಕ ಬೇರೆ ಬೇರೆ ಅಧಿಕಾರಿಗಳನ್ನು ಹಾಕಲಿಲ್ಲವೆಂದರೆ ಈ ಬರವನ್ನು ಪಂಚಾಯಿತಿ ಮಟ್ಟದಲ್ಲಿ ಯಾರೂ ಕೂಡ ನಿಭಾಯಿಸಲಿಕ್ಕೆ ಸಾಧ್ಯವಿಲ್ಲವೆಂಬ ಸತ್ಯವನ್ನು ತಮ್ಮ ಮುಂದೆ ಹೇಳಲಿಚ್ಛಿಸುತ್ತೇನೆ. ಇನ್ನು ಇದೇ ಉದ್ಯೋಗ ಖಾತ್ರಿ ವಿಚಾರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಇಲಾಖೆಯ ಮುಖಾಂತರವಾದರೂ ಕೃಷಿ ಹೊಂಡಗಳನ್ನು ತೆಗೆಯಲಿಕ್ಕೆ ಪ್ರಯತ್ನಿಸಬೇಕು. ಏಕೆಂದರೆ ಇಲಾಖಾವಾರು ಇಂತಿಷ್ಟು ಹಣವನ್ನು ವಿನಿಯೋಗಿಸಬೇಕೆಂದು ಒಂದು ಕಟ್ಟುನಿಟ್ಟಿನ ಆದೇಶವನ್ನು ಕೊಟ್ಟಿರುವುದರಿಂದ

ಹೆಚ್ಚು ಹಣವನ್ನು ಈ ಕೃಷಿ ಪ್ರದೇಶಕ್ಕೆ ಉಪಯೋಗಿಸುವುದಕ್ಕೆ ಅವಕಾಶ ಸಿಗುತ್ತಿಲ್ಲ. ಗ್ರಾಮೀಣ ಪ್ರದೇಶಕ್ಕೆ ಬೇಕಾಗಿರುವ ಕೃಷಿ ಇಲಾಖೆ, ನೀರಾವರಿ ಇಲಾಖೆಗೆ ನಾವು ಹೆಚ್ಚು ಒತ್ತು ಕೊಟ್ಟು ಈ ಒಂದು ಉದ್ಯೋಗ ಖಾತ್ರಿ ಯೋಜನೆಯನ್ನು ಬಳಸಿಕೊಳ್ಳಬೇಕಾಗಿದೆ. ಅದಕ್ಕೋಸ್ಕರ ಸರ್ಕಾರ ಒಂದು ಮಾರ್ಪಾಟನ್ನು ಮಾಡಿ ಉದ್ಯೋಗ ಖಾತ್ರಿ ಯೋಜನೆಯಡಿ ಯೋಜನೆಯಲ್ಲಿ ನಾವು ಇವತ್ತು ಕೃಷಿ ಹೊಂಡಗಳನ್ನು ಮತ್ತು ಇಂಗು ಗುಂಡಿಗಳನ್ನು ವ್ಯವಸಾಯ ಭೂಮಿಯಲ್ಲಿ ನಿರ್ಮಾಣ ಮಾಡುವುದಕ್ಕೆ ಹೆಚ್ಚು ಒತ್ತನ್ನು ಕೊಡುವುದಕ್ಕೆ ಸರ್ಕಾರ ಒಂದು ಸುತ್ತೋಲೆಯನ್ನು ಹೊರಡಿಸಬೇಕೆಂಬ ಮನವಿಯನ್ನು ನಾನು ಮಾಡಬಯಸುತ್ತೇನೆ. ಇನ್ನು ಮೇವಿನ ವಿಚಾರದಲ್ಲಿ ಬೆಳಿಗ್ಗೆ ಹಿರಿಯರು ಮಾತನಾಡಿದ್ದಾರೆ. ಅತೀ ಶೀಘ್ರದಲ್ಲಿ ನೀವು ಗೋಶಾಲೆಗಳನ್ನು ತೆರೆಯದೇ ಹೋದರೆ ಇವತ್ತು ನಮ್ಮ ಭಾಗದಲ್ಲಿ ತೀವ್ರತರವಾದ ಬರವಿರುವ ಕಾರಣ ನಮ್ಮ ಮಂಡ್ಯ ಜಿಲ್ಲೆಯಾದರೂ ಕೂಡ ಆ ಭಾಗ ಪೂರ್ತಿ ಬರವಿರುವುದರಿಂದ ಗೋಶಾಲೆಗಳನ್ನು ತುರ್ತಾಗಿ ನೀವು ತೆರೆಯಬೇಕೆಂದು ಮನವಿ ಮಾಡುತ್ತೇನೆ. ಒಂದು ವಿಚಾರವನ್ನು ಯಾರೂ ಕೂಡ ಸದನದಲ್ಲಿ ಪ್ರಸ್ತಾಪ ಮಾಡಲಿಲ್ಲ. ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲೆ ಕರ್ನಾಟಕದ ಹೆಮ್ಮೆಯ ಭಾಗವೆಂದು ನಾನು ಸದನದಲ್ಲಿ ಹೇಳಬಯಸುತ್ತೇನೆ. ಸದಾಕಾಲ ಕಾವೇರಿ ಕ್ಯಾತೆಯನ್ನು ತೆಗೆಯುತ್ತಿರುವ ತಮಿಳುನಾಡಿನ ಮಾಜಿ ಮುಖ್ಯಮಂತ್ರಿಗಳಿಗೆ ಈ ಸದನ ಧಿಕ್ಕಾರ ಹೇಳಬೇಕಾಗುತ್ತದೆ. ನಮಗೆ ಇಲ್ಲಿ ಕುಡಿಯಲಿಕ್ಕೆ ನೀರಿಲ್ಲ. ನಾವೇ ಇಲ್ಲಿ ಬರಗಾಲದಿಂದ ಒದ್ದಾಡುತ್ತಿದ್ದೇವೆ. ಅವರು ಕಾವೇರಿ ಕ್ಯಾತೆ ತೆಗೆದುಕೊಂಡು ಪ್ರಧಾನಮಂತ್ರಿಗಳು ಸಭೆ ಕರೆಯಬೇಕೆಂದು ಹೇಳುತ್ತಾರೆ. ನಮಗೆ "ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ" ಎನ್ನುವ ರೀತಿಯಲ್ಲಿ ಆ ಪಕ್ಕದ ರಾಜ್ಯದ ಹಿರಿಯ ಒಬ್ಬ ಮುತ್ಸದಿ ರಾಜಕಾರಣಿ ಎನಿಸಿಕೊಂಡಿರುವವರು ಈ ರೀತಿ ಒಂದು ಕೆಟ್ಟ ಹೇಳಿಕೆ ನೀಡಿ ರಾಜ್ಯ, ರಾಜ್ಯಕ್ಕೆ ಸಂಘರ್ಷ ತಂದಿಡುವಂಥ ವಿಚಾರಕ್ಕೆ ಈ ಸದನ ಖಂಡಿಸಬೇಕೆಂದು ಹೇಳುತ್ತಾ ಇದರ ಜೊತೆಯಲ್ಲಿ ಒಂದು ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಸಂವಿಧಾನವೇನು ರಚಿತವಾಗಿದೆ, ಇದರಲ್ಲಿ ಆರ್ಥಿಕವಾಗಿ ಹಿಂದುಳಿದಿರುವಂಥ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನತೆಗೆ ಮೀಸಲಾತಿ ಇದೆ. ಅದನ್ನು ತಲತಲಾಂತರದಿಂದ ಈ ವರ್ಗ ತುಳಿತಕ್ಕೆ ಒಳಪಟ್ಟಿದೆ ಎಂದು ಅಥೈಸಿಕೊಂಡೇ ಸಂವಿಧಾನದಲ್ಲಿ ಅವರಿಗೆ ಅವಕಾಶವನ್ನು ಕೊಟ್ಟಿದ್ದಾರೆ. ಈ ಬರಕ್ಕೂ ಇದಕ್ಕೂ ಏನು ಸಂಬಂಧವೆಂದರೆ ಭೂಮಿಯೂ ಇಲ್ಲ, ಉದ್ಯೋಗವೂ ಇಲ್ಲ, ಆರ್ಥಿಕ ಬಲಾಢ್ಯತೆ ಇಲ್ಲದಿರುವ ಈ ವರ್ಗಕ್ಕೆ ವಿಶೇಷವಾದ ಪ್ಯಾಕೇಜ್ ಅನ್ನು ಈ ಬರದ ಸಂದಂರ್ಭದಲ್ಲಿ ಆ ವರ್ಗದ

ಜನರಿಗೆ ನೀವು ನೀಡಿಲ್ಲವೆಂದರೆ ಸಾಮಾಜಿಕ ನ್ಯಾಯಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಆದರೆ ಒಂದು ವಿಚಾರವನ್ನು ನಾನು ನಿಮ್ಮ ಗಮನಕ್ಕೆ ತರುತ್ತೇನೆ. ಎಲ್ಲೋ ಒಂದು ಕಡೆ ಇಚ್ಛಾಶಕ್ತಿ ಕೊರತೆಯಿದೆ ಎನಿಸುತ್ತದೆ. ಏಕೆಂದರೆ ಆ ವರ್ಗದವರ ಬಗ್ಗೆ ಗಣನೆಗೆ ತೆಗೆದುಕೊಳ್ಳುವುದಕ್ಕೆ ಈ ಸರ್ಕಾರ ಗಮನ ಇಟ್ಟಿಲ್ಲ ಅಥವಾ ಆ ಪಕ್ಷವೂ ಕೂಡ ಗಮನ ಇಟ್ಟಿಲ್ಲವೆನ್ನುವುದು ನನ್ನ ನೋವು. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಪರಿಶಿಷ್ಟ ವರ್ಗದಲ್ಲಿ ಒಬ್ಬರನ್ನೂ ಉಪ ಮುಖ್ಯಮಂತ್ರಿಯನ್ನು ಮಾಡದಿರುವ ಒಂದು ನೋವು ಆ ವರ್ಗದಿಂದ ಬಂದಂತಹ ನನ್ನನ್ನೂ ಸೇರಿಸಿ ಇದೆ. ಇಡೀ ವರ್ಗ, ಇವತ್ತು ಈ ರಾಜ್ಯದಲ್ಲಿ ಇದನ್ನು ಖಂಡಿಸುತ್ತದೆ. ಆದರೆ ಒಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಹಾತ್ಮ ಗಾಂಧೀಜಿಯವರು ಈ ಜನರನ್ನು ಹರಿಜನರೆಂದು ಕರೆದಿದ್ದರು. ಹರಿಯೆಂದರೆ ವಿಷ್ಣು ಅಥವಾ ರಾಮ. ಯಾರು ಹರಿಯನ್ನು ಮರೆತರೋ, ಯಾರು ರಾಮನನ್ನು ಮರೆತರೋ ಅವರಿಗೆ ಮುಂದೆ ಶಿಕ್ಷೆ ಕಾಯ್ದಿರುತ್ತದೆ. ದಯಮಾಡಿ ಅವರನ್ನು ಮಾರಿಯಬೇಡಿ. ಅವರನ್ನು ನಿಕೃಷ್ಟವಾಗಿ ಕಾಣಬೇಡಿ. ಅವರ ಬದುಕಿಗೆ ಒಂದು ಆಸರೆಯಾಗಿ, ದಯಮಾಡಿ ಅವರೂ ಕೂಡ ನಿಮ್ಮೊಟ್ಟಿಗೆ ನಿಲ್ಲುವಂತಹ ಶಕ್ತಿವಂತರಾಗಿದ್ದಾರೆ. ಈ ಸಮಾಜದಲ್ಲಿ ಸಮಾನವಾದ ಹಕ್ಕುಳ್ಳವರಾಗಿದ್ದಾರೆ ಎಂಬ ಮನವಿಯನ್ನು ಮಾಡುತ್ತಾ, ಬರವನ್ನು ನೀಗಿಸುವಂತ ಸಂದರ್ಭದಲ್ಲಿ ನನ್ನ ಮಳವಳ್ಳಿ ಕ್ಷೇತ್ರದ ಒಂದು ಗಮನವನ್ನು ತಾವು ಇಟ್ಟುಕೊಂಡು ತಮ್ಮ ಯೋಜನೆಯನ್ನು ಪ್ರಕಟ ಮಾಡುವಾಗ ಕುಡಿಯುವ ನೀರು ಮತ್ತು ಏತ ನೀರಾವರಿ ಯೋಜನೆಗಳಿಗೆ ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಇದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಮಾನ್ಯ ವಿಠ್ಠಲರಾವ್‌ರವರು ಮಾತನಾಡಿ.

ಶ್ರೀ ಕಟಕಧೊಂಡ ವಿಠ್ಠಲ ಧೊಂಡಿಬಾ(ನಾಗಠಾಣ): ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ತಮಗೆ ಪ್ರಪ್ರಥಮವಾಗಿ ಅಭಿನಂದನೆಗಳನ್ನು ಸಲ್ಲಿಸಿ, ಇವತ್ತು 123 ತಾಲ್ಲೂಕುಗಳ ಬರ ನಿರ್ವಹಣೆ ಬಗ್ಗೆ ಈಗಾಗಲೇ ಸದನದಲ್ಲಿ ಹಿರಿಯರು ಸಾಕಷ್ಟು ಗಮನವನ್ನು ಸೆಳೆದಿದ್ದಾರೆ. ಆದರೆ ಬರ ಇದರ ಇನ್ನೊಂದು ಪರ್ಯಾಯ ಹೆಸರೆ ಬಿಜಾಪುರ, ಬಹುಶಃ ಬಿಜಾಪುರ ಜಿಲ್ಲೆಯ ಬರದ ಇತಿಹಾಸವನ್ನು ನಾವೇನಾದರೂ ತೆಗೆದುಕೊಂಡರೆ ಶತಶತಮಾನಗಳ ಇತಿಹಾಸ ಬರದ ಇತಿಹಾಸ ಎಲ್ಲಿಯಾದರೂ ಸಿಕ್ಕುತ್ತದೆಂದರೆ ಅದು ಬಿಜಾಪುರ ಜಿಲ್ಲೆಯಲ್ಲಿ ಮಾತ್ರ. 1791 ರಲ್ಲಿ ದೋಗಿಬರ

ಇತ್ತು. ತಮ್ಮ ಜಿಲ್ಲಾ ಆಡಳಿತದಲ್ಲಿ ಎಲ್ಲಾ ಬರಗಳ ಪಟ್ಟಿ ಸಿಗುತ್ತದೆ. 1791ರಲ್ಲಿ ದೋಗಿಬರದಲ್ಲಿ ಸತ್ತಂಥವರ ಸಂಖ್ಯೆ 11 ಮಿಲಿಯನ್, 1 ಕೋಟಿ 10 ಲಕ್ಷ ಬಿಜಾಪುರ ಜಿಲ್ಲೆಯ ಜನ ಅವತ್ತು ತೀರಿಹೋದರು, ಎಲ್ಲಿ ನೋಡಿದರಲ್ಲಿ ಹೆಣಗಳ ರಾಶಿ ಬಿದ್ದಿತ್ತು. ಇವತ್ತು ಅಂತಹ ಬರದ ಜಿಲ್ಲೆ ಬಿಜಾಪುರ ಜಿಲ್ಲೆ. ಈ ಬಿಜಾಪುರ ಜಿಲ್ಲೆಯ ಇತಿಹಾಸವನ್ನು, ಬ್ರಿಟಿಷ್ ಸರ್ಕಾರ ಇಡೀ ದೇಶದಲ್ಲಿ ಅತ್ಯಂತ ಬರದ ಜಿಲ್ಲೆ ಯಾವುದೆಂದು ಸರ್ವೇ ಮಾಡಿದ್ದಾರೆ. ಈ ದೇಶದಲ್ಲಿ ಬಿಜಾಪುರ ಜಿಲ್ಲೆ ಅತ್ಯಂತ ಬರಗಾಲ ಪೀಡಿತ ಜಿಲ್ಲೆಯೆಂದು ಘೋಷಿಸಿ, ಬರಗಾಲ ನಿವಾರಣ ಸಂಸ್ಥೆ ಕರ್ನಾಟಕ ರಾಜ್ಯದಲ್ಲಿ ಅಲ್ಲ ಇಡೀ ದೇಶದಲ್ಲಿ ಎಲ್ಲಾದರೂ ಇದ್ದರೆ 1927ರೊಳಗೆ ಬ್ರಿಟಿಷ್ ಸರ್ಕಾರ ಬರಗಾಲ ನಿವಾರಣಾ ಸಂಸ್ಥೆಯನ್ನು ಸ್ಥಾಪನೆ ಮಾಡಿ ಅವತ್ತು 8 ಬ್ರಾಂಚ್‌ಗಳನ್ನು ಇಡೀ ಅಖಂಡ ಬಿಜಾಪುರ ಜಿಲ್ಲೆಯಲ್ಲಿ ಸ್ಥಾಪಿಸಿತು. ಆದರೆ ಇವತ್ತೂ ಸಹ ನಮ್ಮ ಪರಿಸ್ಥಿತಿ ಯಾವ ರೀತಿಯೆಂದರೆ ಆ ಬರದಿಂದ ನಾವಿನ್ನೂ ಎದ್ದು ಬಂದಿಲ್ಲ. ಇವತ್ತು 100 ವರ್ಷದ ಮಳೆ ಇತಿಹಾಸವನ್ನು ನಾವು ತೆಗೆದುಕೊಂಡರೆ ನಮ್ಮ ಬಿಜಾಪುರ ಜಿಲ್ಲೆಗೆ 630ಮಿಲಿ ಮೀಟರ್ ವಾಡಿಕೆ ಮಳೆ ಬೇಕು. ಆದರೆ 100 ವರ್ಷದ ಇತಿಹಾಸದಲ್ಲಿ 77 ವರ್ಷ ವಾಡಿಕೆ ಮಳೆಗಿಂತ ಕಡಿಮೆ ಮಳೆಯನ್ನು ಬಿಜಾಪುರ ಜಿಲ್ಲೆಯಲ್ಲಿ ಪಡೆದಿದ್ದೇವೆ. ಕೇವಲ 23 ವರ್ಷಗಳು ಮಾತ್ರ ವಾಡಿಕೆಗಿಂತ ಹೆಚ್ಚಿನ ಮಳೆಯಾಗಿದೆ. ಇಂತಹ ಇತಿಹಾಸವನ್ನು ಏಕೆ ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆಂದರೆ, ಇವತ್ತು ನಾವು ಒಂದು ಹನಿ ನೀರಿಗಾಗಿ ಒಂದು ಸಾವಿರ ಫೀಟ್ ಬೋರ್‌ವೆಲ್ ಕೊರೆದರೂ ನೀರು ಬರದಂತಹ ಪರಿಸ್ಥಿತಿ ನನ್ನ ಕ್ಷೇತ್ರದಲ್ಲಿದೆ. ಇವತ್ತು ನಾನು ಈ ಸದನದ ಮುಖಾಂತರ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸುತ್ತೇನೆ. ನೀವು ಬಿಜಾಪುರ ಜಿಲ್ಲೆಯನ್ನು ವಿಶೇಷ ಬರ ಪೀಡಿತ ಜಿಲ್ಲೆಯೆಂದು ಘೋಷಿಸಿ. ಹಿಂದಿನ ಬ್ರಿಟಿಷ್ ಸರ್ಕಾರ 1927ರಲ್ಲಿ ಬರಗಾಲ ನಿವಾರಣಾ ಸಮಿತಿ ಮಾಡಿತ್ತೋ ಅದೇ ತರಹ ಬಿಜಾಪುರ ಜಿಲ್ಲೆಯ ಬರವನ್ನು ಸಂಪೂರ್ಣವಾಗಿ ನೀಗಿಸಬೇಕಾದರೆ ಯಾವ ಯೋಜನೆಗಳನ್ನು ಮಾಡಬೇಕು? ಈ ಜಿಲ್ಲೆಯ ಬರವನ್ನು ಯಾವ ರೀತಿ ಹೊಡೆದೋಡಿಸಬೇಕು? ಅದನ್ನು ತಾವು ಯೋಚಿಸಲಿಕ್ಕೆ ಒಂದು ಸಮಿತಿಯನ್ನು ತೀರ್ಮಾನ ಮಾಡಿ. ಏಕೆಂದರೆ ನಾವು ಖಾಯಂ ಬರದಲ್ಲಿರುವವರು. ಇಲ್ಲಿ ಎಲ್ಲಾ ರೀತಿಯಿಂದಲೂ ಬರ, ಇಲ್ಲಿನ ಪರಿಸ್ಥಿತಿ ಎಂತಹ ಕೆಟ್ಟ ಪರಿಸ್ಥಿತಿಯೆಂದರೆ ಬಿಜಾಪುರ ಜಿಲ್ಲೆಯಿಂದ ಒಬ್ಬ ಸಾಮಾನ್ಯ ಮನುಷ್ಯ ಬೆಂಗಳೂರಿಗೆ ಬರಬೇಕಾದರೆ 600 ಕಿ.ಮೀ.ಗಳಿಂದ ಬರಬೇಕು. ಇಷ್ಟು ಕಿ.ಮೀ.ಗಳಿಂದ ಬಂದು ಇಲ್ಲಿಂದ ಏನಾದರೂ ಕೆಲಸವನ್ನು ಮಾಡಿಕೊಂಡು ಹೋಗಬೇಕಾದರೆ ಅವನ ಪರಿಸ್ಥಿತಿ ಏನಾಗುತ್ತದೆಂದು ಯೋಚನೆ

ಮಾಡಿ. ಇಂತಹ ಸ್ಥಿತಿಯೊಳಗೆ ಈ ಬರದ ನಾಡಿನಲ್ಲಿ ಹುಟ್ಟಿರುವ ನಾವು ಆ ಬರವನ್ನು ನಿವಾರಣೆ ಮಾಡುವುದಕ್ಕೆ ನಮ್ಮ ಭಾಗದ ಎಲ್ಲಾ ಶಾಸಕರು ಒಟ್ಟುಗೂಡಿ ಸರ್ಕಾರಕ್ಕೆ ಮತ್ತೊಮ್ಮೆ ಮನವಿ ಮಾಡುತ್ತೇವೆ. ಈ ಬರವನ್ನು ಸಂಪೂರ್ಣ ಹೊಡೆದೋಡಿಸಲು ನಮ್ಮ ಜಿಲ್ಲೆಯಲ್ಲಿ ವಿಶೇಷ ಕಾರ್ಯಕ್ರಮವನ್ನು ಈ ಸದನದಲ್ಲಿ ಘೋಷಣೆ ಮಾಡಬೇಕೆಂದು ಮತ್ತೊಮ್ಮೆ ಆಗ್ರಹ ಮಾಡುತ್ತಿದ್ದೇನೆ. ಜೊತೆಗೆ ಇವತ್ತು ಬಿಜಾಪುರ ಜಿಲ್ಲೆ ಬಹುಶಃ ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿಯೇ ಅತ್ಯಂತ ಉತ್ಕೃಷ್ಟ ಜಿಲ್ಲೆಯೆಂದು ನೀವು ಹೇಳಬಹುದು. ನಮ್ಮಲ್ಲಿ ಪಂಚ ನದಿಗಳಿದ್ದರೂ ಸಹ ಒಳ್ಳೆಯ ಹವಾಮಾನ ಒಳ್ಳೆಯ ವಾತಾವರಣ, ಉತ್ತಮವಾದ ಬಿಸಿಲು ಇವೆಲ್ಲವನ್ನು ತೆಗೆದುಕೊಂಡರೆ ಇವತ್ತು ನಮ್ಮಲ್ಲಿ ಬೆಳೆಯುವಂತಹ ಬೆಳೆಯನ್ನು ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲಿಯೂ ಬೆಳೆಯುವುದಿಲ್ಲ. ಅಂತಹ ಜಿಲ್ಲೆ ಇವತ್ತು ಬರದಿಂದ ತತ್ತರಿಸಿ ನಮ್ಮ ರೈತರ ಆರ್ಥಿಕ ಸ್ಥಿತಿ ಯಾವ ಹಂತಕ್ಕೆ ಬಂದಿದೆಯೆಂದರೆ ಬಹುಶಃ ಕರ್ನಾಟಕ ರಾಜ್ಯದಲ್ಲಿಯೇ, ಅತ್ಯಂತ ಹೆಚ್ಚಿನ ರೈತರ ಆತ್ಮಹತ್ಯೆಗಳು ಎಲ್ಲಿಯಾದರೂ ಆಗಿದೆಯೆಂದರೆ ಅದು ಬಿಜಾಪುರ ಜಿಲ್ಲೆಯಲ್ಲಿ. ಅಂತಹ ಜಿಲ್ಲೆಯ ಕಡೆ ತಾವು ವಿಶೇಷ ಗಮನಹರಿಸಬೇಕು. ಈ ಜಿಲ್ಲೆಯಲ್ಲಿ ಐದು ನದಿಗಳು ಹರಿದರೂ ಸಹ ಕುಡಿಯುವುದಕ್ಕೆ ನೀರಿಲ್ಲ. ಈ ಬರವನ್ನು ನೀಗಿಸಬೇಕಾದರೆ ಕೆರೆ ನೀರು ತುಂಬುವ ಯೋಜನೆಯನ್ನು ತಾವು ಮಾಡಲೇಬೇಕು. ಜೊತೆಗೆ ನೀರಾವರಿ ಯೋಜನೆಗೆ ವಿಶೇಷ ಆದ್ಯತೆ ಕೊಟ್ಟು ಶೀಘ್ರ ರೀತಿಯಲ್ಲಿ ಮಾಡುವಂತಹ ಕೆಲಸವನ್ನು ಮಾಡಬೇಕು. ಜೊತೆಗೆ ಇವತ್ತು ತಾವು ವಿಶೇಷ ಮುತುವರ್ಜಿ ವಹಿಸಿ, ಎಲ್ಲಕ್ಕಿಂತ ಹೆಚ್ಚಿನ ಗೋಶಾಲೆಗಳು ಎಲ್ಲಾದರೂ ಇದೆಯೆಂದರೆ ಅದು ಬಿಜಾಪುರ ಜಿಲ್ಲೆಯಲ್ಲಿದೆ. ಸುಮಾರು 660 ಹಳ್ಳಿಗಳಲ್ಲಿ 250 ಹಳ್ಳಿಗಳಿಗೆ ಇವತ್ತು ಟ್ಯಾಂಕರ್ ಮುಖಾಂತರ ನೀರು ಸರಬರಾಜು ಮಾಡುವಂತಹ ಒಂದು ಜಿಲ್ಲೆ ಯಾವುದಾದರೂ ಇದೆಯೆಂದರೆ ಅದು ಬಿಜಾಪುರ ಜಿಲ್ಲೆ. ಇಂತಹ ಭೀಕರವಾದ ಬರಗಾಲ ಹೊಂದಿರಿವಂತಹ ಬಿಜಾಪುರ ಜಿಲ್ಲೆಯನ್ನು, ಸಂಪೂರ್ಣ ಬರದಿಂದ ತತ್ತರಿಸಿ ಹೋಗಿರುವ ಬಿಜಾಪುರ ಜಿಲ್ಲೆಯನ್ನು ತಾವು ಸದನದ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಎಲ್ಲರಿಗೂ ಮನವರಿಕೆ ಮಾಡಿ ಹೆಚ್ಚಿನ ವಿಶೇಷ ಪ್ಯಾಕೇಜನ್ನು ನಮ್ಮ ಜಿಲ್ಲೆಗೆ ಕೊಟ್ಟು ಬರವನ್ನು ನೀಗಿಸಬೇಕೆಂದು ಮಾನ್ಯ ಉಪಾಧ್ಯಕ್ಷರನ್ನು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ಸಾ.ರಾ.ಮಹೇಶ್‌ರವರು ಮಾತನಾಡಿ. ಇವರು ಸದನದಲ್ಲಿ ಹಾಜರಿಲ್ಲದ ಕಾರಣ ಮಾನ್ಯ ಸುರೇಶ್ ಗೌಡರವರು ಮಾತನಾಡಿ.

ಶ್ರೀ ಸುರೇಶ್‌ಗೌಡ(ನಾಗಮಂಡಲ): ಮಾನ್ಯ ಉಪಾಧ್ಯಕ್ಷರೆ, ಸದನದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟ ನಿಮಗೆ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಇವತ್ತು ತೀವ್ರತರವಾದ ಬರಗಾಲ ನನ್ನ ಜಿಲ್ಲೆಯಲ್ಲಿದೆ ನಾಗಮಂಗಲ, ಕೆ.ಆರ್.ಪೇಟೆ ಮತ್ತು ಮಳವಳ್ಳಿಯಲ್ಲಿರುವುದನ್ನು ಎಲ್ಲಾ ದಾಖಲೆಗಳಿಂದ ನಾವು ನೋಡುತ್ತಿದ್ದೇವೆ. ಇವತ್ತು ಸರ್ಕಾರ ಅಲ್ಪಸ್ವಲ್ಪ ಸಹಾಯವನ್ನು ಮಾಡುತ್ತಿದೆ. ಇವತ್ತು ಒಬ್ಬ ಶಾಸಕರು ಅಲ್ಲಿನ ಟಾಸ್ಕ್‌ಫೋರ್ಸ್ ಸಮಿತಿ ಅಧ್ಯಕ್ಷರಾಗಿರುತ್ತಾರೆ. ಒಂದು ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಆದ್ಯತೆಯನ್ನು ಕೊಡುತ್ತಿದ್ದೇವೆ. ಗ್ರಾಮಕ್ಕೆ ಅಧಿಕಾರಿಗಳೊಂದಿಗೆ ಹೋಗಿ ಈ ಗ್ರಾಮದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆಯೆಂದು ಹೇಳಿದ ಸಂದರ್ಭದಲ್ಲಿ ಸ್ಥಳದಲ್ಲಿ ಪರಿಹಾರ ಕೊಡುವಂತಹ ಅವಕಾಶ ಒಬ್ಬ ಶಾಸಕರಿಗೂ ಇಲ್ಲ, ಯಾರಿಗೂ ಇಲ್ಲ. ಅಲ್ಲೇನಾದರೂ ಕುಡಿಯುವ ನೀರಿಗೆ ತೊಂದರೆಯಿದೆ ಎಂದರೆ ನಾವು ಅಲ್ಲಿಂದ ಬರಬೇಕು, ಅಧಿಕಾರಿಗಳ ಸಭೆ ಕರೆಯಬೇಕು, action plan ಮಾಡಬೇಕು, ಡಿ.ಸಿ ಗೆ ಕಳುಹಿಸಬೇಕು. ಅವರು ಅದಕ್ಕೊಂದು OM ಮಾಡಬೇಕು, OM ಆದ ನಂತರ ಅದಕ್ಕೊಂದು agreement, estimation ಹೀಗೆ ಆಗುವಂತಹ ಸಂದರ್ಭದಲ್ಲಿ ಈ ಬರಗಾಲವೇ ಮುಗಿದು ಹೋಗಿರುತ್ತದೆ. ಆ ಪರಿಸ್ಥಿತಿಯಿದೆ. ಇವತ್ತು ನನ್ನ ತಾಲ್ಲೂಕಿಗೆ ಬರ ಪರಿಹಾರಕ್ಕೆ 110 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಕಳೆದ ಒಂದೂವರೆ ವರ್ಷದಿಂದ 34 ಲಕ್ಷ ರೂ.ಗಳು ಖರ್ಚಾಗಿದೆ. ಹೀಗೆ ಆದರೆ ನಾವು ಯಾವ ರೀತಿ ಬರ ಪರಿಹಾರ ಕಾರ್ಯಕ್ರಮಗಳನ್ನು ಮಾಡುವುದು? ಇವರು ಬಿಲ್ ಮಾಡುವುದಕ್ಕೆ ಒಂದು ವರ್ಷಗಳ ಕಾಲ ತೆಗೆದುಕೊಳ್ಳುವುದರಿಂದ ಇವತ್ತು ಒಂದು ಬೋರ್‌ವೆಲ್ ಕೊರೆಸಬೇಕೆಂದರೆ ಕೊರೆಯುವುದಕ್ಕೆ ಯಾರೂ ಬರುತ್ತಿಲ್ಲ. ಖಾಸಗಿಯವರು ಬೋರ್ ಕೊರೆದ ತಕ್ಷಣವೇ ದುಡ್ಡನ್ನು ಕೊಡುತ್ತಾರೆ. ಆದ ಕಾರಣ ಪ್ರೈವೇಟ್ ಪಾಯಿಂಟ್‌ಗಳನ್ನು ಮುಗಿಸಿಕೊಂಡು ನಿಮ್ಮ ಸರ್ಕಾರಿ ಪಾಯಿಂಟ್‌ಗಳಿಗೆ ಬರುತ್ತೇವೆಂದು ಹೇಳುತ್ತಾರೆ. ನನ್ನ ಕ್ಷೇತ್ರದಲ್ಲಿ ಶ್ರೀ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ವಿಶೇಷ ಕೋರಿಕೆಯ ಮೇಲೆ 200 ಬೋರ್‌ವೆಲ್‌ಗಳನ್ನು ಕೊರೆಸುವುದಕ್ಕೆ ಒಂದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದರು. 4–5 ಬೋರ್‌ವೆಲ್ ಬಿಟ್ಟರೆ ಎಲ್ಲಾ ಬೋರ್‌ಗಳಲ್ಲಿಯೂ ನೀರು ಬಂದಿದೆ. ಆದರೆ ಪಾಲಿಸಿ ಪ್ರೊಸೀಜರ್‌ಗಳಿದ್ದು ಅದು ಮುಗಿಯುವಷ್ಟರಲ್ಲಿ 6–7 ತಿಂಗಳಾಗುವ ಕಾರಣ ಆ ನೀರನ್ನು ಕುಡಿಯುವ ವ್ಯವಸ್ಥೆ ಇಂದಿಗೂ ಆಗಿಲ್ಲ. ನಮ್ಮ ಕ್ಷೇತ್ರಕ್ಕೆ 100 ಲಕ್ಷರೂ ಕೊಟ್ಟಿದ್ದರೂ ಸಹ ಅದಕ್ಕೆ ತಕ್ಕಂತೆ 100 ಕೋಟಿ ರೂ.ಗಳ ಕಾಮಗಾರಿ ಮುಗಿದು ಹೋಗಿದೆ. ಆದರೆ ಇವತ್ತಿಗೂ

ಪೇಮೆಂಟ್‌ಗಳಾಗುತ್ತಿಲ್ಲ. ನಮ್ಮ ಜಿಲ್ಲಾ ಮಂತ್ರಿಗಳು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಕೇವಲ 36 ಲಕ್ಷ ರೂ.ಗಳ ಪೇಮೆಂಟ್ ಆಗಿದೆ. ಮದ್ದೂರಿನ ಕೆಲವು ಭಾಗಗಳು ಸಹ ನನ್ನ ಕ್ಷೇತ್ರಕ್ಕೆ ಸೇರುತ್ತವೆ. ಕೊಪ್ಪ ಹೋಬಳಿಯಲ್ಲಿ, ಮಳೆಯ ಅಭಾವದಿಂದ ಕೊನೆಯ ಭಾಗದಲ್ಲಿ ನೀರು ಕೊಡದೆ, ಎಷ್ಟು ಬೆಳೆ ಹಾಳಾಗಿದೆಯೆಂದು ಅವಲೋಕನ ಮಾಡಿ ನೋಡಿದಾಗ 3,600 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಕಬ್ಬು ಬೆಳೆ ಒಣಗಿ ಹೋಗಿದೆ, ತೀವ್ರತರವಾದ ಹಾನಿಯುಂಟಾಗಿದ್ದು ಇದಕ್ಕೆ ಪರಿಹಾರವೇನು? ಸರ್ಕಾರ ಇದಕ್ಕೆ ತಕ್ಷಣ ಪರಿಹಾರವನ್ನು ಘೋಷಿಸಬೇಕು. ರೈತರು ಇಂದು ಸಂಕಷ್ಟದಲ್ಲಿರುವುದರಿಂದ ನಿಮ್ಮ ಉತ್ತರವನ್ನು ನಾವು ಅಪೇಕ್ಷೆ ಪಡುತ್ತಿದ್ದೇವೆ. ಇದರ ಜೊತೆಗೆ ನಾನಿರಬಹುದು, ಶ್ರೀ ನರೇಂದ್ರ ಸ್ವಾಮಿ ಇರಬಹುದು, ಮದ್ದೂರಿನವರಿರಬಹುದು ನಾವೆಲ್ಲರೂ ಕಾವೇರಿ ನೀರಾವರಿ ನಿಗಮದ ಕೊನೆಯ ಹಂತದಲ್ಲಿರುವವರು. 1982 ರಲ್ಲಿ Lift irrigation ಪ್ರಾರಂಭ ಮಾಡಬೇಕೆಂದು ಹೇಳಿ ಇದಕ್ಕೆ ಟೆಂಡರ್ ಕರೆದು ಕೆಲಸಕಾರ್ಯಗಳು ಮುಗಿದಿವೆ. 2012ನೇ ಇಸವಿಯಾದರೂ ಸಹ ಒಂದೇ ಒಂದು ದಿವಸ ಸ್ವಿಚ್ ಹಾಕುವ ಕೆಲಸ ನೀರಾವರಿ ನಿಗಮದ ಅಧಿಕಾರಿಗಳು ಮಾಡಿರುವುದಿಲ್ಲ. 30 ವರ್ಷಗಳು ಕಳೆದರೂ ಸಹ ಈ ಕೆಲಸ ಕಾರ್ಯಗಳು ಆಗಿಲ್ಲವೆಂದರೆ ಹೇಗೆ?At least,ಆ ಭಾಗದಲ್ಲಿ Lift irrigation ನಲ್ಲಿ ನೀರಿದೆ, ಹೀಗೆ ನನ್ನ ಕ್ಷೇತ್ರಕ್ಕೆ 8 Lift irrigation ಗಳು ಬರುತ್ತವೆ. ಅದರಲ್ಲಿ ಒಂದನ್ನೂ ಸಹ ಕಮಿಷನ್ ಮಾಡದೇ ಇರುವುದಕ್ಕೆ ಬಹಳ ನೋವುಂಟಾಗುತ್ತದೆ. ನಮ್ಮ ಜಿಲ್ಲೆಗೆ ಎಲ್ಲಾ ಮುಖ್ಯಮಂತ್ರಿಗಳು ಆಗಮಿಸಿದಾಗ ಮೂರು ತಿಂಗಳನಲ್ಲಿ ಇವೆಲ್ಲವನ್ನೂ ಸರಿ ಮಾಡಿಸಿಕೊಡುತ್ತೇವೆಂದು ಹೇಳಿದ್ದರು. ಈಗ 3ನೇ ಮುಖ್ಯಮಂತ್ರಿಗಳು ಬಂದಿದ್ದು, ಅವರೂ ಸಹ ಏನು ಮಾಡುತ್ತಾರೆಂಬುದನ್ನು ಮುಂದಿನ ದಿನಗಳಲ್ಲಿ ನೋಡಬೇಕಾಗುತ್ತದೆ. ಇದರ ಜೊತೆಗೆ ನಮ್ಮ ಭಾಗದಲ್ಲಿ ಭತ್ತದ ಬೆಳೆಯನ್ನು ಯಾರೂ ಬೆಳೆಯುವುದಿಲ್ಲ. ನನ್ನ ಕ್ಷೇತ್ರದಲ್ಲಿ ಹೆಚ್ಚಾಗಿ ತರಕಾರಿ, ಹುರುಳಿಕಾಳು, ಬಿತ್ತನೆ ಬೀಜದ ರೀತಿಯಲ್ಲಿ ಬೆಳೆಯುವ ಬೆಳೆಗಳನ್ನು ಬೆಳೆಯುವಂತಹದು, ದನಕರುಗಳಿಗೆ ಬೇಕಾಗುವ ಮೇವಿಗೆ ನಮ್ಮ ಭಾಗದಲ್ಲಿ ಹಾಹಾಕಾರ ಬಂದಿದೆ. ನಿನ್ನೆಯಷ್ಟೇ ಬರ ಪರಿಹಾರ ಸಭೆಯಲ್ಲಿ ಮೇವಿನ ಒಂದು Fodder Bank ನ್ನು ಪ್ರಾರಂಭ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಈ ಕಾರ್ಯ ತಕ್ಷಣ ಆಗಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ. ಇದರ ಜೊತೆಗೆ ತಾವು ಈಗಾಗಲೇ ಹೇಳಿದಂತೆ ಸಿ.ಆರ್.ಎಫ್. ನಲ್ಲಿ ಕುಡಿಯುವ ನೀರಿಗಾಗಿ ಹಣ ಕೊಡುತ್ತೇವೆಂದು ಹೇಳಿದ್ದೀರಿ. ಬೇರೆ ಯಾವುದೇ ಕಾಮಗಾರಿಗಳಿಗೆ ಹಣ ಕೇಳಿದರೆ ಉದ್ಯೋಗ ಖಾತ್ರಿ ಯೋಜನೆ

ಮಾಡಿ ಎಂದು ಸೂಚನೆ ಕೊಡುತ್ತೀರಿ. ಉದ್ಯೋಗ ಖಾತ್ರಿಗಳನ್ನು ಎಲ್ಲಿ ಮಾಡಲಾಗುತ್ತಿದೆ? ಈ ಸರ್ಕಾರಕ್ಕೆ ಉದ್ಯೋಗ ಖಾತ್ರಿ ಮಾಡಬೇಕೆನ್ನುವ ಬದ್ಧತೆ ಇದೆಯೇ? ಖಂಡಿತಾ ಇಲ್ಲ. ಏಕೆಂದರೆ ಇವತ್ತಿಗೂ Action Plan ಗಳಿಗೆ ಅಪ್ರೂವಲ್ ಸಿಕ್ಕಿಲ್ಲ. ಅದಕ್ಕೆ ಇಲ್ಲ ಸಲ್ಲದ ಕಾನೂನು ಕಟ್ಟಳೆಗಳನ್ನು ಹಾಕುತ್ತಾರೆ. 40:60 Raitomaintain ಮಾಡದೇ ಡೈವರ್ಷನ್ ಆದರೆ ಸಸ್ಪೆಂಡ್ ಮಾಡುತ್ತೇವೆಂದು ಅಧಿಕಾರಿಗಳನ್ನು ಹೆದರಿಸಿರುತ್ತಾರೆ. ಹಾಗೇ ಹೆದರಿಸಿದಂತಹ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಬದಲಾವಣೆ ಮಾಡಿರುವುದಿಲ್ಲ. ಜನಗಳು ಗುಳೆ ಹೋಗುವಂತಹ ಪರಿಸ್ಥಿತಿ ಬಂದಿದೆ. ದಯಮಾಡಿ ಇದರ ಬಗ್ಗೆ ಸರ್ಕಾರ ನಿಖರವಾದ, ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ಕೊನೆಯ ಪಕ್ಷ ಕುಡಿಯುವ ನೀರಿಗಾಗಿ ತಕ್ಷಣ ಪರಿಹಾರ ಮಾಡಿಕೊಡಲು ಮಾನ್ಯ ಶಾಸಕರುಗಳಿಗೆ ಯಾವುದಾದರೊಂದು ರೀತಿಯಲ್ಲಿ ಅವಕಾಶ ಮಾಡಿಕೊಡಬೇ-ಕೆಂದು ಕೇಳಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಎಸ್.ನಾಡಗೌಡ (ಅಪ್ಪಾಜಿ) (ಮುದ್ದೇ ಬಿಹಾಳ): ಸನ್ಮಾನ್ಯ ಸಭಾಧ್ಯಕ್ಷರೆ, ತಮಗೆ ಪ್ರಥಮವಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತಾ, ಸಾಕಷ್ಟು ಜನ ಮಾತನಾಡಿದ್ದಾರೆ. ರಾಜ್ಯ ಭೀಕರವಾದಂತಹ ಬರಗಾಲವನ್ನು ಎದುರಿಸುತ್ತಿರುವುದರಲ್ಲಿ ಯಾವ ಸಂದೇಹವೂ ಇಲ್ಲ, ಭಿನ್ನಾಭಿಪ್ರಾಯವೂ ಇಲ್ಲ. ಬಹಳ ಮುಖ್ಯವಾಗಿ ಬರಗಾಲದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ತ್ವರಿತಗತಿಯಲ್ಲಿ ಕೈಗೊಳ್ಳಬೇಕಾ-ದಂತಹ ಕಾರ್ಯಕ್ರಮಗಳೇನು, ಮಾಡಿಕೊಳ್ಳಬೇಕಾದ ಸಿದ್ಧತೆಗ-ಳೇನು ಮತ್ತು long term ಯೋಜನೆಗಳು with a vision ಏನು ಮಾಡಿದ್ದೇವೆ ಎಂಬುದರ ಬಗ್ಗೆ ಬಹಳ ಸುಧೀರ್ಘವಾಗಿ ಆಲೋಚನೆ ಮಾಡುವಂತಹ ಸಂದರ್ಭವಾಗಿದೆ. ಅದರಲ್ಲೂ ಸರ್ಕಾರ ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕು. ನಮಗೆಲ್ಲಾ ಗೊತ್ತಿರುವ ಹಾಗೆ 'ಭೀಕರ ಬರಗಾಲ, ಭೀಕರ ಬರಗಾಲ' ಎಂದು ಮಾತನಾಡುತ್ತಿದ್ದೇವೆ. ನಾವು ಇವತ್ತು ಎಲ್ಲಿಗೆ ತಲುಪುತ್ತಿದ್ದೇವೆಂದರೆ ಬಂಜರಾಗುವಂತಹ ಮಟ್ಟಕ್ಕೆ ತಲುಪುತ್ತಿದ್ದೇವೆ. ಮೊಹೆಂಜದಾರೋ ನಾಗರಿಕತೆ ಬಗ್ಗೆ ನಾನು ಒಂದು ಕಡೆ ಓದುತ್ತಿದ್ದೆ. ಅಲ್ಲಿ ಕುಡಿಯುವುದಕ್ಕೆ ನೀರಿಲ್ಲದ ಪರಿಸ್ಥಿತಿ ಉಂಟಾಗಿ ಅಲ್ಲಿನ ಜನರು ವಲಸೆ ಹೋಗಿ ಅಲ್ಲಿ ದಿಢೀರ್ ಆಗಿ ಕುಡಿಯುವುದಕ್ಕೆ ನೀರಿಲ್ಲದೆ ಪ್ರಾಣಿಗಳು, ಜನರು ಸತ್ತು ಹೋಗಿ ಅದು ಹಾಳಾಯಿತು ಎಂದು ಓದಿದ್ದೇನೆ. ಇದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ. Exploitation ನಲ್ಲಿ ಯಾವ extent ಗೆ ಹೋಗಿದ್ದೇವೆ? ಎಷ್ಟು ನೀರನ್ನು

ನಾವು exploitation ಮಾಡಿದ್ದೇವೆ? ಆ exploitation ನಲ್ಲಿ ನಾವು ಬಳಕೆ ಮಾಡಿದಂತಹ ನೀರಗೆ ಬರಗಾಲದ ಸಮಯದಲ್ಲಿ ನಿಯಂತ್ರಣ ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳಬೇಕು? Water harvesting structure ಬಗ್ಗೆ ಏನು ಆಲೋಚನೆ ಮಾಡಿದ್ದೇವೆ? ನಮ್ಮಲ್ಲಿ ಇದಕ್ಕೆ ಸಂಬಂಧಿಸಿದಂತೆ ಒಂದು ಗಾದೆ ಮಾತಿದೆ. 'ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿ ತೋಡಿದಂತೆ' ಇದು ನಮ್ಮ ಪರಿಪಾಠವಾಗಿದೆ. ನಾವು ಯಾರೇ ಬರಲಿ ಅಪವಾದ ಕೊಡುವುದನ್ನು ಬಿಟ್ಟರೆ, ಸಾಧನೆ ಏನು ಮಾಡಿದ್ದೇವೆಂದು ಹೇಳುವಂತಹ ಸಾಮರ್ಥ್ಯ ಯಾರೂ ಬೆಳೆಸಿಕೊಂಡು ಬಂದಿಲ್ಲ. ಇದು ರಾಜಕೀಯ ಇಚ್ಛಾಶಕ್ತಿಯ ಕೊರತೆ. ಇದನ್ನು ಒಪ್ಪಲೇ ಬೇಕಾಗುತ್ತದೆ. ಹೀಗಾಗಿ ನಮ್ಮ ರಾಜ್ಯದಲ್ಲಿ ಈ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಬಹಳ ಮುಖ್ಯ, ಇಡೀ ರಾಜ್ಯದಲ್ಲಿ 400–800 ಅಡಿ ಬೋರ್‌ವೆಲ್ ಕೊರೆಸಿದರೂ ನೀರು ಬರುತ್ತಿಲ್ಲ. ಕಳೆದ ವರ್ಷ ನಮ್ಮ ಗೋವಿಂದ ಕಾರಜೋಳ ಸಾಹೇಬರು ಇದಕ್ಕಾಗಿ ಬಹಳ ಉತ್ತಮವಾದ ಕಾರ್ಯವನ್ನು ಮಾಡಿದ್ದಾರೆ. ಕೆರೆ ಹೂಳು ತೆಗೆಯುವಂತಹ ಕೆಲಸ, ಕೆರೆಗಳಿಗೆ ನೀರು ತುಂಬಿಸುವಂತಹ ಕೆಲಸದ ಪ್ರಯತ್ನವನ್ನು ಮಾಡಿದ್ದಾರೆ. ಅದಾಗ್ಯೂ ಕೂಡ ಯಶಸ್ವಿಯಾಗಿ ಬದಲಾವಣೆಗಳನ್ನು ಕಾಣುತ್ತಿಲ್ಲ. It is a short term plan. We cannot expect any change in one year. ಆದರೆ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಸದಸ್ಯರೆಲ್ಲರೂ ಮಾತನಾಡಿದರು. ಈ ಯೋಜನೆ ಪ್ರಾರಂಭವಾಗಿ ಮೂರು ವರ್ಷಗಳಾಯಿತು. ಇವತ್ತು ಉದ್ಯೋಗ ಖಾತ್ರಿ ಯೋಜನೆಯ್ಲುಲಿ 2,340 ಕೋಟಿ ರೂ.ಗಳಷ್ಟು Action Plan ಆಗಿ ಮಂಜೂರಾತಿಯನ್ನು ಪಡೆದಿದೆ. ಕಳೆದ ವರ್ಷ 1,800 ಕೋಟಿ ರೂ,ಗಳನ್ನು ಖರ್ಚು ಮಾಡಲಾಗಿದೆ. ಪ್ರಥಮ ವರ್ಷದಲ್ಲಿ 300 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಉದ್ಯೋಗ ಖಾತ್ರಿಯಲ್ಲಿ ಮುಖ್ಯವಾಗಿರುವುದೇನೆಂದರೆ water harvesting structure ಗೆ ಬಹಳ ಮಹತ್ವವನ್ನು ಕೊಡುವ ಅಂಶವಿದ್ದು ಶೇ.20–30 ರಷ್ಟು ಕಾದಿರಿಸಬೇಕೆಂದಿದೆ, ಅದನ್ನು ಯಶಸ್ವಿಯಾಗಿ ಮಾಡಿದ್ದೇವೆ, ನಾವು ಮೂರು ವರ್ಷದಿಂದ ಇಲ್ಲಿಯವರೆಗೆ ಮಾಡಿದ್ದರೆ ಬಹುತೇಕ ಇಷ್ಟು ಭೀಕರವಾದಂತಹ ಬರಗಾಲ ಕಾಣುತ್ತಿರಲಿಲ್ಲ. ನಮ್ಮ ಸ್ನೇಹಿತರಾದ ಶ್ರೀ ಕಟಕ ದೊಂಡ ವಿಠ್ಠಲ ಅವರು 1791ರ ಬಗ್ಗೆ ಉಲ್ಲೇಖ ಮಾಡಿದರು. ಆ ಸಮಯದಲ್ಲಿ ಬುರುಡಿ ಬರಗಾಲ ಎಂದು ಬಂದಿತ್ತು. ಎಲ್ಲಿ ಹೋದರೆ ಅಲ್ಲಿ ಜನರ ಬುರುಡೆ ಕಾಣುತ್ತಿತ್ತು ಮತ್ತು ಆ ಕಾಲದಲ್ಲಿ ದನಕರುಗಳೆಲ್ಲಾ ಸತ್ತು ರಸ್ತೆಯಲ್ಲಿ ಬಿದ್ದಿರುತ್ತಿತ್ತು ಅದನ್ನು ದೋಗಿ ಬರ ಎಂದು

ಹೇಳುತ್ತಿದ್ದರು. ಅವರಿಗೆ ಆ ಕಾಲದಲ್ಲಿ ಬೋರ್‌ವೆಲ್ ಪದ್ಧತಿ ಇರಲಿಲ್ಲ. ಕೇವಲ ಸರ್ಫೇಸ್ ವಾಟರ್ ಅಷ್ಟೇ. ಬೋರ್‌ವೆಲ್ ಪದ್ಧತಿ ಇದ್ದಿದ್ದರೆ ಬಹುತೇಕ ಆ ರೀತಿಯ ಪರಿಸ್ಥಿತಿ ಅವರಿಗೆ ಆಗುತ್ತಿರಲಿಲ್ಲ. ಆದರೆ ಬರುವಂತಹ ವರ್ಷಗಳಲ್ಲಿ ಆಧುನಿಕ ತಂತ್ರಜ್ಞಾನ ಪದ್ಧತಿಗಳಿದ್ದರೂ ಸಹ, ಆಧುನಿಕ ಕಾಲದಲ್ಲಿ ಹಿಂದಿನ ಕಾಲದ ದೋಗಿ ಬರಗಾಲ ನೋಡುವುದಕ್ಕೆ ಬಹಳ ದಿವಸ ಉಳಿದಿಲ್ಲ. ಏಕೆಂದರೆ ನಾವು ಇದನ್ನು ಬಹಳ ಎಚ್ಚರಿಕೆಯಿಂದ ಆಲೋಚನೆ ಮಾಡಬೇಕಾಗಿದೆ. ನಾವು ಯಾವುದಕ್ಕೆ ಯಾವ ರೀತಿಯ ಒತ್ತನ್ನು ಕೊಡಬೇಕು? ಸಾಮಾನ್ಯವಾಗಿ ರೈತರೇ ಹೆಚ್ಚಾಗಿ ಇಂತಹ ಪರಿಸ್ಥಿತಿಗೆ ತುತ್ತಾಗುತ್ತಿದ್ದಾರೆ. ಬರಗಾಲ ಬಂದಾಗ ಸಂಕಷ್ಟಕ್ಕೆ ಮೊದಲು ಒಳಗಾಗುವವರೆಂದರೆ ದೈನಂದಿನ ಜೀವನವನ್ನು, ತನ್ನ ಉದ್ಯೋಗವನ್ನು ಯಾರು ವ್ಯವಸಾಯಕ್ಕೆ ಅವಲಂಬಿಸಿರುತ್ತಾರೋ ಅವರೇ ರೈತರು ಮತ್ತು ರೈತ ಕೃಷಿಕರೇ ಇಂತಹ ತೊಂದರೆಗೆ ಒಳಗಾಗುತ್ತಾರೆ. ಅವನು ತೊಂದರೆಗೊಳಗಾಗಿ ಇವತ್ತು ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಒಂದು ಗ್ರಾಮದಲ್ಲಿ ನಮ್ಮ ಬಿಜಾಪುರ ಜಿಲ್ಲೆ ಮತ್ತು ಬೇರೆ ಕಡೆ ಇರತಕ್ಕಂಥ ಬಯಲುಸೀಮೆ ಇರಬಹುದು, ಮಾನ್ಯ ಮುನಿಯಪ್ಪನವರು ಹೇಳಿದರು, ನೀವು ಹಳ್ಳಿಗಳಿಗೆ ಹೋದರೆ, ಸುಮಾರು 20 ರಿಂದ 25% ಜನ ಊರಿನಲ್ಲಿ ಸಿಗುವುದಿಲ್ಲ. ಕೇವಲ ಮುದುಕರು, ಮನೆ ಕಾಯತಕ್ಕಂಥವರು ಸಿಗುತ್ತಾರೆ. ಅಲ್ಲಿ ಅವರನ್ನು ನೋಡಿಕೊಳ್ಳುವವರು ಯಾರೂ ಗತಿ ಇಲ್ಲ. ಇವತ್ತು ನಾವು ಈ ಪರಿಸ್ಥಿತಿ ತಂದುಕೊಳ್ಳುವುದಕ್ಕೆ ಕಾರಣ ಯಾರು? ನಾವುಗಳು. ನಾವು ವ್ಯಕ್ತಿಯಾಗಿ ಒಬ್ಬ ಮನುಷ್ಯ ಮತ್ತೊಬ್ಬ ವ್ಯಕ್ತಿಗೆ ಗೌರವಿಸದೇ ಹೋದರೆ, ಅವನಿಗೆ ಒಬ್ಬ ವ್ಯಕ್ತಿ ಪುನಃ ಗೌರವ ನೀಡುವುದಿಲ್ಲ. ಅದೇ ರೀತಿಯಾಗಿ ನಾವು ನಿಸರ್ಗಕ್ಕೆ, ಪ್ರಕೃತಿಗೆ ಗೌರವಿಸದೇ ಹೋದರೆ, ಆ ಪ್ರಕೃತಿ ಒಂದು ಕಾಲಕ್ಕೆ ನಮ್ಮನ್ನು ಗೌರವಿಸುವುದಿಲ್ಲ ಎನ್ನುವುದನ್ನು ನಾವು ಪ್ರತಿಯೊಬ್ಬರು ತಿಳಿದುಕೊಳ್ಳಬೇಕಾಗುತ್ತದೆ. ಇದಕ್ಕೋಸ್ಕರ ನಾವು ತುರ್ತಾಗಿ ತೆಗೆದುಕೊಳ್ಳತಕ್ಕಂಥ ಕಾರ್ಯಕ್ರಮ ಏನು? ಬೋರ್‌ವೆಲ್ ಹಾಕಿಸುವಂಥದ್ದನ್ನು ಪ್ರಯತ್ನ ಮಾಡುತ್ತಿದ್ದೇವೆ. ಬೋರ್‌ವೆಲ್ ಬಗ್ಗೆ ಉದಾಹರಣೆಗೆ ನಮ್ಮಲ್ಲೇ ಹೇಳಬೇಕಾದರೆ ಮಾನ್ಯ ಕಾರಜೋಳರವರೆ, 120 ರಿಂದ 130 ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆ. ಶೇಕಡ 40%ರಷ್ಟು successful ಆಗಿದ್ದಾವೆ. ಇನ್ನುಳಿದವು ಎಲ್ಲಾ ಕೂಡ fail ಆಗಿವೆ. Rate of success ಎಷ್ಟಿದೆ ಅಂದರೆ, 40–42% ಇದೆ. ಅದು yield ಎಷ್ಟಿದೆ? ಇನ್ನು ಒಂದು ತಿಂಗಳಾದರೆ ಸಾಕು, ಅವೂ dry ಆಗುತ್ತವೆ. ಇದು ನಮಗೆ solution ಅಲ್ಲ. ಇವತ್ತು ಅದಕ್ಕೋಸ್ಕರವೇ Multi-Village schemes ಅನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಹೆಚ್ಚು ಉತ್ತೇಜನ ನೀಡುತ್ತಿದೆ. ಸುದೈವಕ್ಕೆ ಮುದ್ದೇಬಿಹಾಳ

ತಾಲ್ಲೂಕಿನಲ್ಲಿ ಸ್ವಲ್ಪ ದಿನಗಳಲ್ಲಿ ಸುಮಾರು 9 ಯೋಜನೆಗಳು ಪೂರ್ತಿಗೊಳ್ಳುತ್ತವೆ. ಆದರೆ ಮೊದಲನೆಯದಾಗಿ ನಾವು rain harvesting structures ಗೆ ಹೆಚ್ಚು ಒತ್ತು ಕೊಡಬೇಕು. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಬರತಕ್ಕಂಥ ಹಣವು ಸರಿಯಾಗಿ ಬಳಕೆಯಾಗುತ್ತಿಲ್ಲ. ಪಂಚಾಯತ್‌ಗಳಲ್ಲಿ ಅದರ ಬಗ್ಗೆ ಸರಿಯಾಗಿ ಬಳಕೆಯಾಗುತ್ತಿಲ್ಲ. ಉದ್ಯೋಗ ಚೀಟಿ ಪಡೆಯತಕ್ಕಂಥ ಕಾರ್ಮಿಕರಿಗೆ ಅಲ್ಲಿ ಉದ್ಯೋಗ ಸಿಗುವಂಥದ್ದರಲ್ಲಿ ವಿಫಲರಾಗುತ್ತಿದ್ದಾರೆ. ಸಣ್ಣಮಟ್ಟ ರಾಜಕೀಯ, ತಮಗೆಲ್ಲರಿಗೂ ಗೊತ್ತಿದೆ. ಇದಕ್ಕೆ ನೀವು ಕಡಿವಾಣ ಹಾಕಬೇಕಲ್ಲವೇ? ಉದ್ಯೋಗ ಖಾತ್ರಿಯ ಹಣ ಇವತ್ತು ಏಕೆ ಬಳಕೆಯಾಗುತ್ತಿಲ್ಲ? ಇದಕ್ಕೆ ಮುಖ್ಯ ಕಾರಣ ಕೆಳಮಟ್ಟದ ರಾಜಕೀಯ ಕೂಡ ಒಂದು. ಅವನ ಚೀಟಿ ಮಾಡಬೇಡ. ಇವನ ಚೀಟಿ ಮಾಡು. ಇವನನ್ನು ಹೊಲಕ್ಕೆ ಕೆಲಸ ಹಾಕಬೇಡ, ಇವನನ್ನು ಹೊಲಕ್ಕೆ ಕೆಲಸ ಹಾಕು. ಧಾರಾಳವಾಗಿ ಸರ್ಕಾರ ಹಣ ಕೊಡತಕ್ಕಂಥದ್ದರಲ್ಲಿ, ನಾನು RDPR ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ದಯವಿಟ್ಟು ತಾವು ಒಮ್ಮೆ, ಈ ಪಂಚಾಯತ್‌ನಲ್ಲಿರುವ ಅಧ್ಯಕ್ಷರುಗಳಿಗೆ, ಅಲ್ಲಿನ PDO ಗಳಿಗೆ, ನಿಮ್ಮ CEO ಗಳನ್ನು ಕರೆದು ಜಿಲ್ಲಾವಾರು review ಮಾಡಬೇಕು. ಯಾವ ಕಾರಣದಿಂದಾಗಿ ಉದ್ಯೋಗ ಚೀಟಿಗಳನ್ನು ನೀವು ಹೆಚ್ಚಿಸಲಿಕ್ಕೆ ಆಗುತ್ತಿಲ್ಲ? ಉದ್ಯೋಗಗಳನ್ನು ಹೆಚ್ಚಿಸಲಿಕ್ಕೆ ಆಗುತ್ತಿಲ್ಲ? ಇದರ ಬಗ್ಗೆ ನೀವು ಸಂಪೂರ್ಣವಾದಂತಹ ಮಾಹಿತಿ ಪಡೆದು ಅವರಿಗೆ ಒಂದು training programme ಮಾಡಿದರೂ ಪರವಾಗಿಲ್ಲ ಎನ್ನುವ ಮಾತನ್ನು ಹೇಳಲು ಇಷ್ಟಪಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ (ಮಾನ್ಯ ಕಾರ್ಮಿಕ ಹಾಗೂ ರೇಷ್ಮೆ ಸಚಿವರು): ತಮ್ಮ ಭಾಗದಲ್ಲಿ ಏನಿದೆಯೋ ಗೊತ್ತಿಲ್ಲ. ನಮ್ಮಲ್ಲಿ ಇತ್ತೀಚೆಗೆ job Cards ಎಂದು ಏನು ಮಾಡಿದ್ದೇವೆ, ನೇರವಾಗಿ ಅವರ ಅಕೌಂಟ್‌ಗೇ ಹಣ ಹೋಗುವಂಥದ್ದು ಎಂದು ಆಯಿತಲ್ಲ, ಈ ಹಣ ಮಧ್ಯವರ್ತಿಗಳ ಕೈಗೆ ಸೇರುತ್ತಿಲ್ಲ. ಯಾವಾಗ ಹಣ ಮಧ್ಯವರ್ತಿಗಳ ಕೈ ಸೇರುತ್ತಿಲ್ಲ. Job card-holders ಕಡಿಮೆಯಾದರು. ನಮ್ಮ ಜಿಲ್ಲೆಯಲ್ಲಿ 1 ಲಕ್ಷದ 20 ಸಾವಿರ ಇದ್ದರು. ಈಗ 60.000 ಬಂದಿದೆ. 60,000 eliminate ಆದರು. ಈ 60,000 ನಲ್ಲಿ ಏನಾಗುತ್ತದೆ ಎಂದರೆ, ನೇರವಾಗಿ ಹಣ bank accountಗೆ ಎಂದು ಮಧ್ಯವರ್ತಿಗಳು, ಮೇಸ್ತ್ರಿಗಳು ಅಂಥಿಂಥವರು middle men ಇದ್ದರಲ್ಲಾ ಅವರು ಕೊಚ್ಚಿ ಆಚೆ ಹೋದರು. ಅವರ ಹತ್ತಿರ ಇವರು ಹೋಗಿ ಹಣ ಕೊಡಿಸಿಕೊಳ್ಳಬೇಕಾಗುತ್ತದೆ. ಹಾಗಾಗಿ ಇದು suffer ಆಗುತ್ತಿದೆ. ನಿಮ್ಮಲ್ಲಿ

ಏನಿದೆಯೋ ಗೊತ್ತಿಲ್ಲ. ನಮ್ಮ experience I am just putting before you.

ಶ್ರೀ ಸಿ.ಎಸ್.ನಾಡಗೌಡ: ತಾವು ಒಬ್ಬ ಮಂತ್ರಿಗಳ experience ಇದೆ ಎಂದ ಮೇಲೆ you should see that it is controlled. It is controlled by the Government, not anyone is there to control it.

(ಗೊಂದಲ)

ಶ್ರೀ ಬಿ.ಎನ್.ಬಚ್ಚೇಗೌಡ: Why it has come down ಎನ್ನುವುದಕ್ಕೆ ಹೇಳುತ್ತಿದ್ದೇನೆ. ಇದು ಒಬ್ಬರ ಸಮಸ್ಯೆ ಅಲ್ಲ. ನೀವು ಈ ಕಡೆ ಮಂತ್ರಿಗಳಿದ್ದಿರಿ. ಆ ಕಡೆ ವಿರೋಧ ಪಕ್ಷದವರು ಎಲ್ಲರ ಕಡೆ ಇರುವುದನ್ನು ನಾನು ಹೇಳುತ್ತಿರುವುದು. Why it has come down ಎನ್ನುವುದಕ್ಕೆ ಮಾನ್ಯ ನಾಡಗೌಡರು ಚೆನ್ನಾಗಿ ಹೇಳುತ್ತಾರೆ. ಅದಕ್ಕೋಸ್ಕರ just I supported him. The position, I explained.

ಶ್ರೀ ಸಿ.ಎಸ್.ನಾಡಗೌಡ:I shared my views with you. ಅದಕ್ಕೆ ಏನೂ ಇಲ್ಲ. ನನ್ನ ಸಂಪೂರ್ಣ ಸಹಮತ ಕೊಡುತ್ತೇನೆ. ಆದರೆ ಇದನ್ನು ನಿಯಂತ್ರಣ ಮಾಡತಕ್ಕಂಥ machinery ಯಾರ ಕೈಯಲ್ಲಿದೆ? ಉದ್ಯೋಗ ಖಾತ್ರಿ ಯಾವಾಗ ಪ್ರಾರಂಭ ಆಯಿತು, ಅಲ್ಲಿಂದ ಸುದೈವಕ್ಕೆ ತಾವೆಲ್ಲ ಇದ್ದೀರಿ. ಕಾರ್ಯಕ್ರಮ ಕೇಂದ್ರ ಸರ್ಕಾರದ್ದು, ಆದರೆ ಇಲ್ಲಿ ಕೆಲವೊಂದು ಸಂಶಯ ಬರುವ ರೀತಿಯಲ್ಲಿ ಇವತ್ತು ಆಗುತ್ತಿದೆ, ಏನು ಆಗುತ್ತಿದೆ? ಉದ್ಯೋಗ ಖಾತ್ರಿ ಯೋಜನೆ ಯಶಸ್ವಿಯಾಗಬಾರದು, ಏಕೆಂದರೆ, ಯಶಸ್ವಿಯಾದರೆ ಕೇಂದ್ರ ಸರ್ಕಾರಕ್ಕೆ ಒಂದು ಮೆರಗು ತರತಕ್ಕಂಥ ಕಾರ್ಯಕ್ರಮ ಆಗುತ್ತದೆಯೋ ಏನೋ ಎಂದು ಒಂದು ಕಡೆ ಸಂಶಯ ಸೃಷ್ಟಿಯಾಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಆ ಮಾತನ್ನು ತಾವು ವಾಪಸ್ ತೆಗೆದುಕೊಳ್ಳಬೇಕು. ತಾವು Senior person ಇದ್ದೀರಿ, ನೀವು ಈ ತರಹ ಮಾತನಾಡಿದರೆ, allegation ಮಾಡಿದರೆ, ಆ ಕೀರ್ತಿ ಅವರಿಗೆ ಹೋಗುತ್ತದೆ, ಇವರಿಗೆ ಹೋಗುತ್ತದೆ ಎಂದರೆ ಸರಿಯಾಗುವುದಿಲ್ಲ.

ಶ್ರೀ ಗೋವಿಂದ ಎಂ.ಕಾರಜೋಳ: ಆ ರೀತಿ ಏನೂ ಇಲ್ಲ. ಆದರೆ ಒಂದೇ ಒಂದು ಸಮಸ್ಯೆ ಏನೆಂದರೆ, ತಾವೂ ಹಾಗೂ ನಾನೂ ಒಂದೇ ಜಿಲ್ಲೆಯಿಂದ ಬಂದಂಥವರು. ಪ್ರತಿ ಹಳ್ಳಿಯ ವಿಚಾರ ಗೊತ್ತಿದೆ. ಉದ್ಯೋಗ ಖಾತ್ರಿಗೆ ಏನಾಗಿದೆಯೆಂದರೆ, ಜನಗಳು ಬರುತ್ತಿಲ್ಲ. ಅದಕ್ಕಿಂತಲೂ ಹೊರಗಡೆ ಹೆಚ್ಚಿನ ರೇಟ್ ಕೂಲಿ ಸಿಗುತ್ತಿದೆ. ಈಗ ಮಾನ್ಯ ನಾಡಗೌಡರೆ, ಅವರ ಹೊಲದಲ್ಲಿ

200 ರೂ.ಗಿಂತಲೂ ಕನಿಷ್ಠ ಕೂಲಿ ಏನೂ ಕೊಡುತ್ತಿಲ್ಲ. ಇವತ್ತು ನಮ್ಮ ಸರ್ಕಾರದ ರೇಟ್ ಕಡಿಮೆ ಇರುವುದರಿಂದ ಯಾರೂ ಬರುವುದಿಲ್ಲ. ಈ ಕಾರಣಕ್ಕಾಗಿ ಕಡಿಮೆಯಾಗುತ್ತಿದೆ. Implementation ನಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಣ್ಣಪುಟ್ಟ ರಾಜಕಾರಣ ಇರುತ್ತವೆ. ಅವರು ಇದ್ದಾಗಲೂ ಇದ್ದಾವೆ, ನಾವೂ ಇದ್ದಾಗಲೂ ಇದ್ದಾವೆ, ಮುಂದೆಯೂ ಇರುತ್ತವೆ. ಅದೇನು ಇವತ್ತಿಗೇ end ಆಗುವಂಥದ್ದು ಅಲ್ಲ. ಆದರೆ ಅದರೆಲ್ಲದರ ಮಧ್ಯೆ, ಸರಿಪಡಿಸಿ ಮಾಡಲು ನಾವು ಪ್ರಯತ್ನ ಮಾಡಬೇಕು. ಆದರೆ ತಾವು ಕೇಂದ್ರ ಸರ್ಕಾರಕ್ಕೆ credit ಬರುತ್ತದೆ, ಅದಕ್ಕೆ ಮಾಡುತ್ತಿಲ್ಲ ಎಂದು ತಾವು ಹೇಳುತ್ತೀರಿ. ಆದರೆ ಆ ರೀತಿ ಇಲ್ಲ. ಕೇಂದ್ರ ಸರ್ಕಾರ ಪುಕ್ಕಟೆಯಾಗಿ ಕೊಡುವುದಿಲ್ಲ. ಎಲ್ಲಾ ರಾಜ್ಯಗಳಿಗೂ ಸಿಗುವ ಹಾಗೆ ರೀತಿ ನಮಗೂ ಪಾಲೂ ಸಿಗುತ್ತದೆ. ಎಲ್ಲಾ ರಾಜ್ಯಗಳಿಗೂ ಕೊಡುವ ರೀತಿ ನಮಗೂ ಅನುದಾನ ಕೊಡುತ್ತಾರೆ. ಅದರಲ್ಲೇನೂ ವ್ಯತ್ಯಾಸವಿಲ್ಲ.

ಶ್ರೀ ಎಂ.ಬಿ.ಪಾಟೀಲ್(ಬಬಲೇಶ್ವರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾರಜೋಳರವರು ಹೇಳಿದ ಹಾಗೆ ಮೊದಲು ಕಬ್ಬಿನ ಗದ್ದೆಯಲ್ಲಿ, ದ್ರಾಕ್ಷಿ ತೋಟದಲ್ಲಿ 200 ರೂಪಾಯಿ ಕೂಲಿ ಇದೆ. ಆದರೆ ನಾವು ಬಿಜಾಪುರದವರು, ಗುಲ್ಬರ್ಗಾದವರು, ಮಹಾರಾಷ್ಟ್ರದ ರತ್ನಗಿರಿ ಮತ್ತು ಗೋವಾ ಆ ಕಡೆ ಈ ಕಡೆ ಹೋಗುತ್ತೇವೆ. ಅಲ್ಲಿಯೂ ಕೂಡ ಬರ ಇದೆ. ಈ situation ನಲ್ಲಿ NREGS Should not have shortfall. ಮುದ್ದೇಬಿಹಾಳ್‌ನಲ್ಲಿ ಕಬ್ಬಿನ ಗದ್ದೆಗಳೆಲ್ಲವೂ ಒಣಗಿ ಹೋಗಿವೆ. ಅದನ್ನೆಲ್ಲವನ್ನೂ ದನಕರುಗಳಿಗೆ ತೆಗೆದುಕೊಳ್ಳಿ ಎಂದು force ಮಾಡುತ್ತಿಲ್ಲವೇ? ಮೇವು ಆಗುತ್ತಿಲ್ಲ ಕಬ್ಬಿನ ಗದ್ದೆಗಳನ್ನು ಖರೀದಿ ಮಾಡಿ ಎಂದು ಕೇಳುತ್ತಿದ್ದಾರೆ. ಈಗ NREGS is very valid and it should be successful. ಆದಕ್ಕೆ ಏನಾದರೂ additional programmes ಮಾಡಿ you should make it successful.

ಶ್ರೀ ಗೋವಿಂದ ಎಂ.ಕಾರಜೋಳ: ನಾನು ಹೇಳುವುದೇನೆಂದರೆ, ಇವತ್ತು ಕೇಂದ್ರ ಸರ್ಕಾರಕ್ಕೆ credit ಬರಬಾರದು ಎಂದು ರಾಜ್ಯದಲ್ಲಿ ಆ ರೀತಿ ಯಾವುದೇ ಕಾರ್ಯಕ್ರಮಗಳನ್ನು ಅಡೆತಡೆ ಮಾಡತಕ್ಕದ್ದು ಇಲ್ಲ. ಜನ ಬರುತ್ತಿಲ್ಲ ಎನ್ನುವುದಕ್ಕೆ ಕಾರಣ ಹೇಳಿದೆ. ಹೊರಗಡೆ ಹೆಚ್ಚಿನ ಕೂಲಿ ಸಿಗುತ್ತಿದೆ. ಇವತ್ತು ನಿಮ್ಮ ಊರಿನಲ್ಲಿ ಎಷ್ಟು ಮಂದಿ ಕಳುಹಿಸುತ್ತೀರಿ ನಾಳೆ ಮುಂಜಾನೆಯೇ ಸರ್ಕಾರದಿಂದ ಸರ್ವೆಗೆ ಬರುತ್ತೇವೆ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್:Normal course ನಲ್ಲಿ 200–300 ರೂಪಾಯಿ ಇತ್ತು. ಈ ಬರ ಪರಿಸ್ಥಿತಿಯಲ್ಲಿ ರತ್ನಗಿರಿಗೂ ಹೋಗುವ ಹಾಗೆ ಇಲ್ಲ, ಗೋವಾಕ್ಕೂ ಹೋಗುವುದಕ್ಕೂ ಆಗುವುದಿಲ್ಲ. ಅಲ್ಲಿಯೂ ಬರ ಇದೆ.

ಶ್ರೀ ಗೋವಿಂದ ಎಂ.ಕಾರಜೋಳ: ನಾನು ಜನ ಬರುತ್ತಿಲ್ಲ ಎನ್ನುವುದರ ಬಗ್ಗೆ ಅಷ್ಟೇ ಹೇಳಿದೆ. ಇದರಲ್ಲಿ ರಾಜಕಾರಣ ಇಲ್ಲ. ನಮಗೆ ಕೇಂದ್ರ ಸರ್ಕಾರ ಕೊಟ್ಟಿರುವಂಥ ಹೆಚ್ಚು ಹಣ ಬಳಸಿಕೊಂಡರೆ ರಾಜ್ಯಕ್ಕೆ ಹೆಚ್ಚು ಅನುಕೂಲವಾಗುತ್ತದೆ. ರಾಜ್ಯದ ಅಭಿವೃದ್ಧಿ ಆಗುತ್ತದೆ. ಅದನ್ನು ತೆಗೆದುಕೊಳ್ಳಲು ಸರ್ಕಾರ ತಯಾರಿದೆ. ಆದರೆ ಜನರು ಬರುತ್ತಿಲ್ಲ. ನಿಮ್ಮಲ್ಲಿ 300 ರೂಪಾಯಿ ಕೊಟ್ಟರೆ, ಅದಕ್ಕಿಂತ ಹೆಚ್ಚಾಗಿ ನಮ್ಮಲ್ಲಿ 400 ರೂಪಾಯಿ ಕೊಡಬೇಕಾಗುತ್ತದೆ. 400 ರೂಪಾಯಿ ಕೊಡದಿದ್ದರೆ ಯಾರೂ ಬರುವುದಿಲ್ಲ.

ಶ್ರೀ ಸಿ.ಎಸ್.ನಾಡಗೌಡ: ಮಾನ್ಯ ಅಧ್ಯಕ್ಷರೆ, ಸ್ವಲ್ಪ ಸರ್ಕಾರ ಚುರುಕುಗೊಳ್ಳಲಿ ಎನ್ನುವ ಅರ್ಥದಲ್ಲಿ ನಾನು ಹೇಳಿದೆ. ನಾನೇನೂ ಸರ್ಕಾರ ಮಾಡುವುದಿಲ್ಲ ಎಂದು ಹೇಳುತ್ತಿಲ್ಲ. ನನಗೆ ಗೊತ್ತಿದೆ. ಮಾನ್ಯ ಕಾರಜೋಳ ಸಾಹೇಬರು, ಬಚ್ಚೇಗೌಡ ಸಾಹೇಬರು, ನಾವೇನು ಅನುಭವಿಸುತ್ತೇವೆ, ಎಲ್ಲರೂ ಸರಿಸಮಾನವಾಗಿ ಅದನ್ನೇ ಅನುಭವಿಸುತ್ತೇವೆ. ಆದರೆ ಚುರುಕು ಮುಟ್ಟಿಸುವಂತಹ ಕೆಲಸ ಯಾವಾಗಲೂ ಸರ್ಕಾರದಿಂದ ಆಗಬೇಕು. ಶಾಸಕರುಗಳಿಂದ ಆಗುವುದಿಲ್ಲ. ಈಗ ಓಂಬಡ್ಸ್‌ಮನ್‌ಗಳನ್ನು ನೇಮಿಸಿದ್ದೀರಿ, ಓಂಬಡ್ಸ್‌ಮನ್ ಎಷ್ಟು ಕಡೆ ಹೋಗಿ, inspection ಮಾಡಿ, report ಹಾಕಿ ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ ದಯವಿಟ್ಟು ಇಲ್ಲೇ ನಮಗೆ ಒಂದು table ಮಾಡಿ ಹೇಳಿ. ರಾಜ್ಯದಲ್ಲಿ ಎಷ್ಟು cases ಗೆ conviction ಆಗಿದೆ ಅಥವಾ cases book ಆಗಿದೆ ಎನ್ನುವುದನ್ನು ದಯವಿಟ್ಟು ಹೇಳಿ. This is what I want to say. ಒಂದು ಕಡೆ ನಮ್ಮ commitment ಇರಬೇಕು. ಯಾವ ಯೋಜನೆ ಯಾವ ವರ್ಗಕ್ಕೆ ನೀಡಬೇಕೆಂದು ನಮ್ಮ ಧ್ಯೇಯ ಧೋರಣೆ ಆಗಿದೆ, ನಮ್ಮ ಸಿದ್ಧಾಂತ ಆಗಿದೆ, ಅದನ್ನು ಮುಟ್ಟಿಸತಕ್ಕಂಥ ಜವಾಬ್ದಾರಿ ಕೂಡ ಯೋಜನೆಯಿಂದ ಮಾಡತಕ್ಕಂಥದ್ದು. ಅದರಿಂದ ಜಾರಿಕೊಳ್ಳಲು ಆಗುವುದಿಲ್ಲ. ಅದರಿಂದ ಜಾರಿಕೊಂಡರೆ ಅದರ ಬಗ್ಗೆ ನಮಗೆ seriousness ಇಲ್ಲವೆಂದು ಆಗುತ್ತದೆ. ಈ ಕಾರಣದಿಂದ ಹೇಳಿದೆ ಹೊರತು ಇನ್ನ್ಯಾವುದೇ ಕಾರಣಕ್ಕೂ ಅಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು, ಮಾನ್ಯ ಯಡಿಯೂರಪ್ಪನವರು ನಿಕಟಪೂರ್ವ ಮುಖ್ಯಮಂತ್ರಿಗಳು. ಇವತ್ತು ಹೇಳಿರುವುದನ್ನೆಲ್ಲಾ ನಾನು ಬಹಳ ಗಂಭೀರವಾಗಿ ಆಲಿಸಿದ್ದೇನೆ. ಬಹಳ

ಅರ್ಥಪೂರ್ಣವಾಗಿ ಕೆಲವು ವಿಷಯಗಳನ್ನು ಹೇಳಿದರು. ಈಗ NREGS ನಲ್ಲಿ minimum 100 days ಎಂದು ಇದೆ. ಸುರೇಶ್‌ಕುಮಾರ್‌ಜೀ, it is only minimum 100 days, it is not maximum 100 days. ಆದರೆ ಪ್ರತಿಯೊಂದು ಜಿಲ್ಲಾ ಪಂಚಾಯಿತಿಯ C.E.O.ಗಳಿಗೆ ಇಲ್ಲಿಂದ Circular ಹೋಗಿದೆ. ಏನೆಂದು G.O ಹೋಗಿದೆ ಎಂದರೆ 100 ದಿವಸಗಳಿಗಿಂತ ಹೆಚ್ಚು ಯಾವುದಾದರೂ ಪಂಚಾಯತಿಯಲ್ಲಿ ಒಂದು ಕುಟುಂಬಕ್ಕೆ ಉದ್ಯೋಗ ಕೊಟ್ಟಿದ್ದರೆ ಆ ಹಣವನ್ನು ಮರುಪಾವತಿಸಿಕೊಳ್ಳಬೇಕು ಎನ್ನುವಂತಹ ಒಂದು ನಿರ್ದೇಶನ ಹೋಗಿದೆ. ಇದು ಯಾವ ನ್ಯಾಯ? ಈ ನಿರ್ಧಾರ ಯಾರು ತೆಗೆದುಕೊಂಡರು? ಸರ್ಕಾರ ತೆಗೆದುಕೊಂಡಿದ್ದು ತಾನೇ? ರಾಜ್ಯ ಸರ್ಕಾರಕ್ಕೆ ನೀವು 100 ದಿವಸದ ಹೆಚ್ಚಿನ ಉದ್ಯೋಗವನ್ನು, wagesನ್ನು ಕೊಡಬೇಡಿ ಎಂದು ಎಲ್ಲಿಯೂ ಹೇಳಿಲ್ಲ. ಅದಕ್ಕೆ ಯಡಿಯೂರಪ್ಪ ಸಾಹೇಬರು ಹೇಳಿದರು, ನಮ್ಮ 10 ಸಾವಿರ ಕೋಟಿ ರೂಪಾಯಿ ಖರ್ಚಾದರೂ ಚಿಂತೆ ಇಲ್ಲ, ಬಜೆಟ್‌ನಲ್ಲಿ 1 ಲಕ್ಷ ಚಿಲ್ಲರೆ ಕೋಟಿ ಅಲ್ಲ, 90 ಸಾವಿರ ಕೋಟಿ ಹಣ ಎಂದು ಬೇಕಾದರೆ ಹೇಳೋಣ ಎಂದು ಹೇಳಿದರು. See, it should show some commitment. ಒಮ್ಮೆ ನಾವೂ ಏನಾದರೂ ಮಾಡುತ್ತೇವೆ, ಮಾಡಿಸಿ ತೋರಿಸುತ್ತೇವೆನ್ನುವಂತಹ ಛಲ ಸರ್ಕಾರಕ್ಕೆ ಬೇಕು. ನಾನು ಕಾರಜೋಳರವರು ಹೇಳಿದ ಮಾತನ್ನು ಒಪ್ಪುತ್ತೇನೆ. ಒಂದು ಪ್ರಸಂಗದಲ್ಲಿ 200 ರೂಪಾಯಿಗೆ ನಮ್ಮಲ್ಲಿ ಯಾರೂ ಕೂಲಿಗೆ ಬರುವುದಿಲ್ಲ, ಇದರ ಮೇಲೆ 50 ಅಥವಾ 60 ರೂಪಾಯಿ ಕೊಡಬಾರದೆಂದು ಯಾರು ನಿಮಗೆ ನಿರ್ಬಂಧ ಮಾಡಿದ್ದಾರೆ? Who has stopped you? ಉದ್ಯೋಗ ಖಾತರಿ ಯೋಜನೆಯಡಿ ಹೆಚ್ಚಿನ ಹಣ ನಿಮ್ಮ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಡಬೇಡಿ ಎಂದು ಎಲ್ಲಿ ಹೇಳಿದ್ದಾರೆ? ಮಹಾರಾಷ್ಟ್ರದಲ್ಲಿ ಈಗಾಗಲೇ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮತ್ತೆ ಇಲ್ಲಿ ಏಕೆ ನೀವು ಕೊಡುತ್ತಿಲ್ಲ. ಹೀಗಾಗಿ ಬರ ನಿರ್ವಹಣೆ ಮಾಡುವುದು ಕಷ್ಟವಾಗುತ್ತಿದೆ. ಬರ ಸರಿಸಮಾನವಾಗಿ ನಮ್ಮ ರಾಜ್ಯದಲ್ಲಿ ಪ್ರತಿ 3 ವರ್ಷಗಳಿಗೊಮ್ಮೆ ಬರ ಬೀಳುತ್ತಿದೆ. ಕೇವಲ ಹಾವೇರಿ ಜಿಲ್ಲೆ ಒಂದು ಮಾತ್ರ exception. ಉದಾಸಿಯವರಿಂದಾಗಿ ಅಲ್ಲ. It is because of climatic zone. Climatic zone ಆ ರೀತಿ ಇರುವುದರಿಂದ ಇಷ್ಟೆಲ್ಲಾ ಮಳೆ ಆಗುತ್ತಿರುತ್ತದೆ. ಅಲ್ಲಿ ಏನೆಂದರೆ North-East ಮತ್ತು ಈ ಕಡೆ ಬರುವಂಥ cyclones meet ಆಗುವ point ಇರುವುದರಿಂದ ಪದೇ ಪದೇ ಅಲ್ಲಿ ಮಳೆ ಬೀಳುವ ಸಾಧ್ಯತೆಗಳು ಹೆಚ್ಚಿವೆ. ಈ ಕಾರಣದಿಂದ ಹಾವೇರಿ ಜಿಲ್ಲೆ ಮಟ್ಟಿಗೆ

exception, ಅದನ್ನು ಬಿಟ್ಟರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಸ್ವಲ್ಪ ಮಟ್ಟಿಗೆ, ಸೇಡಂ ತಾಲ್ಲೂಕು, ಇನ್ನುಳಿದ ಎಲ್ಲಾ ಕಡೆ ಬಯಲುಸೀಮೆಯಲ್ಲಿ ಕೂಡ ನಮ್ಮ ಪರಿಸ್ಥಿತಿ, ಗೋಳು ಯಾರಿಗೂ ಹೇಳಿಕೊಳ್ಳುವಂತೆ ಇಲ್ಲ. 3 ವರ್ಷಗಳಿಗೊಮ್ಮೆ ನಾವು ಬರ ಎದುರಿಸಬೇಕು. ಮಾತೆತ್ತಿದರೆ ಎಂ.ಬಿ.ಪಾಟೀಲ್‌ರವರು ಏನು ಹೇಳುತ್ತಾರೆಂದರೆ, 'ಬಿಜಾಪುರದವರು ಬಹಳ ಜಾಣರು' ಎಂದು, ಈ ಮಾತನ್ನು ಮುಖ್ಯಮಂತ್ರಿಯವರು ಬಂದಾಗ ಹೇಳಿದರು. ನಾವು ಯಾವುದಕ್ಕೆ ಜಾಣರಿದ್ದೇವೆ ಎಂದರೆ ಸಂಸಾರ ಮಾಡಿಕೊಳ್ಳುವುದಕ್ಕೆ ಜಾಣರಿದ್ದೇವೆ. 3 ವರ್ಷಕ್ಕೊಮ್ಮೆ ಬರಗಾಲ ಬೀಳುತ್ತದೆ, ಗಂಡಾಂತರವನ್ನು ನಾವು ಎದುರಿಸಲೇಬೇಕು, ಈಗ ಕಾದಿಟ್ಟರೆ ಮುಂದೆ ನಾವು ಜೀವನ ಮಾಡುತ್ತೇವೆ ಎಂದು ನಮ್ಮ ಸಂಸಾರಕ್ಕೆ ನಾವು ಶಾಣತನ ಮಾಡುತ್ತೇವೆ ವಿನಹ ಬೇರೆಯದಕ್ಕೆ ಶಾಣತನ ತೋರಿಸುವುದಿಲ್ಲ. ಆದರೆ ವಾಡಿಕೆಯಲ್ಲಿ ಏನು ಹೇಳುತ್ತಾರೆಂದರೆ 'ಬಿಜಾಪುರದವರು ಬಹಳ ಹುಷಾರು ಮಂದಿ' ಎನ್ನುತ್ತಾರೆ. ನಾವು ಯಾರೂ ಹುಷಾರಲ್ಲ, ನಾವ್ಯಾರು ಜಾಣರಲ್ಲ, ನಮ್ಮ ಸಂಸಾರ ಮಾಡಲಿಕ್ಕೆ ನಮಗೆ ಕಷ್ಟದಲ್ಲಿರುವಂಥ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಜಾಣರಿದ್ದೇವೆ. ಹೀಗಾಗಿ ದಯವಿಟ್ಟು ಸರ್ಕಾರ ಅಲಕ್ಷ್ಯ ವಹಿಸದೇ, ಹೆಚ್ಚು ದುಡ್ಡು ಕೊಡುವಂಥದ್ದನ್ನು ಮಾಡಬೇಕು. ಮೊದಲನೆಯದಾಗಿ NREGS ಮೇಲೆ ಅವಲಂಬನೆ ಆಗಬೇಡಿ. ಸರ್ಕಾರ provision ಮಾಡಿ, ನಾಳೆ ಮುಖ್ಯಮಂತ್ರಿಯವರು ಹೇಳುವಂಥ ಸಂದರ್ಭದಲ್ಲಿ ಅವರು ಆ ಭಾಗದಲ್ಲೇ ಬರುತ್ತಾರೆ, ಅವರ ಹುಬ್ಬಳ್ಳಿ-ಧಾರವಾಡದಲ್ಲಿಯೂ ಕೂಡ ಪರಿಸ್ಥಿತಿ ಗಂಭೀರವಾಗಿದೆ. ಮೊದಲು ಒಂದು ಕಾಲದಲ್ಲಿ ಹುಬ್ಬಳ್ಳಿ-ಧಾರವಾಡ ಎಂದರೆ 'ಮಲೆನಾಡಿನ ಸೆರಗು' ಎಂದು ಹೇಳುತ್ತಿದ್ದರು. ನಾವೆಲ್ಲಾ ಶಾಲೆಯಲ್ಲಿ ಕಲಿಯುವಾಗ 6 ತಿಂಗಳುಗಳ ಕಾಲ ಮಳೆಯನ್ನು ಎದುರಿಸುತ್ತಿದ್ದೆವು. Raincoat ಹಾಕಿಕೊಂಡು ಶಾಲೆಗೆ ಹೋಗುತ್ತಿದ್ದೆವು. ಇವತ್ತಿನ ಪರಿಸ್ಥಿತಿ ಹೇಗಿದೆ ಎಂದರೆ ಮಾರಾಟಕ್ಕೆ raincoatಗಳೇ ಇಲ್ಲ. ಆ ಪರಿಸ್ಥಿತಿ ಇದೆ. ಮೆಣಸಿನಕಾಯಿ, ಗೋವಿನ ಜೋಳ ಬೆಳೆಯುವವರ ಪರಿಸ್ಥಿತಿ ಗಂಭೀರವಾಗಿ ಹೋಗಿದೆ. ಕುಡಿಯುವುದಕ್ಕೆ ನೀರಿಲ್ಲ. ಎಲ್ಲಿಂದ ಬೆಳೆಯುತ್ತಾರೆ? ಮಲಪ್ರಭಾದಲ್ಲಿ ಎಷ್ಟು ಪ್ರಮಾಣದ ನೀರು ಬೇಕೋ ಅಷ್ಟು ಪ್ರಮಾಣದಲ್ಲಿ ನೀರು ಡ್ಯಾಮ್‌ನಲ್ಲಿ ಶೇಖರಣೆ ಆಗುತ್ತಿಲ್ಲ. ಇದು ವಾಸ್ತವಾಂಶ, ಆ ಭಾಗದಿಂದ ಬರುವವರು ದಯವಿಟ್ಟು ಆ ಕಡೆ ಲಕ್ಷ್ಯ ಕೊಡಿ. ನೀವು ಮೊದಲನೆಯದಾಗಿ ಯಾವ ರೀತಿಯಾಗಿ ಉದ್ಯೋಗ ಜನರಿಗೆ ಕೊಡುವುದಕ್ಕೆ ಸಾಧ್ಯ ಅದರ ಬಗ್ಗೆ ಒಂದು ಕಾರ್ಯಕ್ರಮ ರೂಪಿಸಿ, ಜನರು

ವಲಸೆ, ಗುಳೆ ಹೋಗದ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ. ನಮ್ಮಲ್ಲಿ ಗುಳೆ ಎನ್ನುತ್ತಾರೆ, ನಿಮ್ಮ ಕಡೆ ವಲಸೆ ಎನ್ನುತ್ತಾರೆ. ದಯವಿಟ್ಟು, ಇನ್ನೊಂದು ವಿಚಾರ. ಬಹುಶಃ ಯಾರೂ ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ಭಾವಿಸಿ, ತಪ್ಪು ತಿಳಿದುಕೊಳ್ಳದ ರೀತಿಯಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ತಾವು, ನಾವು ಹಾಗೂ ಸಣ್ಣವರಿದ್ದಾಗ, ಶಾಲೆಗೆ ಹೋಗುವಾಗ ಇಲ್ಲಿ ಬಹಳಷ್ಟು ಜನ ಕೊಕ್ಕೋ ಆಟವಾಡಿದ್ದೇವೆ. ಕೊಕ್ಕೋನಲ್ಲಿ ಮುಂದೆ ಕ್ಯಾಚ್ ಮಾಡುವುದು ಕೋ ಕೊಟ್ಟವನ ಜವಾಬ್ದಾರಿಯಾಗಿರುತ್ತದೆ. ದಯವಿಟ್ಟು ಕೊಕ್ಕೋ ಪದ್ಧತಿ ತಪ್ಪಬೇಕು. ಯಾವುದೇ ಸರ್ಕಾರದಲ್ಲಿ, ಈ ಕೋ ಕೊಡುವ ಜವಾಬ್ದಾರಿ ತಪ್ಪಿದಾಗ ನಿಜವಾದ ಕಾರ್ಯಕ್ರಮಗಳ ಅನುಷ್ಠಾನವಾಗುತ್ತದೆ. ಅದರಲ್ಲೇ ನಾವುಗಳೆಲ್ಲರೂ ಬ್ಯುಸಿಯಾಗಿ ಬಿಟ್ಟಿದ್ದೇವೆ. ನಮ್ಮ ನಿಕಟಪೂರ್ವ ಮುಖ್ಯಮಂತ್ರಿಯವರು ಹೇಳುವಾಗ ನನಗನ್ನಿಸಿತು, ಮೂರುವರೆ ವರ್ಷಗಳಿಂದ ಮಾಡುವಾಗ ಇದನ್ನು ನೀವ್ಯಾಕೆ ಆಲೋಚನೆ ಮಾಡಲಿಲ್ಲ? ಇವತ್ತು ಆಲೋಚನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ ಎಂದು ಅನಿಸಿತು. ನೋಡಿ ನಮ್ಮ commitment ಎಲ್ಲಿದೆ? ದಯವಿಟ್ಟು ಈ ಕಡೆ ನಾವು ಹೆಚ್ಚು ಲಕ್ಷ್ಯವನ್ನು ಕೊಡಬೇಕೆಂದು ಹೇಳುತ್ತೇನೆ ಮತ್ತು ಈಗ ನಮ್ಮ ಸ್ನೇಹಿತರಾದಂಥ ಕುಲಕರ್ಣಿಯವರು ಮಾತನಾಡುವಾಗ ಹೇಳಿದರು, ಮಹಾರಾಷ್ಟ್ರದಿಂದ 5 ಟಿ.ಎಂ.ಸಿ. ನೀರನ್ನು ನಾವು ಕೇಳಿದ್ದೇವೆ, ಆದರೆ 2 ಟಿ.ಎಂ.ಸಿ ನೀರನ್ನು ಬಿಡುವುದಕ್ಕೆ ಅವರು ಒಪ್ಪಿದರು, ಕುಡಿಯುವ ನೀರಿನ ತೊಂದರೆ ಇದೆ ಎನ್ನುವಾಗ evaporation ಆಗಿ ಎಲ್ಲಾ ಹೋಗಿ, losses ಆಗಿ ನಮಗೆ ಬಂದು ಮುಟ್ಟಿದ್ದೇ 1.3 ಟಿ.ಎಂ.ಸಿ.. ಮಹಾರಾಷ್ಟ್ರದಲ್ಲಿ ಕೂಡ ಮಳೆ ಇಲ್ಲ. ನಮ್ಮಲ್ಲಿ ಕೂಡ ಮಳೆ ಇಲ್ಲ. ಈ ಪರಿಸ್ಥಿತಿಯನ್ನು ಇವತ್ತಲ್ಲ ನಾಳೆ ಊಹೆ ಮಾಡಿಕೊಳ್ಳಬೇಕಾಗುತ್ತದೆ. ಮಹಾರಾಷ್ಟ್ರದಲ್ಲಿ ಯಾವಾಗಲೂ ಮಳೆ ಇರುತ್ತದೆ ಎನ್ನುವುದನ್ನು ಊಹೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕೆ ನಮ್ಮಲ್ಲಿ ಇರುವಂಥ barrageಗಳಲ್ಲಿ ಕೆರೆ ತುಂಬುವಂಥ ಕೆಲಸಗಳೇನಿವೆ, water harvesting structures ಏನಿದೆ, afforestation ಮಾಡುವಂಥದ್ದು, ಗಿಡಗಂಟೆಗಳನ್ನು ಹಚ್ಚುವ ಕೆಲಸಗಳೇನಿದೆ, ಈ ಕೆಲಸಗಳು ಇವತ್ತು ಜಾಸ್ತಿ ನಡೆಯಬೇಕಾಗಿದೆ. ಇದಕ್ಕೆ ಹೆಚ್ಚು ಮಹತ್ವ ಕೊಡಬೇಕಾಗಿದೆ. ಈ ದಿಸೆಯಲ್ಲಿ ನಾವು ಮುಂದುವರೆದರೆ ಮಾತ್ರ ಬರಗಾಲವನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಹಲವಾರು ವಿಷಯಗಳನ್ನು ಹೇಳಿದ್ದಾರೆ. ಆಹಾರದ ಬಗ್ಗೆ, ಆಹಾರದ ವಿತರಣೆಯಲ್ಲಿ ಏನು ತಾರತಮ್ಯ ಆಗುತ್ತಿದೆ ಎನ್ನುವುದನ್ನು ಹೇಳಿದ್ದಾರೆ. ಸರ್ಕಾರ ಯಾವ ರೀತಿಯಾಗಿ

ಹಣವನ್ನು ಕೊಡುತ್ತದೆ ಎನ್ನುವ ಬಗ್ಗೆ ಹೇಳಿದ್ದಾರೆ. ನನಗೆ ಆಶ್ಚರ್ಯ ಆಯಿತು ಅಧ್ಯಕ್ಷರೆ, ನನಗೆ 1 ವಾರ, 10 ದಿವಸದಿಂದ ಪ್ರತಿಯೊಂದು ಶಾಸಕರ ಮತ ಕ್ಷೇತ್ರಕ್ಕೆ ರೂ.1 ಕೋಟಿ ಬಿಡುಗಡೆ ಮಾಡುವುದಕ್ಕೆ ಆದೇಶ ಮಾಡಿದ್ದೇವೆ ಎಂದು ಹೇಳಿದರು. ನಾವು ಮಾಧ್ಯಮದ ಮುಖಾಂತರ ತಿಳಿದುಕೊಂಡೆವು, newsನಲ್ಲಿ ಕೂಡಾ cover ಆಯಿತು. ನಾನು Costituencyಗೆ ಹೋಗಿ D.C.ಯವರನ್ನು ಕುರಿತು ಒಂದು ಕೋಟಿ ರೂಪಾಯಿ ಬಂದಿದೆಯಂತಲ್ಲ ಏನಾಯಿತು ಎಂದು ಕೇಳಿದೆ. Review meetingನಲ್ಲಿ ಕೇಳುವಾಗ ಇವತ್ತಿನವರೆಗೂ ಒಂದು ರೂಪಾಯಿ ಬಂದಿಲ್ಲ ಎಂದು ಅವರು ಹೇಳಿದರು ಕಂದಾಯ ಮಂತ್ರಿಗಳೇ, ನಮ್ಮಲ್ಲಿ ಇದ್ದಂಥ ಆಸರೆ ಯೋಜನೆಯಲ್ಲಿ ಮನೆ ಕಟ್ಟುವುದಕ್ಕೆ ಇದ್ದಂಥ ಎರಡು ಕೋಟಿ ರೂಪಾಯಿಯನ್ನು, ಅದನ್ನು ಕೂಡ ತಾತ್ಪೂರ್ತಿಕವಾಗಿ adjustment ಮಾಡಿಕೊಂಡು ಬಳಸಿಕೊಳ್ಳಿ ಎಂದು ಹೇಳಿದ್ದಕ್ಕೆ, ಆ ಹಣವನ್ನು ನಾವು ಖರ್ಚು ಮಾಡಿದ್ದೇವೆ ಎಂದು ಡಿ.ಸಿ.ಯವರು ಮಂತ್ರಿಗಳ ಸಮಕ್ಷಮವೇ ಈ ಮಾತನ್ನು ಹೇಳಿದರು. ಬರುವಂಥ grant ಏನೆಂದರೆ CRF. CRFನಲ್ಲಿ ಬೋರ್ ಕೊರೆಯುವುದಕ್ಕೆ ಬರುವುದಿಲ್ಲ, ಪಂಪ್ ಹಾಕಬಹುದು ಆಮೇಲೆ municipal administration ಬಗ್ಗೆ ಹೇಳಬಯಸುತ್ತೇನೆ. ತಾಳಿಕೋಟೆಗೆ ಇನ್ನೊಂದು ಹದಿನೈದು ದಿವಸದಲ್ಲಿ ಇದೇ ರೀತಿ ಮುಂದುವರೆದರೆ ಕುಡಿಯುವುದಕ್ಕೆ ನೀರಿಲ್ಲ, ನದಿಯ ಮೂಲದಿಂದ ನಾರಾಯಣಪುರದಿಂದ ನೀರು ಬರಬೇಕು. ಡ್ಯಾಮ್‌ನಲ್ಲೇ ನೀರಿಲ್ಲ ಎಂದರೆ ತಾಳಿಕೋಟೆಯವರು ಏನು ಮಾಡಬೇಕು? ಸುಮಾರು 30-40 ಬೋರ್ ಕೊರೆಸಿದ್ದೇವೆ. ಅದಕ್ಕೆ ಹಣ ಕೊಡಿ ಎಂದರೆ ಮುನಿಸಿಪಾಲಿಟಿಯಲ್ಲಿ ಹಣ ಕೊಡುವುದಕ್ಕೆ ನಮ್ಮ ಹತ್ತಿರ ದುಡ್ಡಿಲ್ಲ. ನಂತರ ಜಾರಕಿಹೊಳಿ ಸಾಹೇಬರಿಗೆ ಕೇಳಿದ್ದೇವೆ, ನಮಗೆ ಏಕೆ ದುಡ್ಡು ಬರಲಿಲ್ಲ? ಬೇರೆ ಪಂಚಾಯಿತಿಗಳಿಗೆ, ಬೇರೆ ಮುನಿಸಿಪಾಲಿಟಿಗಳಿಗೆ ಬಂದಿದೆ ಎಂದರೆ ನೀವು ಕೇಳಲಿಲ್ಲ, ಅದಕ್ಕೆ ಕೊಟ್ಟಿಲ್ಲ ಎಂದು ಹೇಳಿದರು. ಮೊದಲು ಏನು ಮಾಡುತ್ತಿದ್ದರೆಂದರೆ ಇಂಥ ಪರಿಸ್ಥಿತಿಯನ್ನು ಡಿ.ಸಿ. ವರದಿ ಮೇಲೆ ಪ್ರತಿಯೊಂದು ಮುನಿಸಿಪಾಲಿಟಿಗೆ ಸರಿಸಮಾನವಾಗಿ ಹಂಚುತ್ತಿದ್ದರು. ನಮ್ಮ ಪಕ್ಕದ ಮುನಿಸಿಪಾಲಿಟಿಗೆ ರೂ.40 ಲಕ್ಷ, 50 ಲಕ್ಷ ಬರುತ್ತದೆ. ಈ ಮುನಿಸಿಪಾಲಿಟಿಗೆ ಬರುವುದಿಲ್ಲ. ಇಡೀ ತಾಳಿಕೋಟೆ ಊರೇ ಗುಳೆ ಹೋಗುವ ಪರಿಸ್ಥಿತಿಯಲ್ಲಿದೆ. ತಾಳಿಕೋಟೆ ಸುಮಾರು 25ರಿಂದ 30 ಸಾವಿರ ಜನಸಂಖ್ಯೆ ಇರುವ ಊರು. ಇಡೀ ಊರಿಗೆ ಊರೇ ಗುಳೆ ಹೋಗತಕ್ಕಂತಹ ಪರಿಸ್ಥಿತಿಯಲ್ಲಿದೆ. ಇದರ ಬಗ್ಗೆ ತಾವು ಹೆಚ್ಚು ನಿಗಾ ವಹಿಸಬೇಕು. ಹಣವನ್ನು ಭರಿಸಬೇಕು ಮತ್ತು

ಸುದೀರ್ಘವಾದಂಥ ಆಲೋಚನೆ ಮಾಡಿ ಮುಂದೆ vision ಇಟ್ಟುಕೊಳ್ಳಬೇಕು. ನಮ್ಮ ಹಿರಿಯರು, ಜ್ಞಾನಿಗಳು ಊರಿಗೊಂದು ಕೆರೆ, ಊರಿಗೊಂದು ಗೋಮಾಳ ಎನ್ನುವ visionary ಇಟ್ಟುಕೊಂಡಿದ್ದರು. ಇಷ್ಟೆಲ್ಲಾ ಆಲೋಚನೆ ಅವರ ಹತ್ತಿರ ಇತ್ತು. ಇವತ್ತು ನಾವೆಲ್ಲಿ ಹೋಗುತ್ತಿದ್ದೇವೆ, ಇದ್ದಂತಹ ಬಾವಿಯನ್ನು ಮುಚ್ಚುತ್ತಿದ್ದೇವೆ, ಬೋರ್‌ವೆಲ್ ಕೊರೆಯುತ್ತಿದ್ದೇವೆ, ಇರುವಂಥ ಹೊಳೆ ಮೂಲದಿಂದ ನೀರನ್ನು ತರುವಂಥ MV Scheme ಗಳು ಸರಿಯಾಗಿ ನಡೆಯುತ್ತಿಲ್ಲವೆಂದು ತಿಳಿದುಕೊಂಡು, entire ಪಂಚಾಯಿತಿಗಳು ಮಾಡುತ್ತಿಲ್ಲವೆಂದು ಸರ್ಕಾರ support ಮಾಡದೇ ಅದನ್ನು ಬಂದ್ ಮಾಡುವ ಮಟ್ಟಕ್ಕೆ ಹೋಗಿದ್ದೀರಿ. ದಯವಿಟ್ಟು ಇದರ ಬಗ್ಗೆ Serious ಆಗಿ ಆಲೋಚನೆ ಮಾಡಿ ಎನ್ನುವ ಮಾತನ್ನು ಸರ್ಕಾರಕ್ಕೆ ತಮ್ಮ ಮುಖಾಂತರ ತಿಳಿಸುವುದಕ್ಕೆ ಇಚ್ಛೆಪಟ್ಟು ತಾವು ಕೊಟ್ಟಂಥ ಅವಕಾಶಕ್ಕಾಗಿ ತಮಗೆ ವಂದಿಸುತ್ತಾ ನನ್ನ ಮಾತಿಗೆ ವಿರಾಮವನ್ನು ನೀಡುತ್ತೇನೆ.

10.ಸಭೆಯ ಮುಂದಿಡಲಾದ ಕಾಗದ ಪತ್ರಗಳು

1. ಶ್ರೀ ಸುರೇಶ್ ಕುಮಾರ್, ಕಾನೂನು ಸಚಿವರು (ಶ್ರೀ ಜಗದೀಶ್ ಶೆಟ್ಟರ್, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ)

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:

1. 1957ರ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 10ಕ್ಕೆ ತಿದ್ದುಪಡಿ ಮಾಡಿ ದಿನಾಂಕ: 02.12.2009ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 23 ಸೇಇವಿ 2009
2. 1963ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳ ನಿಯಮ 2ಕ್ಕೆ ತಿದ್ದುಪಡಿ ಮಾಡಿ ದಿನಾಂಕ 27.03.2012ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಡಿಪಿಎಆರ್26ಎಸ್‌ಎಂಆರ್2011
3. 1963ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳ ನಿಯಮ 14ಕ್ಕೆ ತಿದ್ದುಪಡಿ ಮಾಡಿ ದಿನಾಂಕ 12.04.2012ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 15ಎಸ್‌ಎಂಆರ್2010